ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮಾರ್ಚ್ 30 ಸೋಮವಾರ 2026

ಸಂಪುಟ: 46 | ಸಂಚಿಕೆ: 338 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಮೈಸೂರು ಮಿತ್ರ

ಸೋಮವಾರ 30 ಮಾರ್ಚ್ 2026

ಹುಣಸೂರಲ್ಲಿ ದೊರೆತ ಡ್ರಗ್ಸ್ ಎಫ್‌ಎಸ್‌ಎಲ್‌ಗೆ ರವಾನೆ



ಪೊಲೀಸರ ತನಿಖೆ ಮತ್ತಷ್ಟು ಚುರುಕು

ಮೈಸೂರು,ಮಾ.29 (ಬಿಎಲ್‌ಯು) –ಮೈಸೂರು ಜಿಲ್ಲೆ ಹುಣಸೂರಿನಲ್ಲಿ 12 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ ಪ್ರಕರಣದ ಬಗ್ಗೆ ಪೊಲೀಸರು ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಿದ್ದಾರೆ.

ಸುಮಾರು 7.35 ಕೆ.ಜಿ. ತೂಕದ ಮೆಫೆಡ್ರೋನ್ (Mephedrone) ಹಾಗೂ 41 ಕೆ.ಜಿ. ತೂಕದ ಡ್ರಗ್ಸ್ ಕಚ್ಚಾ ವಸ್ತುಗಳು ಸೇರಿದಂತೆ ಒಟ್ಟು 48 ಕೆ.ಜಿ. ತೂಕದ ಮಾದಕ ವಸ್ತುಗಳು ಪತ್ತೆಯಾಗಿತ್ತು. ಮಾದಕ ವಸ್ತುಗಳ ಮಾದರಿಯನ್ನು ಪೊಲೀಸರು ಈಗ ಎಫ್‌ಎಸ್‌ಎಲ್‌ಗೆ ಕಳುಹಿಸಿದ್ದಾರೆ.

ಎಫ್‌ಎಸ್‌ಎಲ್ ವರದಿ ಬಂದ ನಂತರ ಡ್ರಗ್ಸ್ ಬಗ್ಗೆ ನಿಖರ ಮಾಹಿತಿ ದೊರೆಯಲಿದೆ. ಡ್ರಗ್ಸ್ ಹಾಗೂ ಡ್ರಗ್ಸ್ ಕಚ್ಚಾ ವಸ್ತುಗಳ ನಿಖರವಾದ ಹೆಸರೇನು, ಇದು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿದೆ ಎಂಬ ಹಲವು ಮಾಹಿತಿಗಳು ಪ್ರಯೋಗಾಲಯದ ವರದಿಯಿಂದ ಖಾತರಿಯಾಗಲಿದೆ.

ಮೈಸೂರಿನ ವಿವಿ ಧಡೆ ದೊರೆತಿರುವ ಡ್ರಗ್ಸ್‌ಗೂ ಇಲ್ಲಿ ದೊರೆತಿರುವ ಡ್ರಗ್ಸ್‌ಗೂ ಸಾಮ್ಯತೆ ಇರುವ ಬಗ್ಗೆ ಖಾತರಿ ಮಾಡಿಕೊಂಡು ಪೊಲೀಸರು ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಲಿದ್ದಾರೆ.

ಡ್ರಗ್ಸ್ ತಯಾರಿಕೆಯಲ್ಲಿ ತಜ್ಞರಾದ ಇಬ್ಬರು ಸೇರಿದಂತೆ ನಾಲ್ವರು ನಾಪತ್ತೆಯಾಗಿದ್ದು, ಇವರ ಬಂಧನಕ್ಕೆ ಪೊಲೀಸರು ವ್ಯಾಪಕ ಶೋಧ ಕಾರ್ಯ ಆರಂಭಿಸಿದ್ದಾರೆ. ಶೀಘ್ರವೇ ಮೈಸೂರು ಪೊಲೀಸರ ತಂಡ ಮುಂಬೈಗೆ ತೆರಳಲಿದ್ದು, ಅಲ್ಲಿನ ತನಿಖೆಯಿಂದ ಮತ್ತಷ್ಟು ಸ್ಫೋಟಕ ಮಾಹಿತಿಗಳು ಬಯಲಾಗಲಿದೆ.

ರಾಜ್ಯದಲ್ಲಿ ಸೇನೆಗೆ ಸೇರುವವರ ಸಂಖ್ಯೆ ಕಡಿಮೆ



ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ ಸಾಧಕರ ಸಂಭ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಅಭಿನಂದಿಸಲಾಯಿತು.

ಮೇಜರ್ ಜನರಲ್ ಅಹಮದ್ ವಿಷಾದ

ಮೈಸೂರು, ಮಾ.29(ಜಿಎ)–ಭಾರತೀಯ ಸೇನೆಗೆ ಕರ್ನಾಟಕದಿಂದ ಸೇರುವವರ ಪ್ರಮಾಣ ಕಡಿಮೆಯಾಗಿದೆ ಎಂದು ಮೇಜರ್ ಜನರಲ್ ಎಸ್.ಎಂ. ಅಹಮದ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ವಿಶ್ವೇಶ್ವರಯ್ಯ ಡೆವಲಪ್‌ಮೆಂಟ್ ಆರ್ಗನೈಜೇಷನ್ ವತಿಯಿಂದ ಆಯೋಜಿಸಿದ್ದ ಸಾಧಕರ ಸಂಭ್ರಮ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಿಂದ ಮೊದಲು ಚಾಮರಾಜನಗರ, ಕೊಡಗು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಯುವಕರು ಸೇನೆಗೆ ಸೇರ್ಪಡೆಯಾಗುತ್ತಿದ್ದರು. ಆದರೆ ಈಗ ಈ ಪ್ರಮಾಣ ಕಡಿಮೆ ಆಗಿದೆ. ಉತ್ತರ ಭಾರತದ ಹರಿಯಾಣ, ರಾಜಸ್ಥಾನ, ಉತ್ತರ ಪ್ರದೇಶಗಳಲ್ಲಿ ಪ್ರತೀ ಮನೆಯಲ್ಲೂ ಒಬ್ಬರು ಸೇನೆಗೆ ಸೇರುವ ಪರಂಪರೆ ಇದೆ. ರಾಜ್ಯದಲ್ಲೂ ಈ ಮನೋಭಾವ ಬೆಳೆಯಬೇಕು ಎಂದು ಹೇಳಿದರು.

ದೇಶ ಸೇವೆಗೆ ವಿವಿಧ ಮಾರ್ಗಗಳಿವೆ. ಸೇನೆ ಒಂದೇ ದಾರಿ ಅಲ್ಲ.ವೈದ್ಯರು, ಇಂಜಿನಿಯರ್‌ಗಳು, ಪೈಲಟ್‌ಗಳು, ಐಎಎಸ್ ಅಧಿಕಾರಿಗಳು, ವಕೀಲರು, ಪೊಲೀಸರು ಹಾಗೂ ರೈತರು ಕೂಡ ದೇಶಕ್ಕೆ ಸೇವೆ ಸಲ್ಲಿಸುತ್ತಾರೆ. ಒಳ್ಳೆಯ ನಾಗರಿಕರಾಗಿರುವುದೇ ಮಹತ್ವದ ದೇಶಸೇವೆ ಎಂದು ತಿಳಿಸಿದರು.

ಸೇನೆಯ ಜೀವನ ಸಾಹಸಮಯವಾಗಿದೆ. ಅದಕ್ಕೆ ಶಾರೀರಿಕವಾಗಿ ತಯಾರಾಗಬೇಕು. ಸೇನೆಗೆ ಸೇರುವ ವಿಧಾನಗಳ ಬಗ್ಗೆ ವಿವರಿಸಿದ ಅವರು, ಯುಪಿಎಸ್‌ಸಿ ಹಾಗೂ ನಾನ್–ಯುಪಿಎಸ್‌ಸಿ ಪ್ರವೇಶ ಮಾರ್ಗಗಳಿವೆ. ಯುಪಿಎಸ್‌ಇ ಮೂಲಕ ಲಿಖಿತ ಪರೀಕ್ಷೆ, ಎಸ್‌ಎಸ್‌ಬಿ ಹಾಗೂ ವೈದ್ಯಕೀಯ ಪರೀಕ್ಷೆಗಳ ಮೂಲಕ ಆಯ್ಕೆ ನಡೆಯುತ್ತದೆ. ನಾನ್–ಯುಪಿಎಸ್‌ಇ ಪ್ರವೇಶದಲ್ಲಿ ಲಿಖಿತ ಪರೀಕ್ಷೆಯಿಲ್ಲದೆ ಎಸ್‌ಎಸ್‌ಬಿ ಮತ್ತು ವೈದ್ಯಕೀಯ ಪರೀಕ್ಷೆಗಳ ಆಧಾರದಲ್ಲಿ ಆಯ್ಕೆ ಮಾಡಲಾಗುತ್ತದೆ ಎಂದರು.

ಎಲ್ಲರೂ ಚೆನ್ನಾಗಿ ಓದಿ, ಹೆಚ್ಚು ಆಟ ಆಡಿ, ದೈಹಿಕವಾಗಿ ತಯಾರಾಗಿರಿ. ನಿಮ್ಮ ಕನಸುಗಳನ್ನು ಸಾಧಿಸಲು ಶ್ರಮಿಸಿ. ದೇಶಸೇವೆಗೆ ಯಾವ ಕ್ಷೇತ್ರವನ್ನೇ ಆರಿಸಿಕೊಂಡರೂ ಅದು ಗೌರವದಾಯಕ" ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.


ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಾದ ಉಪನ್ಯಾಸಕಿ ಮಾಲಿನಿರಾವ್, ಕೃಷಿಕ ಬಿ.ರಾಧಕೃಷ್ಣ, ಕೆಆರ್‌ಎಸ್ ಕಾರ್ಯಪಾಲಕ ಇಂಜಿನಿಯರ್ ವಿ.ಜಯಂತ್, ಕಾರ್ಯಪಾಲಕ ಇಂಜಿನಿಯರ್ ಕೆ.ಎಂ.ಬಿಂದಿ, ಕೃಷಿ ತಜ್ಞ ಗಿರೀಶ್ ಭದ್ರಗೊಂಡ, ನಿವೃತ್ತ ಯೋಧ ಟಿ.ಆರ್.ಜಯರಾಮು, ಆಕಾಶವಾಣಿಯ ಆರ್.ಲೋಕೇಶ್ವರಿ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ನಿವೃತ್ತ ಇಂಜಿನಿಯರ್ ಟಿ.ಆರ್.ಶಿವರಾಮು, ವಿದೂಷಿ ಕೆ.ಎನ್.ಜಯಲಕ್ಷ್ಮಿ, ಎನ್‌ಸಿಸಿ ಕಮಾಂಡಿಂಗ್ ಆಫೀಸರ್ ಲೆಫ್ಟಿನೆಂಟ್ ಕರ್ನಲ್ ಸಂಜೀವ್, ಎನ್.ಕೇಶವಮೂರ್ತಿ, ಉರಗ ತಜ್ಞ ಸೂರ್ಯಕೀರ್ತಿ ಮತ್ತಿತರರು ಉಪಸ್ಥಿತರಿದ್ದರು.

ಏ.14ರಿಂದ 'ರಜಾ–ಮಜಾ' ಬೇಸಿಗೆ ಶಿಬಿರ

ಮೈಸೂರು: ಮೈಸೂರಿನ ನಟನ ರಂಗಶಾಲೆಯು ಏ.14ರಿಂದ ಮೇ 9ರವರೆಗೆ ರಜಾ–ಮಜಾ ಮಕ್ಕಳ ಬೇಸಿಗೆ ಶಿಬಿರವನ್ನು ಕೃಷ್ಣಮೂರ್ತಿಪುರಂನ ಬಿ.ಎಸ್.ಎಸ್. ವಿದ್ಯೋದಯ (ಭಗಿನಿ ಸೇವಾ ಸಮಾಜ) ಶಾಲೆ ಆವರಣದಲ್ಲಿ ಆಯೋಜಿಸಲಾಗಿದೆ.

ಶಿಬಿರದಲ್ಲಿ ಸತತ 26 ದಿನಗಳ ಕಾಲ ಕರ್ನಾಟಕದ ದೇಸಿ ಜಾನಪದ ಕಲಾ ಪ್ರಕಾರಗಳು, ಹಾಡುಗಾರಿಕೆ, ಕರಕುಶಲ ಕಲೆ, ಸಂವಹನ ಕೌಶಲ, ಅಭಿನಯ, ಸಾಧಕರೊಂದಿಗೆ ಸಂವಾದ, ಕಂಪೆನಿ ಮತ್ತು ಆಧುನಿಕ ನಾಟಕಗಳ ಕುರಿತು ಮಕ್ಕಳಿಗೆ ಸಂಪೂರ್ಣ ಮನೋರಂಜನೆಯೊಂದಿಗೆ ವಿಶಿಷ್ಟ ಪ್ರಾತ್ಯಕ್ಷಿಕೆಗಳ ಮೂಲಕ ರಂಗಭೂಮಿಯಲ್ಲಿ ಪ್ರಖ್ಯಾತರಾದ ಸಾಧಕರನೇಕರು ಮಕ್ಕಳನ್ನು ತರಬೇತಿಗೊಳಿಸಲಿದ್ದಾರೆ. ಮಾ.29ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ನಟನ ರಂಗಶಾಲೆಯಲ್ಲಿ ರಜಾ ಮಜಾದ ಅರ್ಜಿ ವಿತರಣೆ ಮತ್ತು ಪ್ರವೇಶ ಪ್ರಕ್ರಿಯೆ ನಡೆಯಲಿದೆ. ಕಡ್ಡಾಯವಾಗಿ 8 ವರ್ಷದಿಂದ 14 ವರ್ಷದ ಮಕ್ಕಳಿಗೆ ಮಾತ್ರ ಪ್ರವೇಶವಿದ್ದು, ಮಾ.29ರಂದು ಪ್ರವೇಶಾತಿಗೆ ಬರುವಾಗ ಪೋಷಕರು ಮಗುವಿನ ಭಾವಚಿತ್ರದೊಂದಿಗೆ ಜನನ ಪ್ರಮಾಣ ಪತ್ರ ಅಥವಾ ಆಧಾರ್ ಕಾರ್ಡ್ ಪ್ರತಿ ತರತಕ್ಕದ್ದು. ಮೊದಲು ಬಂದವರಿಗೆ ಆದ್ಯತೆ. ಹೆಚ್ಚಿನ ವಿವರಗಳಿಗೆ 7259537777, 9480468327, 9845595505 ಸಂಪರ್ಕಿಸಬಹುದು.

ಏ.2ರಿಂದ ಅಖಂಡ ಭಾರತ ಶಿವ ಸಹಸ್ರನಾಮ ಪಾರಾಯಣ ಮಹಾಯಜ್ಞ



ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮಿ

ಮೈಸೂರು,ಮಾ.29–ತಲಕಾಡು ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನಂ ಶುಖ–ಶಂಕರ ಪೀಠದ ವತಿಯಿಂದ ಭಾಗವತೀಯ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮಿಗಳ ಆಶೀರ್ವಾದದೊಂದಿಗೆ ಏ.2ರಿಂದ ಅಖಂಡ ಭಾರತ ಶಿವ ಸಹಸ್ರನಾಮ ಪಾರಾಯಣ ಮಹಾಯಜ್ಞ ಜರುಗಲಿದೆ

ಈ ಮಹಾಯಜ್ಞದಲ್ಲಿ ಜಾತಿ, ಮತ, ಪಂಥಗಳ ಭೇದವಿಲ್ಲದೆ ಸಾರ್ವಜನಿಕರೆಲ್ಲರೂ ಭಾಗವಹಿಸಬಹುದಾಗಿದೆ. ಶಿವ ಸಹಸ್ರನಾಮದ ಜೊತೆಗೆ ಶ್ರೀ ವಿಷ್ಣು ಸಹಸ್ರನಾಮ ಹಾಗೂ ಶ್ರೀ ಲಲಿತಾ ಸಹಸ್ರನಾಮಗಳ ವಿಶೇಷ ಉಪದೇಶವನ್ನು ಮಠದ ವತಿಯಿಂದ ನೇಮಿಸಲ್ಪಟ್ಟ ಪ್ರಾಜ್ಞರಿಂದ ನೆರವೇರಿಸಲಾಗುತ್ತದೆ. ಈ ಆಧ್ಯಾತ್ಮಿಕ ಅವಕಾಶವನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಂಡು ಶಿವನ ಕೃಪೆಗೆ ಪಾತ್ರರಾಗಬೇಕು.

ಧಾರ್ಮಿಕ ಕಾರ್ಯಕ್ರಮಗಳು ಮನಸ್ಸಿಗೆ ಶಾಂತಿ ನೀಡುವುದಲ್ಲದೆ ಸಮಾಜದಲ್ಲಿ ಒಗ್ಗಟ್ಟನ್ನು ಮೂಡಿಸುತ್ತವೆ. ಈ ಅಖಂಡ ಪಾರಾಯಣದಲ್ಲಿ ಎಲ್ಲರೂ ಭಕ್ತಿಯಿಂದ ಪಾಲ್ಗೊಂಡು ಮಂತ್ರೋಪದೇಶವನ್ನು ಪಡೆದು ಪುನೀತರಾಗಬೇಕು. ಮಠಕ್ಕೆ ನೇರವಾಗಿ ಬರಲು ಸಾಧ್ಯವಾಗದ ಭಕ್ತಾದಿಗಳಿಗಾಗಿ ಆನ್‌ಲೈನ್ ತರಗತಿಗಳ ವ್ಯವಸ್ಥೆ ಮಾಡಲಾಗಿದೆ. ಭಕ್ತರು ತಮ್ಮ ಮನೆಯಿಂದಲೇ ಈ ಪವಿತ್ರ ಪಾರಾಯಣದಲ್ಲಿ ಪಾಲ್ಗೊಂಡು ಪ್ರಯೋಜನ ಪಡೆಯಬಹುದು. ಹೆಸರು ನೋಂದಾಯಿಸಲು ಅಥವಾ ಹೆಚ್ಚಿನ ವಿವರಗಳಿಗೆ ಮಠದ ಆಡಳಿತ ಮಂಡಳಿಯ ವಿಜಯ್‌ಕುಮಾರ್ (8147243997), ಸುಹಾಸ್ ಶಾಸ್ತ್ರಿ (6362328434) ಹಾಗೂ ದೀಪಕ್ (8197412028) ಅವರನ್ನು ಸಂಪರ್ಕಿಸುವಂತೆ ವಿಪ್ರ ಮುಖಂಡರೂ ಆದ ಕಾಂಗ್ರೆಸ್ ಮುಖಂಡ ಹೆಚ್.ವಿ.ರಾಜೀವ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವಕ ನಾಪತ್ತೆ




ಮೈಸೂರು,ಮಾ.29–ಸೈಯ್ಯದ್ ಮಹಮದ್ ಇರ್ಫಾನ್ ಎಂಬ 32 ವರ್ಷದ ವ್ಯಕ್ತಿ ಕಾಣೆಯಾಗಿರುವುದಾಗಿ ಅವರ ಪಿರ್ಯಾದಿ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ವಯಸ್ಸು ಸುಮಾರು 32 ವರ್ಷ, ದುಂಡು ಮುಖ, ಬಿಳಿ ಮೈಬಣ್ಣ, ಸಾಧಾರಣ ಮೈಕಟ್ಟು, ಸುಮಾರು 5.6 ಅಡಿ ಎತ್ತರ, ಕಪ್ಪು ಬಣ್ಣದ ಟ್ರ್ಯಾಕ್ ಪ್ಯಾಂಟ್ ಮತ್ತು ಗ್ರೇ ಕಲರ್ ಟಿ–ಶರ್ಟ್ ಧರಿಸಿರುತ್ತಾರೆ. ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಭಾಷೆ ಮಾತನಾಡುತ್ತಾರೆ. ವ್ಯಕ್ತಿಯ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಕಂಟ್ರೋಲ್ ರೂಂ: 112, 0821–2418339, 0821–2452200, ನಜರಬಾದ್ ಠಾಣೆ: 0821–2418308 ಸಂಪರ್ಕಿಸಿ ಮಾಹಿತಿ ನೀಡುವುದಾಗಿ ನಜರ್‌ಬಾದ್ ಪೊಲೀಸ್ ಠಾಣೆ ಸ್ಟೇಷನ್ ಹೌಸ್ ಆಫೀಸರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ಜೆಎಲ್‌ಬಿ ರಸ್ತೆಯ ತುಳಸಿದಾಸ್ ಮೋಹನ್‌ದಾಸ್ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಬಳಿ ನಂದಿನಿ ಕ್ಷೀರ ಕೇಂದ್ರವನ್ನು ಮೈಮುಲ್ ಅಧ್ಯಕ್ಷ ಕೆ.ಈರೇಗೌಡ ಉದ್ಘಾಟಿಸಿದರು ಈ ವೇಳೆ ಮೈಮುಲ್ ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರಾದ ಎ.ಟಿ.ಸೋಮಶೇಖರ, ಕೆ.ಜಿ.ಮಹೇಶ್, ಕೆ.ಉಮಾಶಂಕರ್, ಸಿ.ಓಂ.ಪ್ರಕಾಶ್, ಆರ್.ಚೆಲುವರಾಜು, ನಿರ್ದೇಶಕರಾದ ಲೀಲಾ ಬಿ.ಕೆ.ನಾಗರಾಜು, ನೀಲಾಂಬಿಕೆ ಮಹೇಶ್ ಕುರಹಟ್ಟಿ, ಶಿವಗಾಮಿ ಷಣ್ಮುಗಂ, ಬಿ.ಎನ್.ಸದಾನಂದ, ಬಿ.ಗುರುಸ್ವಾಮಿ, ಮಾರುಕಟ್ಟೆ ವ್ಯವಸ್ಥಾಪಕ ಎಚ್.ಕೆ.ಜಯಶಂಕರ್, ಮಾರುಕಟ್ಟೆ ಸಿಬ್ಬಂದಿ ವರ್ಗ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಏ.1ರಂದು ಬೆಳದಿಂಗಳ ಸಂಗೀತ





ಮೈಸೂರು,ಮಾ.29–ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಏ.1ರಂದು ಸಂಜೆ 6 ಗಂಟೆಗೆ ಬೆಳದಿಂಗಳ ಸಂಗೀತ–290ರ ಅಂಗವಾಗಿ ಉಸ್ತಾದ್ ಡಾ. ಮೊಹಸಿನ್ ಖಾನ್ ಅವರಿಂದ ಸುತ್ತೂರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಿತಾರ್ ವಾದನ ಏರ್ಪಡಿಸಲಾಗಿದೆ.

ಉಸ್ತಾದ್ ಡಾ. ಮೊಹಸಿನ್ ಖಾನ್, ಧಾರವಾಡ ನಗರದ ನಿವಾಸಿ. ಧಾರವಾಡ ಘರಾನಾದ 7ನೇ ತಲೆಮಾರಿನ ಪ್ರಮುಖ ಸಿತಾರ್ ವಾದಕರಾಗಿದ್ದಾರೆ. ಸಿತಾರ್ ರತ್ನ ರಹಿಮತ್ ಖಾನ್ ಅವರ ಮರಿಮೊಮ್ಮಕ್ಕಳು. ಐದನೇ ವಯಸ್ಸಿನಲ್ಲಿಯೇ ಅಜ್ಜ ದಿವಂಗತ ಉಸ್ತಾದ್ ಅಬ್ದುಲ್ ಕರೀಮ್ ಖಾನ್ ಅವರಿಂದ ಸಿತಾರ್ ಕಲಿಕೆಯನ್ನು ಆರಂಭಿಸಿದರು. ಬಳಿಕ ತಂದೆ ಉಸ್ತಾದ್ ಹಮೀದ್ ಖಾನ್‌ರವರಿಂದ ಹೆಚ್ಚುವರಿ ತರಬೇತಿ ಪಡೆದು ಇಂದು ದೇಶಾದ್ಯಂತ ಪ್ರಸಿದ್ಧರಾಗಿದ್ದಾರೆ.

ಕಠಿಣ ಪರಿಶ್ರಮ, ಸಮಯ ನಿರ್ವಹಣೆ ಇದ್ದರೆ ಐಎಎಸ್‌ಗೆ ಆಯ್ಕೆ ಖಚಿತ

ಐಎಎಸ್‌ನಲ್ಲಿ 53ನೇ ರ್‍ಯಾಂಕ್ ಪಡೆದ ಕಿರಣ್ ಕಮತೆ ಅಭಿಪ್ರಾಯ

ಮೈಸೂರು, ಮಾ.29(ಬಿಎಲ್‌ಯು)–ಯುಪಿಎಸ್‌ಸಿಗೆ ಆಯ್ಕೆಯಾಗಲು ಪ್ರತಿ ವರ್ಷ 12 ರಿಂದ 13 ಲಕ್ಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲಿದ್ದು, ಪ್ರಿಲಿಮ್ಸ್ ನಲ್ಲಿ ಸಾವಿರಾರು ಅಭ್ಯರ್ಥಿಗಳು ಮಾತ್ರ ಆಯ್ಕೆಯಾಗುತ್ತಾರೆ. ಕಠಿಣ ಪರಿಶ್ರಮ, ಸಮಯ ನಿರ್ವಹಣೆ, ಸ್ಪಷ್ಟ ಉತ್ತರ ಬರೆಯುವ ಚಾಕಚಕ್ಯತೆ ಹೊಂದಿದ್ದರೆ ಯುಪಿಎಸ್‌ಸಿಗೆ ಆಯ್ಕೆಯಾಗಬಹುದು ಎಂದು ಯುಪಿಎಸ್ ಸಿಯಲ್ಲಿ 53ನೇ ರ್‍ಯಾಂಕ್ ಪಡೆದು ಐಎಎಸ್‌ಗೆ ಆಯ್ಕೆಯಾಗಿರುವ ಕಿರಣ್ ಕಮತೆ ಅವರು ಯುವ ಅಭ್ಯರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ಕಾವೇರಿ ಸಭಾಂಗಣದಲ್ಲಿ ಐಎಎಸ್ ಮತ್ತು ಕೆಎಎಸ್ ತರಬೇತಿ ಶಿಬಿರಾರ್ಥಿಗಳಿಗೆ ಆಯೋಜಿಸಿದ್ದ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದ ಅವರು, ಈ ಪರೀಕ್ಷೆ ಅತ್ಯಂತ ಕಠಿಣವಾಗಿದ್ದು, ನನಗೆ ಸಾಧ್ಯವಾಗುವುದಿಲ್ಲ ಎಂಬ ಮನೋಭಾವದಿಂದ ಮುಕ್ತರಾಗಿ ಯಶಸ್ವಿನ ಗುರಿ ಹೊಂದಬೇಕು ಎಂದು ಸಲಹೆ ನೀಡಿದರು.

ಸರಿಯಾದ ಯೋಜನೆ, ತಂತ್ರ ಹಾಗೂ ನಿರಂತರ ಪರಿಶ್ರಮ ಇದ್ದರೆ ಯಾರಾದರೂ ಯಶಸ್ಸು ಸಾಧಿಸಬಹುದು ಎಂದು ಕಿರಣ್ ಕಮತೆ ಅಭಿಪ್ರಾಯಪಟ್ಟರು.

2020ರಿಂದ ನಾನು ಯುಪಿಎಸ್‌ಸಿಗೆ ಸಿದ್ಧತೆ ಆರಂಭಿಸಿದ್ದೆ. ಮೊದಲ ಎರಡು ಪ್ರಯತ್ನ ವಿಫಲವಾದರೂ ಹಿಮ್ಮೆಟ್ಟದೆ ಮುಂದುವರೆದ ಫಲವಾಗಿ ನಾನು ಆಯ್ಕೆಯಾದೆ ಎಂದು ಹೇಳಿದರು.



ಕರ್ನಾಟಕ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಐಎಎಸ್, ಕೆಎಎಸ್ ತರಬೇತಿ ಶಿಬಿರಾರ್ಥಿಗಳಿಗೆ ಆಯೋಜಿಸಿದ್ದ ವಿಶೇಷ ಉಪನ್ಯಾಸದಲ್ಲಿ ಕಿರಣ್ ಕಮತೆ ಮಾತನಾಡಿದರು.

> "25ರಿಂದ 30 ನಿಮಿಷಗಳ ವ್ಯಕ್ತಿತ್ವ ಪರೀಕ್ಷೆ, ಅಭ್ಯರ್ಥಿಯ ಶಿಕ್ಷಣ, ಹವ್ಯಾಸಗಳು, ಸಾಧನೆಗಳು ಸೇರಿದಂತೆ ಡಿಎಎಫ್ ಆಧರಿಸಿ ಪ್ರಶ್ನೆ ಕೇಳಲಾಗುತ್ತದೆ. ಗ್ರಾಮೀಣ ಹಾಗೂ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೂ ಕೂಡ ಸಮಾನ ಅವಕಾಶಗಳಿದ್ದು, ನಿರಂತರ ಪರಿಶ್ರಮ ಹಾಗೂ ಶಿಸ್ತು ಇದ್ದರೆ ಯಾರಾದರೂ ಯಶಸ್ಸು ಸಾಧಿಸಬಹುದು.
> –ಕಿರಣ್ ಕಮತೆ

ಮೇನ್ಸ್‌ನಲ್ಲಿ ಒಟ್ಟು 9 ಪೇಪರ್‌ಗಳಿದ್ದು, 1750 ಅಂಕಗಳಿಗೆ ಪರೀಕ್ಷೆ ನಡೆಯುತ್ತದೆ. ಇದಕ್ಕೆ 275 ಅಂಕಗಳ ಸಂದರ್ಶನವನ್ನು ಸೇರಿಸಿ 2025 ಅಂಕಗಳ ಆಧಾರದ ಮೇಲೆ ರ್‍ಯಾಂಕ್ ನಿಗದಿಯಾಗುತ್ತದೆ ಎಂದು ಮಾಹಿತಿ ನೀಡಿದರು.

ಮೇನ್ಸ್‌ನಲ್ಲಿ ಸಮಯ ನಿರ್ವಹಣೆ ಬಹಳ ಮುಖ್ಯವಾಗಿದ್ದು, ಪ್ರತಿ ಪ್ರಶ್ನೆಗೆ ಸೀಮಿತ ಸಮಯದಲ್ಲಿ ಸ್ಪಷ್ಟ ಉತ್ತರ ಬರೆಯುವ ಅಭ್ಯಾಸ ಕರಗತ ಮಾಡಿಕೊಳ್ಳಬೇಕು. 10 ಅಂಕಗಳ ಪ್ರಶ್ನೆಯನ್ನು ಕೇವಲ ಏಳೆಂಟು ನಿಮಿಷದಲ್ಲಿ ಬರೆಯುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಎಂದು ಸಲಹೆಯಿತ್ತರು.

ವಿಶೇಷ ಉಪನ್ಯಾಸ ಕಾರ್ಯಕ್ರಮದ ವೇದಿಕೆಯಲ್ಲಿ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕಾರ್ಯಕ್ರಮದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಉಪಸ್ಥಿತರಿದ್ದರು.

ಬಾಲಂಗೋಚಿ ಮಕ್ಕಳ ಬೇಸಿಗೆ ಶಿಬಿರ

ಮೈಸೂರು,ಮಾ.29–ಅದಮ್ಯ ರಂಗಶಾಲೆಯು ಕಳೆದ ಎಂಟು ವರ್ಷಗಳಿಂದ ಮೈಸೂರಿನ ರಂಗಭೂಮಿ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದೆ. ಮಕ್ಕಳ ಹಾಗೂ ವಯಸ್ಕರಿಗೆ ಅಭಿನಯ ತರಬೇತಿ ಕಾರ್ಯಗಾರ, ನಾಟಕೋತ್ಸವ, ನಾಟಕ ಪ್ರದರ್ಶನ ಹಾಗೂ ಬೇಸಿಗೆ ಶಿಬಿರಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

ಮುಂದಿನ ಹೆಜ್ಜೆಯಾಗಿ 5ರಿಂದ 13 ವರ್ಷದ ಮಕ್ಕಳಿಗಾಗಿ 30 ದಿನಗಳ ಬಾಲಂಗೋಚಿ ಮಕ್ಕಳ ಬೇಸಿಗೆ ಶಿಬಿರವನ್ನು ವಿಜಯನಗರ ಮೂರನೇ ಹಂತದಲ್ಲಿರುವ ವಿ. ಕೆ.ಪಬ್ಲಿಕ್ ಸ್ಕೂಲ್ (ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನದ ಎದುರು) ಆಯೋಜಿಸಿದೆ. ಬಾಲಂ ಗೋಚಿ ಮಕ್ಕಳ ಬೇಸಿಗೆ ಶಿಬಿರ ಏ.6ರಂದು ಪ್ರಾರಂಭವಾಗಿ ಮೇ 6ರಂದು ಮುಕ್ತಾಯವಾಗುತ್ತದೆ. ಪ್ರತಿದಿನ ಬೆಳಗ್ಗೆ 10.30ರಿಂದ ಸಂಜೆ 4.30ರವರೆಗೆ ಶಿಬಿರ ನಡೆಯುತ್ತದೆ.

ಪುಟಾಣಿಗಳ ಪುಂಡಾಟ' ಎಂಬ ಅಡಿಬರಹವೇ ಹೇಳುವ ಹಾಗೆ ಒಂದು ತಿಂಗಳ ಕಾಲ ಆಡಿ, ಹಾಡಿ, ಕುಣಿದು, ನಲಿದು, ತರಲೆ ತುಂಟಾಟಗಳ ನಡುವೆ ರಂಗಾಟಗಳು, ರಂಗಗೀತೆಗಳು, ಜನಪದ ಗೀತೆಗಳು, ಭಾವಗೀತೆಗಳು, ದೇಸಿ ಆಟಗಳು, ಚಿತ್ರಕಲೆ, ಮಾಸ್ಕ್ ಮೇಕಿಂಗ್, ಮಕ್ಕಳ ಸಂತೆ, ವರ್ಲಿ ಆರ್ಟ್ಸ್, ಮಕ್ಕಳ ಸಿನಿಮಾ, ಪೇಪರ್ ಕ್ರಾಫ್ಟ್, ವಾಯ್ಸ್ ಕಲ್ಚರ್, ಹೋಳಿಯಾಟ, ಮೈಮ್, ಕಂಗಿಲು ನೃತ್ಯ, ಚಿನ್ನು ಕುಣಿತ, ಪಟ್ಟದ ಕುಣಿತ, ದೊಣ್ಣೆ ವರಸೆ, ಹುಲಿ ಕುಣಿತ, ಪೂಜಾ ಕುಣಿತ, ಕಂಸಾಳೆ, ನಾಟಕಗಳು ಇಷ್ಟೆಲ್ಲಾ ಕಲೆಗಳ ಪರಿಚಯ ಮಾಡಿಕೊಳ್ಳುವುದರ ಜೊತೆಗೆ ಪ್ರದರ್ಶನಕ್ಕೂ ಸಜ್ಜುಗೊಳಿಸಲಾಗುವುದು. ಶಿಬಿರದಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಮಕ್ಕಳು ಮತ್ತು ಅವರ ಪೋಷಕರು ಏ.6ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳ ಬಹುದು. ಗರಿಷ್ಠ 60 ಮಂದಿಗೆ ಅವಕಾಶವಿರುತ್ತದೆ. ಮೊದಲು ಬಂದವರಿಗೆ ಮೊದಲ ಆದ್ಯತೆ. ಹೆಚ್ಚಿನ ಮಾಹಿತಿಗೆ 866010 3141 ಸಂಪರ್ಕಿಸಬಹುದು.

ಕ್ಷುಲ್ಲಕ ವಿಚಾರ: ಮೊಟ್ಟೆ ಅಂಗಡಿಯಲ್ಲಿ ಜಗಳ

ಪ್ರಶ್ನಿಸಿದ ಬಾಲಕನ ಮೇಲೆ ಹಲ್ಲೆ

ಮೈಸೂರು, ಮಾ.29(ಜಿಎ)–ಮೊಟ್ಟೆ ಅಂಗಡಿಯಲ್ಲಿ ಕ್ಷುಲ್ಲಕ ಕಾರಣಕ್ಕೆ ಯುವಕರ ಗುಂಪೊಂದು ಬಾಲಕನ ಮೇಲೆ ಚಾಕುವಿನಿಂದ ಹಲ್ಲೆ ಮಾಡಿರುವುದಾಗಿ ನಗರದ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಾ.23ರಂದು ರಾತ್ರಿ 8 ಗಂಟೆ ಸಂದರ್ಭದಲ್ಲಿ ಮಹದೇವಪುರ ಮುಖ್ಯ ರಸ್ತೆಯಲ್ಲಿರುವ ಮೊಟ್ಟೆ ಅಂಗಡಿ ಮಾಲೀಕನ ಮಗ ಹಾಗೂ ನಾಲ್ವರು ಯುವಕರು ಜಗಳ ಮಾಡುತ್ತಿದ್ದರು. ಇದೇ ವೇಳೆ ಅಂಗಡಿಗೆ ಮೊಟ್ಟೆ ಖರೀದಿಸಲು ಬಂದಿದ್ದ 16 ವರ್ಷದ ಬಾಲಕ, ಏಕೆ ಜಗಳ ವಾಡುತ್ತಿದ್ದೀರಿ ಎಂದು ಸಹಜವಾಗಿ ಕೇಳಿದ್ದಾನೆ. ಇಷ್ಟಕ್ಕೆ ಸಿಟ್ಟಿಗೆದ್ದ ಯುವಕರ ಗುಂಪು ಇದನ್ನು ಕೇಳಲು ನೀನು ಯಾರು ಎಂದು ಏಕಾಏಕಿ ಚಾಕುವಿಂದು ಹಲ್ಲೆ ಮಾಡಿದೆ. ಹಲ್ಲೆಯಿಂದ ಗಾಯಗೊಂಡಿದ್ದ ಬಾಲಕನನ್ನು ಸ್ಥಳೀಯರು ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಈ ಸಂಬಂಧ ಬಾಲಕನ ತಂದೆ ನೀಡಿದ ದೂರಿನನ್ವಯ ಉದಯಗಿರಿ ಠಾಣೆ ಪೊಲೀಸರು ದೂರು ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

ಸರಸ್ವತಿ ನಿಧನ



ಮೈಸೂರು,ಮಾ.29– ಮೈಸೂರಿನ ಚಾಮುಂಡಿಪುರಂ ನಿವಾಸಿ, ತ್ಯಾಗರಾಜ ರಸ್ತೆಯ ಶ್ರೀ ಚಿಕ್ಕಾಂಜನೇಯ ಸ್ವಾಮಿ ದೇವಸ್ಥಾನದ ಅರ್ಚಕರಾಗಿದ್ದ ಲೇಟ್ ಕೃಷ್ಣಸ್ವಾಮಿ ಅವರ ಧರ್ಮಪತ್ನಿ, ಸರಸ್ವತಿ(64) ಅವರು ಭಾನುವಾರ ನಿಧನರಾದರು. ಇವರು ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ(ಮಾ.30) ಮಧ್ಯಾಹ್ನ 12 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನ ಸುಡುವ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.3.2026 ಸೋಮವಾರ, ಮಳೆ ನಕ್ಷತ್ರ: ಉತ್ತರಭಾದ್ರ 18.03.2026ರಿಂದ 30.03.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ– ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಪಿಸಿಓಡಿ ತೊಂದರೆ, ಬೊಜ್ಜು ನಿವಾರಣೆ, ಪಾರ್ಕಿನ್‌ಸನ್ಸ್ ಕಾಯಿಲೆ, ವಸಂತ ವಮನ ದೇಹಶುದ್ಧಿ, ಮೈಗ್ರೇನ್, ತಲೆನೋವು, ಕಿಡ್ನಿ ತಪಾಸಣೆ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಅನ್ನಪೂರ್ಣ ಐ ಹಾಸ್ಪಿಟಲ್:** ಯುಗಾದಿ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಉಚಿತ ಕಣ್ಣಿನ ತಪಾಸಣೆ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, #199 ಸಾಯಿಪಾದಂ, ನ್ಯೂ ಕಾಂತರಾಜ್ ಅರಸ್ ರಸ್ತೆ, ಶಾರದಾದೇವಿ ನಗರ, ಬೆಳಗ್ಗೆ 10 ರಿಂದ.
- **ಶ್ರೀ ಮಹಾವೀರ ಸೇವಾ ಸಂಸ್ಥಾನ್, ಮಹಾವೀರ ಮಂಡಳಿ, ಮೈಸೂರು:** 1008 ಭಗವಾನ್ ಶ್ರೀ ಮಹಾವೀರ ತೀರ್ಥಂಕರರ 2625ನೇ ಜನ್ಮಜಯಂತಿ ಮಹೋತ್ಸವ, ಶ್ರೀ ಮಹಾವೀರ ಅಹಿಂಸಾ ಪ್ರಶಸ್ತಿ ಪ್ರದಾನ ಸಮಾರಂಭ, ಮಾರ್ಗದರ್ಶನ ಹಾಗೂ ಆಶೀರ್ವಾದ : ಶ್ರೀಕ್ಷೇತ್ರ ಕನಕಗಿರಿ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಅವರಿಂದ, ಪ್ರಶಸ್ತಿ ಪುರಸ್ಕೃತರು: ಶಿಕ್ಷಣ ಮತ್ತು ಸ್ವಯಂ ಸೇವಕರಾದ ಶ್ರೀಮತಿ ಸುಜಾತ.ಆರ್.ಶೆಟ್ಟಿ, ಅಧ್ಯಕ್ಷತೆ: ಮೈಸೂರಿನ ದಿಂಗಬರ ಜೈನ ಸಮಾಜದ ಅಧ್ಯಕ್ಷರಾದ ಎಂ.ಆರ್.ಸುನೀಲ್‌ಕುಮಾರ್, ಮುಖ್ಯ ಅತಿಥಿ: ಚಾಮರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ, ಸ್ಥಳ: ಶ್ರೀ ಎಂ.ಎಲ್. ವರ್ಧಮಾನಯ್ಯ ಸ್ಮಾರಕ ಭವನ, ಚಂದ್ರಗುಪ್ತ ರಸ್ತೆ, ಮೈಸೂರು, ಸಂಜೆ 7 ಗಂಟೆಗೆ.
- **ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ರಂಗತಂಡ:** ನಾಡೋಜ ಬೆಳಗಲ್ಲು ವೀರಣ್ಣನವರ 98ನೇ ಹಾಗೂ ಬಿ. ಪುಟ್ಟಸ್ವಾಮಯ್ಯನವರ 130ನೇ ಸವಿನೆನಪಿನ ಪೌರಾಣಿಕ ರಂಗ ಸಂಭ್ರಮ–2026, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವಿದ್ವಾನ್ ವೈ.ಎಂ.ಪುಟ್ಟಣ್ಣಯ್ಯ ಮತ್ತು ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ವಿದ್ವಾನ್ ಕಿರಗಸೂರು ರಾಜಪ್ಪ ಅವರಿಂದ ರಂಗಗೀತೆಗಳು, ಉಪಸ್ಥಿತಿ: ಮೈಸೂರಿನ ಕಾವಾ ಆಡಳಿತಾಧಿಕಾರಿ ಶ್ರೀಮತಿ ನಿರ್ಮಲಾ ಮಠಪತಿ, ರಂಗ ನಿರ್ದೇಶಕರಾದ ಬಿ.ಆರ್.ರವೀಶ್, ಶ್ರೀ.ರಾ.ವ ರಂಗತಂಡದ ನಿರ್ದೇಶಕರಾದ ಎಸ್.ಎನ್. ಶ್ರೀನಿವಾಸ್, ರಂಗಗೌರವ: ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎಸ್.ವೆಂಕಟೇಶಮೂರ್ತಿ ಮತ್ತು ಕೆ.ರಾಮಮೂರ್ತಿರಾವ್ ಅವರಿಗೆ, ಸ್ಥಳ: ಕಿರುರಂಗ ಮಂದಿರ, ಕಲಾಮಂಮದಿರ ಆವರಣ, ಸಂಜೆ 5.30 ರಿಂದ.

ಶ್ರೀರಾಮ ನವಮಿ ಕಾರ್ಯಕ್ರಮಗಳು

- **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ಮೈಸೂರು:** ಶ್ರೀ ಪರಭಾವ ಸಂವತ್ಸರದ 136ನೇ ವರ್ಷದ ಶ್ರೀ ರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಜುಗಲ್‌ಬಂದಿ ವೀಣಾ ಮತ್ತು ಪೀಟಿಲು ವಾದನ, ವಿದ್ವಾನ್ ಜಯಂತಿ ಕುಮರೇಶ್, ವಿದ್ವಾನ್ ಅಕ್ಕರೈ ಶುಭಲಕ್ಷ್ಮಿ, ಮೃದಂಗ–ವಿದ್ವಾನ್ ಅರ್ಜುನ್ ಕುಮಾರ್, ಘಟಂ–ವಿದ್ವಾನ್ ಜಿ.ಎಸ್.ರಾಮಾನುಜಂ, ಸ್ಥಳ: ಶಿವರಾಮಪೇಟೆ, ವಿನೋಬರಸ್ತೆ, ಮೈಸೂರು, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, ಡಾ.ಯು.ಎಂ.ರವಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ : ಡಾ.ಟಿ.ಶಿವಕುಮಾರ್, 6.40–ಪ್ರಾಯೋಜಿತ ಕಾರ್ಯಕ್ರಮ, ಕೃಷಿ ಕ್ಷೇತ್ರದಲ್ಲಿ ಕೋರಮಂಡಲ್ ಅಂತಾರಾಷ್ಟ್ರೀಯ ನಿಗಮದ ಪಾತ್ರ, ಪ್ರಾಯೋಜಕರು –ಕೋರಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ರಂಗಕರ್ಮಿ ಪ್ರಸನ್ನ ಅವರೊಂದಿಗೆ ಡಿ.ಎಸ್.ನಾಗಭೂಷಣ ಅವರು ನಡೆಸಿದ್ದ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಮೇಧ ಮಂಜುನಾಥ್, ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಗೇಮ್ ಷೋ–ಪ್ರಸ್ತುತಿ: ಬಿ.ದಿಗ್ವಿಜಯ್, **ಮಧ್ಯಾಹ್ನ** 12.05 ವನಿತಾ ವಿಹಾರ–ಕಥೆ ಗುಳೆ ಬರೆದು ಪ್ರಸ್ತುತಪಡಿಸುತ್ತಾರೆ ಮಧುರಾ ಕರ್ಣಮ್. ನಂತರ ಲಲಿತಾ ಪಾಟೀಲ ಅವರಿಂದ ಪ್ರಬಂಧ ಕಟ್ಟೆ ಪುರಾಣ. 12.35 ದೇವರನಾಮ, 12.45 ನಮ್ಮ ಆರೋಗ್ಯ –ವೆರಿಕೋಸ್ ವೇಯ್ನ್ಸ್ ಕಾರಣಗಳು ಮತ್ತು ಪರಿಹಾರ ಈ ಕುರಿತು ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಡಾ.ವರದರಾಜು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಡಾ.ಕುಲದೀಪ್ ಎನ್. 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ –ಪ್ರಧಾನಮಂತ್ರಿ Start up India ಯೋಜನೆ ಕುರಿತು ಮಾಹಿತಿ. 1.20 ಭಾವಗೀತೆಗಳು–ಸಂಧ್ಯಾ.ಎಂ.ಎ., 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಜಿ.ಎನ್. ಬಾಲಸುಬ್ರಹ್ಮಣ್ಯಂ–ಹಾಡುಗಾರಿಕೆ, 4.00 ಮಹಿಳಾರಂಗ–ಭಾವಸಂಗಮ, ಭಾವಗೀತೆಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ–ಲಿಖಿತಾ.ಡಿ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ: ಡಾ.ಎಸ್.ಪಿ.ವಿದ್ಯಾಕುಮಾರಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಚಾಮರಾಜನಗರ ತಾಲೂಕು, ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ನಡೆದ ಕೃಷಿ ದೀವಿಗೆ ಬಾನುಲಿ ಸರಣಿಯ ಉದ್ಘಾಟನಾ ಸಮಾರಂಭದ ಬಾನುಲಿ ವರದಿ. ಪ್ರಸ್ತುತಿ–ಆರ್.ಲೋಕೇಶ್ವರಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ: ಯುವ ಸೆಲೆಬ್ರಿಟಿ ಮೈಸೂರಿನ ಉದಯೋನ್ಮುಖ ನಟಿ ಸ್ಪಂದನ ಸೋಮಣ್ಣ ಅವರೊಂದಿಗೆ ಸಂದರ್ಶನ. ಸಂದರ್ಶಕರು–ದಿಗ್ವಿಜಯ್.ಬಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ– ಬಾಂಬೆ.ಎಸ್.ಜಯಶ್ರೀ ಅವರ ಹಾಡುಗಾರಿಕೆಯಲ್ಲಿ ಪಾಪನಾಶಂ ಶಿವನ್ ಅವರ ಕೃತಿಗಳು, 10.00 ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣದ ಪ್ರಸಾರ.



- **ಶ್ರೀ ರಾಮ ಮಂದಿರ, ಜಯನಗರ ಮೈಸೂರು:** 60 ನೇ ವರ್ಷದ ರಾಮೋತ್ಸವ, ಶ್ರೀರಾಮಚಂದ್ರಸ್ವಾಮಿಯವರ ಸೀತಾಕಲ್ಯಾಣ, ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹಗಳ ವಾರ್ಷಿಕೋತ್ಸವ, ಹನಮಂತೋತ್ಸವ ಮತ್ತು ವಸಂತೋತ್ಸವ ಕಾರ್ಯಕ್ರಮ, ಬೆಳಗ್ಗೆ 9ಕ್ಕೆ, ಶ್ರೀ ರುದ್ರ ಹೋಮ, ಸಂಜೆ 6.30 ಕ್ಕೆ ಸರಿಗಮಪ ಖ್ಯಾತಿಯ ಸಿ.ಯೋಗಶ್ರೀ ಅವರಿಂದ ದಾಸವಾಣಿ ಕಾರ್ಯಕ್ರಮ, ಸ್ಥಳ: ಶ್ರೀರಾಮಮಂದಿರ ಜಯನಗರ
- **ಶ್ರೀರಾಮ ಸೇವಾ ಮಂಡಳಿ, ಶ್ರೀ ಅವನಿಶಂಕರ ಮಠ 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ವಿದ್ಯಾರಣ್ಯಪುರಂ, ಮೈಸೂರು:** 73 ನೇ ವರ್ಷದ ಶ್ರೀರಾಮೋತ್ಸವ, ಭಜನೆ: ಮೈಸೂರಿನ ಅರವಿಂದ ನಗರದ ಸ್ಫೂರ್ತಿ ಭಜನಾ ಮಂಡಳಿ ಅವರಿಂದ ಭಜನೆ, ಕರ್ನಾಟಕ ಶಾಸ್ತ್ರೀಯ ಸಂಗೀತ: ಬೆಂಗಳೂರಿನ ವಿದ್ವಾನ್ ಶ್ರೀ ಸುಹಾಸ್ ಮುರಳಿ ತಂಡದವರಿಂದ, ಸ್ಥಳ: ಶ್ರೀ ಅವನಿಶಂಕರ ಮಠ 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ವಿದ್ಯಾರಣ್ಯಪುರಂ, ಮೈಸೂರು, ಸಂಜೆ 5.30 ರಿಂದ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 30 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 338 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಯುದ್ಧದ ಸವಾಲುಗಳನ್ನು ಎದುರಿಸಲು ದೇಶದ ಜನತೆ ಒಗ್ಗೂಡಬೇಕು

● ಮನದ ಮಾತಿನಲ್ಲಿ ಪಶ್ಚಿಮ ಏಷ್ಯಾ ಸಂಘರ್ಷದ ಪರಿಣಾಮ ಬಿಚ್ಚಿಟ್ಟ ಪ್ರಧಾನಿ ಮೋದಿ ● ವದಂತಿಗಳಿಗೆ ಕಿವಿಗೊಡದೆ ವಿಶ್ವಾಸದಿಂದ ಹೆಜ್ಜೆ ಇಡುವಂತೆ ಕರೆ

ನವದೆಹಲಿ, ಮಾ.29– ಪಶ್ಚಿಮ ಏಷ್ಯಾದಲ್ಲಿನ ತೀವ್ರ ಯುದ್ಧದಿಂದ ಉಂಟಾಗುತ್ತಿರುವ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ದೇಶದ ಜನತೆ ಒಗ್ಗೂಡಬೇಕು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಭಾನುವಾರ ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ 'ಮನ ಕಿ ಬಾತ್'(ಮನದ ಮಾತು) ನಲ್ಲಿ ಪಶ್ಚಿಮ ಏಷ್ಯಾ ಬಿಕ್ಕಟ್ಟು ಹಾಗೂ ಹಾರ್ಮುಜ್ ಜಲಸಂಧಿಯಲ್ಲಿ ಉಂಟಾಗುತ್ತಿರುವ ಪರಿಣಾಮಗಳ ಕುರಿತು ವಿವರಿಸಿದ ಮೋದಿ, ಈ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳು ಅತ್ಯಂತ ವಿಶ್ವಾಸದಿಂದ ಹೆಜ್ಜೆ ಇಡಬೇಕು. ನಾಗರಿಕರು ಕೂಡ ಯಾವುದೇ ವದಂತಿಗಳಿಗೆ ಕಿವಿಗೊಡದೆ ಸವಾಲುಗಳನ್ನು ಎದುರಿಸಲು ಒಗ್ಗೂಡಬೇಕು ಎಂದರು.



ನಿಶ್ಚಿತವಾಗಿ ಸವಾಲಿನ ಸಮಯ: ಪಶ್ಚಿಮ ಏಷ್ಯಾ ದೇಶಗಳಲ್ಲಿ ಕಳೆದ ಒಂದು ತಿಂಗಳಿಂದ ತೀವ್ರ ಯುದ್ಧ ನಡೆಯುತ್ತಿದ್ದು, ಇದು ನಿಶ್ಚಿತವಾಗಿಯೂ ಸವಾಲಿನ ಸಮಯ. ಆದ್ದರಿಂದ ಇಂದಿನ 'ಮನ್ ಕಿ ಬಾತ್' ಮೂಲಕ 140 ಕೋಟಿ ಭಾರತೀಯರಿಗೆ ಮತ್ತೊಮ್ಮೆ ಮನವಿ ಮಾಡುತ್ತಿದ್ದೇನೆ. ವದಂತಿಗಳಿಗೆ ಕಿವಿಗೊಡದೆ ಅತ್ಯಂತ ಎಚ್ಚರಿಕೆಯಿಂದ ನಾವೆಲ್ಲರೂ ಒಟ್ಟಾಗಿ ಸವಾಲುಗಳನ್ನು ಎದುರಿಸಬೇಕು. ಇಡೀ ದೇಶದ ಜನತೆ ಒಂದಾದರೆ ಮಾತ್ರ ಈಗಿನ ಸಂಕಷ್ಟದಿಂದ ಹೊರಬರಲು ಸಾಧ್ಯ ಎಂದು ಹೇಳಿದರು.


■6ನೇ ಪುಟಕ್ಕೆ

ನೀರಿನ ಸಂರಕ್ಷಣೆಗೆ ಬದ್ಧರಾಗಬೇಕಿದೆ

50 ಲಕ್ಷ ಕೃತಕ ಮಳೆ ನೀರು ಕೊಯ್ಲು ರಚನೆ, 70 ಸಾವಿರ ಕೆರೆ ಅಭಿವೃದ್ಧಿ: ಮೋದಿ ಮಾಹಿತಿ

ನವದೆಹಲಿ: ದೇಶದಲ್ಲಿ 'ನೀರು ಸಂರಕ್ಷಣೆ'ಯ ಬದ್ಧತೆಗೆ ಹೆಚ್ಚು ಒತ್ತು ನೀಡುವ ಸಮಯ ಬಂದಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ದೇಶದ ಹಲವು ಭಾಗಗಳಲ್ಲಿ ಬೇಸಿಗೆ ಆರಂಭವಾಗುತ್ತಿದ್ದಂತೆ ತಮ್ಮ ಮನದ ಮಾತಿನಲ್ಲಿ ನೀರಿನ ಸಂರಕ್ಷಣೆಯ ಮಹತ್ವ ತಿಳಿಸಿದ ಮೋದಿ, ಕಳೆದ 11 ವರ್ಷಗಳಲ್ಲಿ 'ಜಲ ಸಂಚಯ' ಅಭಿಯಾನದಡಿ ದೇಶದಾದ್ಯಂತ ಸುಮಾರು 50 ಲಕ್ಷ ಕೃತಕ ಮಳೆನೀರು ಕೊಯ್ಲು ರಚನೆಗಳನ್ನು ಮತ್ತು 'ಅಮೃತ ಸರೋವರ' ಅಭಿಯಾನದಡಿಯಲ್ಲಿ 70 ಸಾವಿರ ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದರು. ನೀರಿನ ಸಮಸ್ಯೆ ಪರಿಹರಿಸಲು ಪ್ರತಿಯೊಂದು ಹಳ್ಳಿಯಲ್ಲೂ ಸಮುದಾಯ ಮಟ್ಟದ ಪ್ರಯತ್ನಗಳು ನಡೆಯುತ್ತಿರುವುದು ನನಗೆ ಸಂತೋಷ ತಂದಿದೆ. ಹಳೆಯ ಕೆರೆಗಳನ್ನು ಸ್ವಚ್ಛಗೊಳಿಸುವ ಹಾಗೂ ಮಳೆ ನೀರನ್ನು ಸಂರಕ್ಷಿಸಲು ಪ್ರಯತ್ನಗಳು ನಡೆಯುತ್ತಿವೆ. ಮಳೆಗಾಲ ಆರಂಭವಾಗುವ ಮೊದಲೇ ಕೆರೆಗಳ ಶುಚಿ ಕಾರ್ಯ ಆರಂಭವಾಗಿದೆ. ಸಾರ್ವಜನಿಕರ ಪಾಲ್ಗೊಳ್ಳುವಿಕೆಯಿಂದ ನೀರಿನ ಸಂರಕ್ಷಣೆ ಸಾಧ್ಯ ಎಂಬುದಕ್ಕೆ ಸಾಕಷ್ಟು ಸ್ಫೂರ್ತಿದಾಯಕ



ನಿದರ್ಶನಗಳಿವೆ ಎಂದರು.

ಛತ್ತೀಸ್‌ಗಢದ ಕೊರೊಯಾ ಜಿಲ್ಲೆಯನ್ನು ಉಲ್ಲೇಖಿಸಿದ ಪ್ರಧಾನಿ, ಅಲ್ಲಿನ ರೈತರು ಸರಳ, ಪರಿಣಾಮಕಾರಿ ಕಲ್ಪನೆಯನ್ನು ಅನುಸರಿಸಿ ನೀರಿನ ಸಂರಕ್ಷಣೆ ಮಾಡಿದ್ದಾರೆ. ತಮ್ಮ ಹೊಲಗಳಲ್ಲಿ ಸಣ್ಣ ಮರುಪೂರಣ ಕೊಳಗಳು ಮತ್ತು ಸೋಕ್ ಪಿಟ್‌ಗಳನ್ನು ಮಾಡುವ ಮೂಲಕ ಮಳೆನೀರನ್ನು ಹೊಲಗಳಲ್ಲೇ ಉಳಿಸಿ, ಕ್ರಮೇಣ ಭೂಮಿಯಲ್ಲಿ ಇಂಗಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಪ್ರದೇಶದಲ್ಲಿ 1200ಕ್ಕೂ ಹೆಚ್ಚು ರೈತರು ಈ ಮಾದರಿಯನ್ನು ಅಳವಡಿಸಿಕೊಂಡಿದ್ದಾರೆ.

■6ನೇ ಪುಟಕ್ಕೆ

ಪಶ್ಚಿಮ ಏಷ್ಯಾದಲ್ಲಿ ಮೂರೂವರೆ ಸಾವಿರ ಅಮೆರಿಕ ಸೈನಿಕರ ನಿಯೋಜನೆ

ಖಾರ್ಗ್ ದ್ವೀಪ, ಹಾರ್ಮುಜ್ ವಶಕ್ಕೆ ಕಸರತ್ತು

ಹೋರಾಟ ಎದುರಿಸಲು ಇರಾನ್ ಸಜ್ಜು; ಸಂಘರ್ಷ ಮತ್ತಷ್ಟು ಉದ್ವಿಗ್ನ ಸಾಧ್ಯತೆ


ನವದೆಹಲಿ, ಮಾ.29– ಮಧ್ಯಪ್ರಾಚ್ಯದಲ್ಲಿನ ಸಂಘರ್ಷ ಐದನೇ ವಾರಕ್ಕೆ ಕಾಲಿಟ್ಟಿದ್ದು, ಅಮೆರಿಕ ನಡೆಯಿಂದ ಪರಿಸ್ಥಿತಿ ಮತ್ತಷ್ಟು ಉದ್ವಿಗ್ನಗೊಳ್ಳುವ ಭೀತಿ ಸೃಷ್ಟಿಯಾಗಿದೆ.

ಇರಾನ್ ವಿರುದ್ಧ ವಾರಗಳ ಕಾಲ ನೆಲದ ಮೇಲಿನ ಕಾರ್ಯಾಚರಣೆ ನಡೆಸಿ ಖಾರ್ಗ್ ದ್ವೀಪ ಮತ್ತು ಹಾರ್ಮುಜ್ ಜಲಸಂಧಿಯನ್ನು ವಶಪಡಿಸಿಕೊಳ್ಳಲು ಅಮೆರಿಕ ಸಿದ್ಧತೆ ನಡೆಸುತ್ತಿರುವುದಾಗಿ 'ವಾಷಿಂಗ್ಟನ್ ಪೋಸ್ಟ್' ವರದಿ ಮಾಡಿದ್ದು, ಇದಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನುಮೋದನೆ ನೀಡುತ್ತಾರೆಯೇ ಎಂಬ ಅನಿಶ್ಚಿತತೆ ಮುಂದುವರೆದಿದೆ.

ಯುದ್ಧ ಪ್ರಾರಂಭವಾದಾಗಿನಿಂದ ಇರಾನ್ ಪರಿಣಾಮಕಾರಿಯಾಗಿ ನಿರ್ಬಂಧಿಸಿರುವ ಹಾರ್ಮುಜ್ ಜಲಸಂಧಿ ಬಳಿಯ ಕರಾವಳಿ ಪ್ರದೇಶಗಳ ಜೊತೆಗೆ ಇರಾನ್‌ನ ಅತಿದೊಡ್ಡ ತೈಲ ಟರ್ಮಿನಲ್ ಇರುವ ಖಾರ್ಗ್ ದ್ವೀಪವನ್ನು ವಶಪಡಿಸಿಕೊಳ್ಳುವ ಗುರಿಯೊಂದಿಗೆ ದಾಳಿ ನಡೆಸುವ ಬಗ್ಗೆ ಟ್ರಂಪ್ ಆಡಳಿತ ಚರ್ಚಿಸುತ್ತಿದೆ ಎಂದು ತಿಳಿದುಬಂದಿದೆ.

ಈ ಯೋಜನೆಯು ವಿಶೇಷ ಕಾರ್ಯಾಚರಣೆ ಮತ್ತು ಸಾಂಪ್ರದಾಯಿಕ ಪದಾತಿ ದಳಗಳ ದಾಳಿಗಳನ್ನು ಒಳಗೊಂಡಿರಬಹುದು. ನೆಲದ ಯಾವುದೇ ಕಾರ್ಯಾಚರಣೆಯು ಪೂರ್ಣ ಪ್ರಮಾಣದ ಆಕ್ರಮಣದವರೆಗೂ ನಿಲ್ಲುತ್ತದೆ ಎಂದು ಪೆಂಟಗನ್ ಅಧಿಕಾರಿಗಳು ತಿಳಿಸಿರುವುದಾಗಿ ವರದಿಯಾಗಿದೆ. ಆದರೆ ಡೊನಾಲ್ಡ್ ಟ್ರಂಪ್





ಅವುಗಳಿಗೆ ಅನುಮೋದನೆ ನೀಡುತ್ತಾರೆಯೇ ಎಂಬುದು ಇನ್ನೂ ಖಚಿತವಾಗಿಲ್ಲ. ಇರಾನ್‌ನಲ್ಲಿ ಅಮೆರಿಕದ ನೆಲದ ಪಡೆಗಳ ನಿಯೋಜನೆಯ ಬಗ್ಗೆ ಊಹಾಪೋಹಗಳ ನಡುವೆ, 20 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಮಧ್ಯಪ್ರಾಚ್ಯದಲ್ಲಿ ಅಮೆರಿಕ ತನ್ನ ಅತಿದೊಡ್ಡ ಪ್ರಮಾಣದ ಸೇನಾ ಜಮಾವಣೆ ಮಾಡಿದೆ. ಯುಎಸ್‌ಎಸ್ ಟ್ರಿಪೋಲಿ ಎಂಬ ಉಭಯಚರ ದಾಳಿ ಹಡಗಿನಲ್ಲಿ ಪಶ್ಚಿಮ ಏಷ್ಯಾಕ್ಕೆ 3,500 ನೌಕಪಡೆಗಳು

■6ನೇ ಪುಟಕ್ಕೆ

ಅಮೆರಿಕ ಪಡೆ ವಿರುದ್ಧ ಸೆಣಸಲು ನಾವು ಸಿದ್ಧ; ಇರಾನ್ ಎಚ್ಚರಿಕೆ

ನವದೆಹಲಿ: ಅಮೆರಿಕವು ತನ್ನ ಭೂಸೇನಾ ಪಡೆಗಳನ್ನು ಇರಾನ್‌ಗೆ ಕಳುಹಿಸಿದರೆ, ಆಕ್ರಮಣಕಾರಿಯಾಗಿ ಅವರ ಮೇಲೆ ದಾಳಿ ಮಾಡಲು ನಮ್ಮ ಪಡೆಗಳು ಕಾಯುತ್ತಿವೆ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಖಲಿಬಾಫ್ ಭಾನುವಾರ ಎಚ್ಚರಿಸಿದ್ದಾರೆ.

ನಮ್ಮ ಗುಂಡಿನ ದಾಳಿ ಮುಂದುವರೆದಿದೆ. ನಮ್ಮ ಕ್ಷಿಪಣಿಗಳು ಸ್ಥಳದಲ್ಲಿವೆ. ನಮ್ಮ ದೃಢ ನಿಶ್ಚಯ ಮತ್ತು ನಂಬಿಕೆ ಹೆಚ್ಚಾಗಿದೆ. ಹೀಗಾಗಿ, ಇರಾನ್ ನೆಲದ ಮೇಲೆ ದಾಳಿ ಮಾಡಲು ಮುಂದಾದರೆ, ಅಮೆರಿಕದ ಪಡೆಗಳು ಮತ್ತು ಈ ಪ್ರದೇಶದಲ್ಲಿ ಮಿತ್ರರಾಷ್ಟ್ರಗಳ ವಿರುದ್ಧ ತೀವ್ರ ಪ್ರತೀಕಾರ ತೀರಿಸಿಕೊಳ್ಳುವುದಾಗಿ ತಿಳಿಸಿದ್ದಾರೆ.

ಕಳೆದ ವಾರ ಪಾಕಿಸ್ತಾನ ಇರಾನ್‌ಗೆ ರವಾನಿಸಿದ ಅಮೆರಿಕದ 15 ಅಂಶಗಳ ಯೋಜನೆಯನ್ನು ಅವರ ಇಚ್ಛೆ ಎಂದು ಬಣ್ಣಿಸಿರುವ ಬಘರ್ ಖಲಿಬಾಫ್, ಟ್ರಂಪ್ ಆಡಳಿತವು ಬಲವಂತವಾಗಿ ಸಾಧಿಸಲು ವಿಫಲವಾದದ್ದನ್ನು ಈ ಯೋಜನೆಯ ಮೂಲಕ ಪಡೆಯಲು ಪ್ರಯತ್ನಿಸುತ್ತಿದೆ. ನಾವು ಯಾವುದೇ ಕಾರಣಕ್ಕೂ ಅವಮಾನವನ್ನು ಸಹಿಸುವುದಿಲ್ಲ ಎಂದು ತಿರುಗೇಟು ನೀಡಿದ್ದಾರೆ.

ಇರಾನ್ ಮೇಲಿನ ಅಮೆರಿಕ–ಇಸ್ರೇಲ್ ದಾಳಿಗಳು ಬೆಲೆಗಳನ್ನು ಹೆಚ್ಚಿಸಿವೆ. ವಿಶ್ವದ ಆರ್ಥಿಕತೆಯ ಭವಿಷ್ಯವನ್ನು ಕತ್ತಲೆಗೆ ದೂಡಿವೆ, ಜಾಗತಿಕ ಷೇರು ಮಾರುಕಟ್ಟೆಗಳು ತತ್ತರಿಸಿವೆ. ಯುದ್ಧ ಮುಂದುವರಿದಂತೆ ಇಂಧನ ಮೂಲಸೌಕರ್ಯವು ನಾಶವಾಗುತ್ತಿದ್ದು, ಪರಿಣಾಮಗಳು ದೀರ್ಘ ಕಾಲೀನವಾಗಿರುತ್ತವೆ ಎಂದು ಇಂಧನ ಅರ್ಥ ಶಾಸ್ತ್ರಜ್ಞ ಕ್ರಿಸ್ಟೋಫರ್ ನಿಟ್ಟೆಲ್ ಆತಂಕ ವ್ಯಕ್ತಪಡಿಸಿದ್ದಾರೆ.

ಇಂದು ಮುಖ್ಯಮಂತ್ರಿ ಸ್ಥಾನಕ್ಕೆ ನಿತೀಶ್‌ಕುಮಾರ್ ರಾಜೀನಾಮೆ?

ಡಿಸಿಎಂ ಸಾಮ್ರಾಟ್ ಚೌಧರಿ ಬಿಹಾರದ ನೂತನ ಸಿಎಂ ಸಾಧ್ಯತೆ

ಬಿಹಾರ: ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ರಾಷ್ಟ್ರ ರಾಜಕಾರಣಕ್ಕೆ ಮರಳಲು ಸಜ್ಜಾಗಿರುವ ನಿತೀಶ್ ಕುಮಾರ್ ಅವರು, ಬಿಹಾರ ಮುಖ್ಯಮಂತ್ರಿ ಸ್ಥಾನ ಹಾಗೂ ತಮ್ಮ ವಿಧಾನಪರಿಷತ್ ಸ್ಥಾನಕ್ಕೆ ಸೋಮವಾರ(ಮಾ.30) ರಾಜೀನಾಮೆ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.



ನಿತೀಶ್‌ಕುಮಾರ್

ಚುನಾಯಿತ ಸದಸ್ಯರು ರಾಜ್ಯಸಭೆಗೆ ಆಯ್ಕೆಯಾದ 14 ದಿನಗಳೊಳಗೆ ರಾಜ್ಯ ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಬೇಕು ಎಂಬ ನಿಯಮಾನುಸಾರ ನಿತೀಶ್ ಕುಮಾರ್ ಅವರು ಸೋಮವಾರ ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಬಹುದು ಎನ್ನಲಾಗಿದೆ. ಆದರೆ, ಈ ಕುರಿತು ಅಧಿಕೃತವಾಗಿ ಯಾವುದೇ ಮಾಹಿತಿ ಲಭ್ಯವಾಗಿಲ್ಲ.

ಮಾ.16ರಂದು ರಾಜ್ಯಸಭೆ ಸದಸ್ಯರಾಗಿ ಆಯ್ಕೆಯಾದ ನಿತೀಶ್ ಅವರು ಏಪ್ರಿಲ್ ಎರಡನೇ ವಾರದಲ್ಲಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಅಲ್ಲಿಯವರೆಗೆ ಸಿಎಂ ಆಗಿ ಮುಂದುವರಿಯುತ್ತಾರೆ ಎಂದೂ ಹೇಳಲಾಗುತ್ತಿದೆ. ಸಿಎಂ ಸ್ಥಾನಕ್ಕೆ ಯಾವಾಗ ರಾಜೀನಾಮೆ ನೀಡಬೇಕು ಎಂಬ ನಿರ್ಧಾರ ವನ್ನು ನಿತೀಶ್ ಕುಮಾರ್ ಅವರು ಕೈಗೊಳ್ಳುತ್ತಾರೆ ಎಂದು ಸಚಿವ ಶ್ರವಣ್ ಕುಮಾರ್ ಹೇಳಿದ್ದಾರೆ. ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ನಿತೀಶ್ ಕುಮಾರ್ ನಂತರ ಮುಖ್ಯಮಂತ್ರಿ ಸ್ಥಾನಕ್ಕೇರಲಿದ್ದಾರೆ ಎನ್ನಲಾಗುತ್ತಿದೆ.

ಎಲ್ಲ ವಲಯಗಳಿಗೂ ಅಡೆತಡೆ ಇಲ್ಲದೆ ಎಲ್‌ಪಿಜಿ ಸರಬರಾಜು

ಮೈಸೂರು, ಮಾ.29(ಎಂಕೆ)– ಎಲ್ಲಾ ವಲಯಗಳಿಗೂ ಯಾವುದೇ ಅಡೆ–ತಡೆ ಇಲ್ಲದೆ ಎಲ್.ಪಿ.ಜಿ ಸರಬರಾಜು ಮಾಡಲಾಗುತ್ತಿದ್ದು, ವಿಶೇಷವಾಗಿ ಆಟೋ ಎಲ್‌ಪಿಜಿಗೆ ಯಾವುದೇ ರೀತಿಯ ಕೊರತೆ ಇಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ತಿಳಿಸಿದೆ. ರಾಜ್ಯದಲ್ಲಿ ಎಲ್‌ಪಿಜಿ ಸರಬರಾಜು ವ್ಯವಸ್ಥೆಯನ್ನು, ವಿಶೇಷವಾಗಿ ಆಟೋ ಎಲ್‌ಪಿಜಿ ಪೂರೈಕೆಯನ್ನು ರಾಜ್ಯ ಸರ್ಕಾರವು ನಿಕಟವಾಗಿ ಗಮನಿಸುತ್ತಿದೆ. ಕರ್ನಾಟಕದಾದ್ಯಂತ ಒಟ್ಟು 72 ಆಟೋ ಎಲ್‌ಪಿಜಿ ಡಿಸ್ಪೆನ್ಸಿಂಗ್ ಸ್ಟೇಷನ್‌ಗಳು (ALDS) ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಕೇವಲ ಬೆಂಗಳೂರು ನಗರ ವೊಂದರಲ್ಲೇ 31 ಕೇಂದ್ರಗಳು ಲಭ್ಯವಿವೆ ಎಂದಿದೆ. ಸಾರ್ವಜನಿಕ ವಲಯದ ಪ್ರಮುಖ ತೈಲ ಮಾರಾಟ



■6ನೇ ಪುಟಕ್ಕೆ

ಮತದಾನ ಮುಗಿಯುವವರೆಗೆ ಎಕಿಟ್ ಪೋಲ್ ಫಲಿತಾಂಶಕ್ಕೆ ಬ್ರೇಕ್

ಬೆಂಗಳೂರು, ಮಾ.29– ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಹಿನ್ನೆಲೆಯಲ್ಲಿ ಮತದಾನದ ಪ್ರಕ್ರಿಯೆ ಮುಗಿಯುವವರೆಗೆ ಎಕ್ಸಿಟ್ ಪೋಲ್(ಚುನಾವಣೋತ್ತರ ಸಮೀಕ್ಷೆ) ನಡೆಸುವುದು ಅಥವಾ ಅದರ ಫಲಿತಾಂಶ ಪ್ರಕಟಿಸುವುದನ್ನು ಭಾರತೀಯ ಚುನಾವಣಾ ಆಯೋಗವು ಕಟ್ಟುನಿಟ್ಟಾಗಿ ನಿಷೇಧಿಸಿದೆ.

ಈ ಬಗ್ಗೆ ರಾಜ್ಯ ಚುನಾವಣಾಧಿಕಾರಿ ಕಚೇರಿ ಮಾಹಿತಿ ನೀಡಿದ್ದು, ಏಪ್ರಿಲ್ 9ರ ಬೆಳಿಗ್ಗೆ 7 ಗಂಟೆಯಿಂದ ಏಪ್ರಿಲ್ 29ರ ಸಂಜೆ 6.30 ರವರೆಗೆ ಈ ನಿಷೇಧ ಜಾರಿಯಲ್ಲಿರುತ್ತದೆ ಎಂದು ತಿಳಿಸಿದೆ. ಈ ಆದೇಶವನ್ನು ಮಾರ್ಚ್ 27ರಂದು ಹೊರಡಿಸಿದ್ದು, ಶನಿವಾರ ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ. ಈ ಸಂಬಂಧದ ಅಧಿಸೂಚನೆ ರಾಜ್ಯ ಗಜೆಟ್‌ನಲ್ಲಿ ಪ್ರಕಟಗೊಂಡಿದೆ.

ಚುನಾವಣಾ ಆಯೋಗದ ಸೂಚನೆಯ ಪ್ರಕಾರ, ದೇಶದ ಆರು ರಾಜ್ಯಗಳ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಉಪಚುನಾ ವಣೆಗಳಿಗೆ ಸಂಬಂಧಿಸಿದಂತೆ ಚುನಾವಣೋತ್ತರ ಸಮೀಕ್ಷೆಗಳಿಗೆ ತಾತ್ಕಾಲಿಕ ನಿಷೇಧ ಹೇರಲಾಗಿದೆ.

ಡ್ರಗ್ಸ್ ಮಾಫಿಯಾ ಮಟ್ಟಹಾಕಿ, ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಿ

ಪೊಲೀಸರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟಾಜ್ಞೆ

ಮೈಸೂರು,ಮಾ.29(ಬಿಎಲ್‌ಯು)– ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾ ತಲೆ ಎತ್ತದಂತೆ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸ್ ಇಲಾಖೆಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಇಂದು 46 ನೇ ತಂಡ ಪೊಲೀಸ್ ಉಪ ನಿರೀಕ್ಷಕರ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನದಲ್ಲಿ ಗೌರವ ವಂದನೆ ಸ್ವೀಕರಿಸಿ ಮಾತನಾಡಿದ ಅವರು, ಡ್ರಗ್ಸ್ ತಯಾರಿಕೆ, ಸಾಗಾಣಿಕೆ ಹಾಗೂ ಮಾರಾಟದ ಬಗ್ಗೆ ಪ್ರತಿಯೊಂದು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಹಾಗೂ ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಮಾಹಿತಿ ಇರುತ್ತದೆ. ಇದರ ಜಾಡು ಹಿಡಿದು ಡ್ರಗ್ಸ್ ಜಾಲ ವ್ಯಾಪಿಸದಂತೆ ಮಟ್ಟ ಹಾಕಬೇಕು ಎಂದು ಆದೇಶಿಸಿದರು.

ಡ್ರಗ್ಸ್‌ನಿಂದ ಯುವಕ, ಯುವತಿಯರ



ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಭಾನುವಾರ ನಡೆದ 46ನೇ ತಂಡ ಪೊಲೀಸ್ ಉಪ ನಿರೀಕ್ಷಕರ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನದಲ್ಲಿ ಗದಗ ಮೂಲದ ಅನಿಲ್ ಕುಮಾರ ಎಂ.ತಿಪ್ಪಣ್ಣನವರ್ ಸರ್ವೋತ್ತಮ ಪಶಿಕ್ಷಣಾರ್ಥಿಯ ಬಹುಮಾನ ಪಡೆದರು.

ಮೈಸೂರಿನ ಕೆಪಿಎನಲ್ಲಿ ಪೊಲೀಸ್ ಉಪ ನಿರೀಕ್ಷಕ ಪ್ರಶಿಕ್ಷಣಾರ್ಥಿಗಳ ಆಕರ್ಷಕ ಪಥ ಸಂಚಲನ

● ಯುವಕ, ಯುವತಿಯರ ಭವಿಷ್ಯದ ಮೇಲೆ ಡ್ರಗ್ಸ್ ಕರಿ ನೆರಳು ● ಸವಾಲು ಮೆಟ್ಟಿ ನಿಂತು ಡ್ರಗ್ಸ್ ಮುಕ್ತ ಸಮಾಜ ನಿರ್ಮಾಣ ಮಾಡಿ ● ಇತ್ತೀಚೆಗೆ ಹೊಸ ಕ್ರಿಮಿನಲ್ ಚಟುವಟಿಕೆಗಳು ಹೆಚ್ಚಾಗುತ್ತಿವೆ ● ಸೈಬರ್ ಕ್ರೈಂ ತಡೆಗೆ ಹೆಚ್ಚಿನ ನಿಗಾ ಇಡಿ

ಭವಿಷ್ಯದ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತದೆ. ಇದನ್ನು ಅರಿತು ಡ್ರಗ್ಸ್ ಮಾಫಿಯಾ ತಲೆ ಎತ್ತದಂತೆ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸಿದ್ದರಾಮಯ್ಯ ಅವರು ತಾಕೀತು ಮಾಡಿದರು.

ಡ್ರಗ್ಸ್ ಸೇರಿದಂತೆ ಇತರೆ ಅಪರಾಧ ಕೃತ್ಯಗಳಿಂದ ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡುವುದು ಕಷ್ಟ. ಆದರೂ ಇದು ತಮ್ಮ ಮೂಲ ಜವಾಬ್ದಾರಿ ಎಂದು ಅರಿತು ಬರುವ ಸವಾಲುಗಳನ್ನು ಮೆಟ್ಟಿ ನಿಂತು ಡ್ರಗ್ಸ್ ಮುಕ್ತ ಸಮಾಜ ನಿರ್ಮಾಣ ಮಾಡಬೇಕು ಎಂದ ಅವರು, ಶ್ರೀಮಂತರು ಹಣ ಬಲದಿಂದ ಪೊಲೀಸರನ್ನು ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಪೊಲೀಸರು ಎಚ್ಚರಿಕೆಯಿಂದ ಇರಬೇಕು, ಯಾವುದೇ ಆಸೆ, ಆಮಿಷಗಳಿಗೆ ಒಳಗಾಗಬಾರದು ಎಂದು ಸಲಹೆ ನೀಡಿದರು. ಒಬ್ಬ ಹೆಣ್ಣು ಮಗಳು ಮಧ್ಯ ರಾತ್ರಿ 12 ಗಂಟೆಯಲ್ಲಿ ನಿರ್ಭೀತಿಯಿಂದ ಓಡಾಡಿದಾಗ ಮಾತ್ರ ನಿಜವಾದ ಸ್ವಾತಂತ್ರ್ಯ ದೊರೆತಂತೆ ಎಂದು ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರು ಹೇಳಿದ್ದಾರೆ. ಇಂತಹ ನಿರ್ಭೀತ ವಾತಾವರಣ

■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಕಚೇರಿಗೆ ಫೋನ್ ಮಾಡಿದ ರಾಣಿ ಮ್ಯಾನೇಜರ್ ಜೊತೆ ಮಾತನಾಡುತ್ತ: ತಮ್ಮಲ್ಲಿ ಕೆಲ್ಸ ಮಾಡೋ ಗುಂಡ ಅವರನ್ನು ಅರ್ಧ ದಿನ ರಜೆ ಮೇಲೆ ಮನೆಗೆ ಕಳುಹಿಸಿಕೊಡಿ ಸರ್.

ಮ್ಯಾನೇಜರ್ : ತಾವು ಯಾರು?

ರಾಣಿ : ನಾನು ಅವರ ಪತ್ನಿ. ಮನೆಗೆ ನೆಂಟರು ಬಂದಿದ್ದಾರೆ. ಕೆಲಸದವರು ಕೈಕೊಟ್ಟಿದ್ದಾರೆ. ಪಾತ್ರೆಗಳು ರಾಶಿ ಬಿದ್ದಿವೆ...

ಮ್ಯಾನೇಜರ್ : ರಜಾ ಬೇಡಮ್ಮ... ಹಾಗೇ ಕಳುಹಿಸಿ ಕೊಡ್ತೀನಿ.

ಮೈಸೂರು ಮಿತ್ರ

ಸೋಮವಾರ, ಮಾರ್ಚ್ 30, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಚಿಂತೆ ಇಲ್ಲದ ಜೀವನವನ್ನು ಭಗವಂತ ಯಾರಿಗೂ ನೀಡುವುದಿಲ್ಲ. ಆದರೆ, ಚಿಂತೆಯನ್ನು ಮರೆಸುವಂತಹ ಸಂಬಂಧವನ್ನು ಖಂಡಿತ ನೀಡುತ್ತಾನೆ. ಅಂತಹ ಸಂಬಂಧವನ್ನು ಎಂದೂ ಕಳೆದುಕೊಳ್ಳಬೇಡಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಭರಣಿ ಮಳೆ ಬಿದ್ರೆ, ಧರಣಿಯೆಲ್ಲಾ ಬೆಳೆ.

ನಿಮ್ಮ ಪತ್ರಗಳು

ಹಿಂದಿ ಭಾಷೆ ತಾತ್ಸಾರ ಸಲ್ಲದು...

ಮಾನ್ಯರೆ,

ನಮ್ಮ ಕನ್ನಡದ ಮಕ್ಕಳು ಹಿಂದಿ ಭಾಷೆ ಕಲಿತರೆ ಏನು ತೊಂದರೆ ಆಗುತ್ತದೆಯೋ ಗೊತ್ತಿಲ್ಲ! ಮಾರ್ಚ್ 31 ಎಸ್ಸೆಸ್ಸೆಲ್ಸಿ ಹಿಂದಿ ಪರೀಕ್ಷೆ ಇದೆ. ಹಿಂದಿ ವಿಷಯದಲ್ಲಿ ಅಂಕಗಳನ್ನು ಪರಿಗಣನೆ ಮಾಡುವುದಿಲ್ಲ. ಅಂಕಗಳ ಬದಲಿಗೆ ಸರ್ಕಾರ ಗ್ರೇಡ್ ಪದ್ಧತಿ ಕೊಡ್ತೀವಿ ಅಂದ್ರೆ ವರ್ಷಪೂರ್ತಿ ಕಲಿಸಿದ ಗುರುಗಳ ಹಾಗೂ ವಿದ್ಯಾರ್ಥಿಗಳ ಪಾಡೇನು? ಶಿಕ್ಷಕರ ಶ್ರಮಕ್ಕೆ ಹಾಗೂ ಮಕ್ಕಳ ಕಲಿಕೆಗೆ ಬೆಲೆ ಬೇಡವೇ? ನಮ್ಮ ಕನ್ನಡದ ಮಕ್ಕಳನ್ನು ಬರೀ ಕನ್ನಡಕ್ಕೆ ಯಾಕೆ ಸೀಮಿತಗೊಳಿಸುತ್ತಿದ್ದೀರಾ? ಹಿಂದಿ ಕಲಿತರೆ ರಾಷ್ಟ್ರಮಟ್ಟದಲ್ಲಿ ಮಕ್ಕಳು ಪ್ರತಿನಿಧಿಸಲು, ಬೆಳೆಯಲು ಒಳಿತಾಗುವುದಿಲ್ಲವೇ? ಇಷ್ಟಕ್ಕೂ ಮಕ್ಕಳು ಕೇಳಿದ್ರೆ ನಮಗೆ ಹಿಂದಿ ಬೇಡ ಅಂತ? ಒಂದು ವೇಳೆ ನಮ್ಮ ಮಕ್ಕಳು ನಾಳೆ ದಿನ ಇಂಗ್ಲಿಷ್ ಭಾಷೆ ಕಷ್ಟವಿದೆ ಕಲಿಯೋದು ಬೇಡ ಅಂತಾರೆ, ಅವಾಗ ಇಂಗ್ಲಿಷ್ ತೆಗೆದು ಹಾಕೋಕೆ ಆಗುತ್ತಾ? ಅಥವಾ ಇತಿಹಾಸವನ್ನು ನಾವು ನೋಡಿಲ್ಲ, ರಾಜ ಮಹಾರಾಜರ ಆಳ್ವಿಕೆಯನ್ನು ನಾವು ಕಣ್ಣಾರೇ ಕಂಡಿಲ್ಲ. ಅವರು ಇದ್ದಿದ್ದರೋ ಇಲ್ಲವೋ ಎಂದು ನಮಗೆ ಗೊತ್ತಿಲ್ಲ ಅಂತ ನಾಳೆ ಸಮಾಜ ವಿಷಯವನ್ನು ತೆಗೆದು ಹಾಕೋಕೆ ಆಗುತ್ತಾ!? ಹೀಗಾಗಿ ಹಿಂದಿ ವಿಷಯದ ಬಗ್ಗೆ ಪ್ರಸ್ತುತ ನಮ್ಮ ರಾಜ್ಯ ಸರ್ಕಾರ ಕೈಗೊಂಡಿರುವ ನಿರ್ಧಾರ ಸರಿ ಅನಿಸದು.

ಹಿಂದಿ ಕೇಂದ್ರದ ಆಡಳಿತ ಭಾಷೆ ಹಾಗೂ ನಮ್ಮ ದೇಶದಲ್ಲಿ ಅತಿ ಹೆಚ್ಚು ಜನರು ಮಾತನಾಡುವ ಭಾಷೆಯು ಕೂಡ ಹೌದು. ಇದನ್ನ ಮಕ್ಕಳು ಕಲಿತರೆ ಸರ್ಕಾರಕ್ಕೇನು ನಷ್ಟವೋ? ಅಥವಾ ಯಾರಿಗೇನು ತೊಡಕೋ ದೇವರಿಗೆ ಗೊತ್ತು. ಸರ್ಕಾರ ಸ್ವಲ್ಪ ಸಂಕುಚಿತ ಭಾವನೆ ಬಿಟ್ಟು ವಿಶಾಲ ಮನೋಭಾವದಿಂದ ಯೋಚನೆ ಮಾಡುವುದೊಳಿತು. ಹಿಂದಿ ನಮ್ಮ ರಾಷ್ಟ್ರ ಭಾಷೆ. ಕನ್ನಡದಲ್ಲಿ ಕನ್ನಡಕ್ಕೆ ಪ್ರಥಮ ಆದ್ಯತೆ ಕೊಡೋಣ ಹಾಗೂ ಅದನ್ನು ಎಲ್ಲರೂ ಒಪ್ಪೋಣ. ಆದರೆ ನಮ್ಮ ರಾಜ್ಯದಲ್ಲಿ ಹಲವಾರು ದಶಕಗಳಿಂದ ಹಿಂದಿಯನ್ನು ತೃತೀಯ ಭಾಷೆಯಾಗಿ ಕಲಿಸಲಾಗುತ್ತಿದೆ. ಹೀಗಾಗಿ ನಮ್ಮ ಕನ್ನಡ ಮಕ್ಕಳು ರಾಷ್ಟ್ರಭಾಷೆಯನ್ನು ಇಷ್ಟಪಟ್ಟು ಕಲಿಯುವುದರಲ್ಲಿ ತಪ್ಪೇನು ಇಲ್ಲ. ಇಷ್ಟಕ್ಕೂ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಮಕ್ಕಳಿಗೆ ನಿತ್ಯ ಹಿಂದಿ ಕಲಿಸುತ್ತಿರುವ ರಾಜ್ಯದಲ್ಲಿನ ಸಾವಿರಾರು ಶಿಕ್ಷಕರ ಗತಿಯೇನು? ಈ ಬಗ್ಗೆಯೂ ಸರ್ಕಾರ ಚಿಂತಿಸುವುದು ಒಳಿತು.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಹಸಿರಿಲ್ಲದೆ ಬಟಾಬಯಲಾದ ಹೈದರಾಲಿ ರಸ್ತೆ

ಮಾನ್ಯರೆ,

ಕೆಲವು ತಿಂಗಳ ಹಿಂದೆ ಹೈದರಾಲಿ ರಸ್ತೆಯ ಎರಡೂ ಪಕ್ಕದಲ್ಲಿ 40 ಮರಗಳನ್ನು ಹೊಂದಿ ಹಸಿರು ಕಂಗೊಳಿಸುತ್ತಿತ್ತು, ರಸ್ತೆ ಅಗಲೀಕರಣದ ನೆಪದಲ್ಲಿ ಅಹೋರಾತ್ರಿ ಕಡಿದ ಎಲ್ಲಾ 40 ಮರಗಳಿಗೆ ಬದಲಾಗಿ, ಈಗಿನ ಗಿಡಗಳನ್ನು ನೆಟ್ಟರೆ 5 ವರ್ಷದೊಳಗೆ 12 ಅಡಿ ಬೆಳೆಯುತ್ತವೆ ಎಂದು ಪಾಲಿಕೆ ಅಧಿಕಾರಿಗಳು ಪರಿಸರ ಪ್ರೇಮಿಗಳಿಗೆ ಭರವಸೆ ನೀಡಿದ್ದುದ್ದು ಸರಿಯಷ್ಟೆ, ಆದರೆ ಇದುವರೆಗೂ ಒಂದು ಗಿಡವನ್ನು ನೆಡದೆ ಇರುವುದು ಸೋಜಿಗವೇ ಸರಿ. ಇದನ್ನು ಗಮನಿಸಿದ ಹಸಿರು ಪ್ರೇಮಿಗಳಾದ ರಘುಲಾಲ್ ಅಂಡ್ ಕಂಪನಿಯವರು ರಸ್ತೆಗಳ ಇಕ್ಕೆಲಗಳಲ್ಲಿ ಗಿಡಗಳನ್ನು ನೆಟ್ಟಿ, ರಕ್ಷಿಸಿ, ನೀರು ಹಾಕಿ 2 ತಿಂಗಳಿಂದ ಪೋಷಿಸುತ್ತಿದ್ದ ಗಿಡಗಳನ್ನು ಫುಟ್‌ಪಾತ್ ನಿರ್ಮಿಸಲು ಪಾಲಿಕೆಯವರು ಕಿತ್ತೆಸೆದಿರುವುದು ವಿಪರ್ಯಾಸವೇ ಸರಿ. ಹೈದರಾಲಿ ರಸ್ತೆ ಈಗ ಜೋಡಿರಸ್ತೆಯಾಗಿ ಕಂಗೊಳಿಸುತ್ತಿದ್ದು, ನಗರ ಪಾಲಿಕೆ ಅಧಿಕಾರಿಗಳು ಪರಿಸರ ಪ್ರೇಮಿಗಳಿಗೆ ಗಿಡಗಳನ್ನು ನೆಡುವ ಭರವಸೆಯನ್ನು ನೀಡಿದ್ದುದ್ದು ಎಲ್ಲರಿಗೂ ತಿಳಿದಿರುವ ಸಂಗತಿ,ಅದರಂತೆ ಈಗ ಗಿಡಗಳನ್ನು ನೆಟ್ಟು ಪಾಲಿಕೆ ನಂಬಿಕೆಯನ್ನು ಉಳಿಸಿಕೊಳ್ಳುವುದು ಒಳಿತು. **–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.**

LPG, CNG ಬಂಕ್‌ಗಳು ಮತ್ತಷ್ಟು ತೆರೆಯಿರಿ

ಮಾನ್ಯರೆ,

ಆಟೋ ಪ್ರತಿಯೊಬ್ಬರ ಜೀವನದಲ್ಲೂ ಒಂದಲ್ಲ ಒಂದು ರೀತಿ ಸಹಕಾರಿಯಾದ ವಾಹನ. ಆಟೋದಲ್ಲಿ ಪ್ರಯಾಣಿಸಿದವರಿಲ್ಲ. ಮನೆಯಲ್ಲಿ ಎಷ್ಟೇ ವಾಹನಗಳಿದ್ದರೂ ಆಟೋ ಬಳಕೆ ಕೆಲವೊಮ್ಮೆ ಅನಿವಾರ್ಯ. ಹೀಗೆ ನಾನಾ ರೀತಿಯಲ್ಲಿ ಉಪಯೋಗಕಾರಿಯಾದ ಆಟೋ ಬಳಕೆ ಸಾರ್ವಜನಿಕ ಜೀವನದ ತುರ್ತು ಪರಿಸ್ಥಿತಿಗಳಲ್ಲಿ ಜನಸ್ನೇಹಿಯಾಗಿ ಕಾರ್ಯನಿರ್ವಹಿಸುವ ವಾಹನ. ಇಂತಹ ಆಟೋ ವಾಹನಗಳಿಗೆ ಹೆಚ್ಚುವರಿ ಬಂಕುಗಳು ಇಲ್ಲದೆ ಇರುವುದು ವಿಪರ್ಯಾಸ. ನಾವು ದ್ವಿಚಕ್ರ ವಾಹನಗಳಿಗೆ ಹಾಗೂ ಕಾರುಗಳಿಗೆ ಪೆಟ್ರೋಲ್ ಅಥವಾ ಡೀಸೆಲ್ ಖಾಲಿಯಾದಾಗ ಎಲ್ಲೆಂದರಲ್ಲಿ ಬಂಕ್‌ಗಳಲ್ಲಿ ಹಾಕಿಸಿಕೊಂಡು ಓಡಿಸುತ್ತೇವೆ. ಆದರೆ ಆಟೋಗಳಿಗೆ ಗ್ಯಾಸ್ ಖಾಲಿಯಾದಾಗ ಎಲ್ಲೆಂದರಲ್ಲಿ ಹೋಗಿ ಬಂಕ್‌ಗಳಲ್ಲಿ ಗ್ಯಾಸ್ ತುಂಬಿಸಲು, ಹೆಚ್ಚು ಬಂಕುಗಳೇ ಇಲ್ಲದ ಕಾರಣ ಆಟೋ ಚಾಲಕರು ಪರದಾಡುವ ಪರಿಸ್ಥಿತಿ ಎದುರಾಗಿದೆ. ಕೆಲವು ಸಂದರ್ಭಗಳಂತೂ ಗ್ಯಾಸ್ ಖಾಲಿಯಾದಾಗ ತಕ್ಷಣಕ್ಕೆ ಬಂಕುಗಳು ಸಿಗದೇ ಆಟೋ ಚಾಲಕರು ಆಟೋವನ್ನು ರಸ್ತೆಯಲ್ಲಿ ತಳ್ಳಿಕೊಂಡು ಹೋಗುವ ಪ್ರಸಂಗ ಎದುರಾಗಿದೆ. ಜೊತೆಗೆ ಗೂಡ್ಸ್ ಆಟೋ ಚಾಲಕರಿಗೂ ಕೂಡ ಇಂತಹದ್ದೇ ಪರಿಸ್ಥಿತಿ, ಆದ್ದರಿಂದ ಮೈಸೂರು ನಗರದಲ್ಲಿ ಕೈಗೆ ಎಟುಕುವಂತೆ ಎಲ್‌ಪಿಜಿ ಮತ್ತು ಸಿಎನ್‌ಜಿ ಬಂಕ್‌ಗಳನ್ನು ಮತ್ತಷ್ಟು ತೆರೆಯುವ ಮುಖಾಂತರ ಆಟೋ ಚಾಲಕರಿಗೆ ಅನುಕೂಲ ಮಾಡಿಕೊಡಬೇಕಾಗಿದೆ.

–ಸಾಯಿ ಸಂದೇಶ್ ಬಿ.ಎಸ್, ಮೈಸೂರು.

ನಿವೃತ್ತರ ಬದುಕಿಗೆ ಕೇಂದ್ರದ ಕೊಡಲಿ ಪೆಟ್ಟು

ಮಾನ್ಯರೆ,

ಕೇಂದ್ರ ಸರ್ಕಾರದ ಊರ್ಜಿತ ಶಾಸನ ಕೇವಲ ಕಾಗದದ ಕಾಯ್ದೆಯಲ್ಲ ಅದು ದಶಕಗಳ ಕಾಲ ದೇಶ ಸೇವೆ ಮಾಡಿದ ನಿವೃತ್ತ ನೌಕರರ ಪಾಲಿನ ಮರಣಶಾಸನ. ಕಳೆದ ಬಜೆಟ್‌ನಲ್ಲಿ ಮಂಡನೆಯಾದ ಈ ನಿರ್ಧಾರದಿಂದ ಲಕ್ಷಾಂತರ ಹಿರಿಯ ಜೀವಗಳು ಇಂದು ಬೀದಿಗೆ ಬಂದಿವೆ. ಬೆಲೆ ಏರಿಕೆ ಸೂಚ್ಯಂಕದ ಆಧಾರದಲ್ಲಿ ಸಿಗಬೇಕಾದ ತುಟ್ಟಿಭತ್ಯೆ ಮತ್ತು ಪಿಂಚಣಿ ಪರಿಷ್ಕರಣೆಯನ್ನು ಸ್ಥಗಿತಗೊಳಿಸಿರುವುದು ಅಮಾನವೀಯ. ಭಾರತದ ಸುಮಾರು 65 ಲಕ್ಷಕ್ಕೂ ಹೆಚ್ಚು ಕೇಂದ್ರ ಮತ್ತು ರಾಜ್ಯ ನಿವೃತ್ತ ನೌಕರರು ಈ ಹಣವನ್ನೇ ನಂಬಿ ವೈದ್ಯಕೀಯ ವೆಚ್ಚಗಳನ್ನು ಭರಿಸುತ್ತಿದ್ದಾರೆ. ಶೇ.8ರಷ್ಟು ಹಣದುಬ್ಬರವಿರುವ ಈ ಕಾಲದಲ್ಲಿ ಪರಿಷ್ಕರಣೆ ಇಲ್ಲದ ಪಿಂಚಣಿ ಬದುಕನ್ನು ದುಸ್ತರವಾಗಿಸಿದೆ. ಸರ್ಕಾರವು ಕಾರ್ಪೊರೇಟ್ ವಲಯಕ್ಕೆ ನೀಡುವ ರಿಯಾಯಿತಿಗಳಲ್ಲಿ ಸ್ವಲ್ಪ ಪಾಲನ್ನು ಇವರಿಗೆ ನೀಡಬಾರದೇ? ಈ ಕರಾಳ ಕಾನೂನು ಕೂಡಲೇ ರದ್ದಾಗಲಿ. ಹಿರಿಯ ನಾಗರಿಕರ ಸ್ವಾಭಿಮಾನದ ಬದುಕನ್ನು ಕಸಿಯುವುದು ಪ್ರಜಾಪ್ರಭುತ್ವಕ್ಕೆ ಶೋಭೆಯಲ್ಲ. **–ಡಾ.ವಿಜಯಕುಮಾರ ಎಚ್.ಕೆ.**



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಪುಣ್ಯ ಕಾರ್ಯದಿಂದ ಪಾಪ ತೊಳೆದು ಹೋಗದು...!



ಮನುಷ್ಯನ ದೈನಂದಿನ ಬದುಕಿನಲ್ಲಿ ದಿನಕ್ಕೆ ಒಮ್ಮೆಯಾದರೂ ಚರ್ಚೆಗೆ, ಚಿಂತನೆಗೆ, ಆತ್ಮವಿಮರ್ಶೆಗೆ ಬರುವ ಸಂಗತಿ ಪಾಪ–ಪುಣ್ಯ ಎಂಬುದು. ಪ್ರಾಣಿಪಕ್ಷಿಗಳ ವಿಚಾರದಲ್ಲಿ ಪಾಪ ಪುಣ್ಯ ವಿಚಾರವು ಚರ್ಚೆಯ ಆಚೆಗೆ ಇರುವ ಸಂಗತಿ. ಏಕೆಂದರೆ ನಿಸರ್ಗದ ನಿಯಮದಂತೆ ಆಹಾರ ಸರಪಳಿಯಲ್ಲಿ ಸಣ್ಣ ಪ್ರಾಣಿಗಳನ್ನು ದೊಡ್ಡ ಪ್ರಾಣಿಗಳು ತಿಂದು ಬದುಕುವುದು ಸಹಜ. ಅದನ್ನು ತಪ್ಪು ಎಂದು ಹೇಳಲಾಗದು.

ಆದರೆ ಮನುಷ್ಯನ ವಿಚಾರಕ್ಕೆ ಬಂದರೆ ಮನುಷ್ಯ ಮಾಡುವ ಪ್ರತಿಯೊಂದು ಕೆಲಸವನ್ನು ವರ್ಗೀಕರಿಸಿ ಸರಿ, ತಪ್ಪುಗಳ ಪಟ್ಟಿಗೆ ಸೇರಿಸುತ್ತಾರೆ. ಏಕೆಂದರೆ ಮನುಷ್ಯ ಮೂಲಭೂತವಾಗಿ ಒಂದು ಪ್ರಾಣಿಯೇ ಆದರೂ, ಅವನ ಪ್ರಜ್ಞಾವಂತಿಕೆ, ಬುದ್ಧಿವಂತಿಕೆ, ಶಿಕ್ಷಣ, ಸಂಸ್ಕಾರ ಅವನನ್ನು ವಿವೇಕಿಯಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮನುಷ್ಯ ಬುದ್ಧಿವಂತ ಪ್ರಾಣಿಯಾದ ಕಾರಣಕ್ಕೆ ತಾನು ಮಾಡುವ ಕೆಲಸದಲ್ಲಿ ಪುಣ್ಯದ ಕೆಲಸ ಹಾಗೂ ಪಾಪದ ಕೆಲಸ ಎಂದು ವರ್ಗೀಕರಣ ಮಾಡಿಕೊಂಡಿರುತ್ತಾನೆ.

ಅರಿವಿಲ್ಲದೆ ಆಗುವ ತಪ್ಪುಗಳು ಪಾಪದ ಕೆಲಸ ಎನಿಸಿಕೊಳ್ಳುವುದಿಲ್ಲ. ಆದರೆ ಅರಿವಿದ್ದೂ ಮಾಡುವ ದೊಡ್ಡ ತಪ್ಪುಗಳು ಪಾಪದ ಕೆಲಸಗಳೇ ಆಗಿರುತ್ತವೆ. ಕೆಲವು ಪಾಪಿಗಳು ತಾವು ಮಾಡುವ ಪಾಪದ ಕೆಲಸಗಳಿಗೆ ಪ್ರತಿಯಾಗಿ ಒಂದೆರಡು ಪುಣ್ಯದ ಕೆಲಸಗಳನ್ನು ತೋರಿಕೆಗೆ ಮಾಡಿ ಪಾಪಪ್ರಜ್ಞೆಯಿಂದ ಹೊರಬರಲು ಪ್ರಯತ್ನಿಸುತ್ತಾರೆ. ಆದರೆ ಪುಣ್ಯದ ಕೆಲಸ ಮಾಡಿದಾಕ್ಷಣ ಪಾಪದ ಕೆಲಸ ಅಳಿಸಿಹೋಗುವುದಿಲ್ಲ. ಅವೆರಡರ ಖಾತೆಗಳು ಬೇರೆ ಬೇರೆ.

ಪ್ರಾಣಿ–ಪಕ್ಷಿಗಳು ಪ್ರಕೃತಿ ನಿಯಮ ಮೀರಿ ಬದುಕುವುದಿಲ್ಲ. ಆಹಾರ, ವಿಹಾರ, ವಿಚಾರ..... ಹೀಗೆ ಎಲ್ಲದರಲ್ಲೂ ಅವುಗಳು ಶೇ.90 ನಿಯಮ ಪಾಲಿಸುತ್ತವೆ. ಆದರೆ ಬಹುಪಾಲು ಮನುಷ್ಯರು ಮಾತ್ರ ತಮ್ಮ ವಿವೇಚನೆಯಿಂದ ರೂಪಿಸಿಕೊಂಡಿರುವ ಅಲಿಖಿತ ನಿಯಮವಾಗಲಿ, ನಾಗರೀಕತೆಯಿಂದ ರೂಪಿಸಿರುವ ಲಿಖಿತ ನಿಯಮಗಳನ್ನಾಗಲಿ ಶೇ.90 ಪಾಲಿಸುವುದಿಲ್ಲ. ಅಷ್ಟೇ ಏಕೆ ಪ್ರಕೃತಿ ನಿಯಮಗಳಿಗೆ ವಿರುದ್ಧವಾಗಿ ಬದುಕುತ್ತಾ, ತಾನು ಮಾಡಿದ್ದೇ ಸರಿ ಎಂದು ವಿಕೃತಿಯಿಂದ ಮೆರೆಯುತ್ತಿರುವುದರಿಂದ ಅನೇಕ ಆತಂಕಕಾರಿ ಬೆಳವಣಿಗೆಗಳು ನಡೆಯುತ್ತಿವೆ. ಪಾಪಪುಣ್ಯಗಳ ಮಾತು ಹಾಗಿರಲಿ, ಮನುಷ್ಯತ್ವ ಮೀರಿ ವರ್ತಿಸುತ್ತಾ ಇರುವುದು ದುರದೃಷ್ಟಕರ.

ದುರಾಲೋಚನೆ, ದುಶ್ಚಟ, ದುರಾಚಾರ, ದುರಾಸೆ...... ಇವುಗಳು ಮನುಷ್ಯನಿಗೆ ಇರುವಷ್ಟು ಯಾವ ಪ್ರಾಣಿಪಕ್ಷಿಗೂ ಇಲ್ಲ. ಎಷ್ಟೇ ವಿದ್ಯಾವಂತ ಅಥವಾ ಬುದ್ಧಿವಂತನಾದರೂ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಮದ, ಮತ್ಸರ, ಲೋಭ, ಮೋಹಗಳಿಂದ ಮತಿಹೀನನಂತೆ ವರ್ತಿಸಿಬಿಡುತ್ತಾನೆ. ಅದಕ್ಕೆ ಸಾಕ್ಷಿ ಜೈಲುಗಳು. ಇಂದು ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳು ತುಂಬಿ ತುಳುಕುವಂತೆ ಜೈಲುಗಳಲ್ಲಿ ಅಪರಾಧಿಗಳು ತುಂಬಿ ತುಳುಕುತ್ತಿದ್ದಾರೆ. ಪಾಪಪುಣ್ಯಗಳ ಪರಿಜ್ಞಾನವಿದ್ದರೆ ಅಪರಾಧಿಗಳ ಸಂಖ್ಯೆ ಕಡಿಮೆಯಾಗಬೇಕಿತ್ತು ಅಲ್ಲವೇ? ಇಂದು ಅನೇಕರು ತಪ್ಪು ಎಂದರೆ ಅದು ಕಾನೂನಿನ ಪ್ರಕಾರ, ಅಪರಾಧ ಎಂದರೆ ನ್ಯಾಯಾಲಯದಲ್ಲಿ ನಿರೂಪಿತವಾದರೆ ಮಾತ್ರ ಎಂದು ತಪ್ಪಾಗಿ ತಿಳಿದಿದ್ದಾರೆ. ಕೋರ್ಟಿನಲ್ಲಿ ಹೇಳುವ ಸಾಕ್ಷಿಗಿಂತ ಆತ್ಮಸಾಕ್ಷಿ ಎಂಬುದು ಒಂದು ಇರುತ್ತದೆ. ಅದು ಸದಾ ಎಚ್ಚರಿಸುತ್ತಲೇ ಇರುತ್ತದೆ.

ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನೆನಪಿಸುತ್ತಲೇ ಇರುತ್ತದೆ. ಅದನ್ನು ಮೀರಿ ಮನುಷ್ಯ ಮುಂದುವರಿದಾಗ ಪಾಪಕೃತ್ಯಗಳು ಸಂಭವಿಸುತ್ತವೆ. ಕೆಲವರು ಪ್ರಾಯಶ್ಚಿತ್ತವನ್ನಾದರೂ ಮಾಡಿಕೊಳ್ಳುತ್ತಾರೆ, ಆದರೆ ಕೆಲವು ಪರಮಪಾಪಿಗಳಿಗೆ ಅದರ ಅರಿವು ಇಲ್ಲದೇ ಇರುವುದು ದುರದೃಷ್ಟಕರ.

ಪಾಪದ ಕೆಲಸಗಳಿಗೆ ಪುಣ್ಯದ ಕೆಲಸ ಮಾಡಿ ಬ್ಯಾಲೆನ್ಸ್ ಶೀಟ್‌ನಲ್ಲಿ ನಿಲ್ ಎಂದು ತೋರಿಸಲಾಗದು. ಪುಣ್ಯದ ಕೆಲಸ ಹಾಗೂ ಪಾಪದ ಕೆಲಸಗಳ ಪಟ್ಟಿ ಒಂದೇ ಆಗಿರದೆ ಬೇರೆ ಬೇರೆ ಆಗಿರುತ್ತದೆ. ಮನುಷ್ಯ ಪುಣ್ಯದ ಕೆಲಸ ಮಾಡಿದಾಗ ಪುಣ್ಯಪ್ರಜ್ಞೆ ಇರಬಾರದು. ಅಂದರೆ ತಾನೇನೋ ಒಳ್ಳೆಯ ಕೆಲಸ ಮಾಡಿದೆ ಎಂದು ಬೀಗಬಾರದು. ಆದರೆ ಪಾಪದ ಕೆಲಸ ಮಾಡಿದಾಗ ಪಾಪಪ್ರಜ್ಞೆ ಇರಬೇಕು. ಅದರಿಂದ ಒಂದಷ್ಟು ಪಾಠ ಕಲಿತು, ಮುಂದೆ ಮಾಡುವ ಪಾಪ ಕಡಿಮೆಯಾಗಬಹುದು ಅಥವಾ ಪಾಪಕೃತ್ಯಗಳನ್ನು ಮಾಡದೆಯೇ ಇರಬಹುದು.

ಮನುಷ್ಯನಿಗೆ ಬದುಕಿನ ಉದ್ದೇಶವು ಬೇಗ ಅರಿವಾಗಬೇಕು. ತಾನು ಮಾಡುವ ತಪ್ಪುಗಳಿಗೆ ತಾನೆ ಕ್ಷಮಿಸಿಕೊಳ್ಳುವಷ್ಟು ಉದಾರತೆ ಇರಬಾರದು. ಒಬ್ಬರಿಗೆ ಅನ್ಯಾಯ ಮಾಡಿ, ಒಬ್ಬರ ಮನೆಯ ದೀಪ ನಂದಿಸಿ, ತಮ್ಮ ಮನೆಯ ದೀಪ ಬೆಳಗಿಸುವುದರಲ್ಲಿ ಅರ್ಥವಿಲ್ಲ. ತಪ್ಪು ಎಷ್ಟೇ ಚಿಕ್ಕದಿರಲಿ, ದೊಡ್ಡದಿರಲಿ ಅದು ತಪ್ಪೇ, ಅನ್ಯಾಯವಾಗಲಿ, ಶೋಷಣೆಯಾಗಲಿ ಅವು ಅಷ್ಟೆ. ಚಿಕ್ಕವಯಸ್ಸಿನಲ್ಲಿಯೇ ಮನೆಯ ಹಿರಿಯರು ಪಾಪಪುಣ್ಯಗಳ ಬಗ್ಗೆ ತಿಳಿಹೇಳಿರುತ್ತಾರೆ. ಅಷ್ಟಾಗಿಯೂ ಯಾರ ಪ್ರೇರಣೆಯಿಂದಲೋ ಏನೋ ಬೆಳೆದ ಮೇಲೆ ಕೆಲವರು ವಿವೇಚನೆ ಕಳೆದುಕೊಂಡು ತಪ್ಪು ಹಾದಿ ಹಿಡಿಯುತ್ತಾರೆ. ತನ್ನ ಉಳಿವಿಗಾಗಿ ಹೋರಾಟ ಮಾಡುವುದು ಮಾನವ ಸಹಜ ಗುಣ, ಆದರೆ ತನ್ನ ಏಳ್ಗೆಗಾಗಿ ಅನ್ಯರನ್ನು ಅಳಿಸಿ ಹಾಕುವುದು ದಾನವ ಗುಣ. ಬೇರೆಯವರ ಸಮಾಧಿ ಮೇಲೆ ತಮ್ಮ ಸೌಧ ಕಟ್ಟಿಕೊಳ್ಳುವುದು ಯಾವ ದೊಡ್ಡತನ. ತಿಳಿದು ಬದುಕಿದರೆ ಮಾನವ, ತುಳಿದು ಬದುಕಿದರೆ ದಾನವ ಅಲ್ಲವೇ?

> ❝ ಪುಣ್ಯದ ಕೆಲಸ ಮಾಡುವವರಿಗೆಲ್ಲಾ ಒಳ್ಳೆಯದೇ ಆಗುತ್ತದೆ, ಪಾಪಿಗಳಿಗೆ ಕೆಟ್ಟದಾಗುತ್ತದೆ ಅಂತೇನಿಲ್ಲ. ಸತ್ಕಾರ್ಯ ಮಾಡುವ ಸಜ್ಜನರು ಅಪಘಾತದಲ್ಲಿ, ಮಾರಣಾಂತಿಕ ಖಾಯಿಲೆಯಿಂದ ಅಕಾಲದಲ್ಲಿಯೇ ತೀರಿ ಹೋದ ಉದಾಹರಣೆಗಳಿವೆ. ಹಾಗೆಯೇ ಪಾಪಿ ಚಿರಾಯು ಎಂಬ ಮಾತಿನಂತೆ ಪಾಪಿಗಳು ಉತ್ತಮ ಆರೋಗ್ಯದಿಂದ ಪೂರ್ಣ ಆಯುಷ್ಯವನ್ನು ಅನುಭವಿಸಿ ಸುಖ ಸಾವಿನಿಂದ ಮುಕ್ತಿಯನ್ನು ಪಡೆದಿರುವುದು ಸಹ ಇದೆ. ದೇವರು, ಆಸ್ತಿಕತೆ, ನೈತಿಕ ಭಯ ಇವೆಲ್ಲವೂ ಪಾಪಪುಣ್ಯಗಳನ್ನು ಹುಟ್ಟಿಹಾಕಿವೆ. ಎಲ್ಲಾ ಧರ್ಮಗಳಲ್ಲೂ ಇವುಗಳ ಇಲ್ಲೇಖವಿದೆ. ಹಾಗೆ ನೋಡಿದರೆ ಪಾಪಪುಣ್ಯಕ್ಕೆ ಯಾವ ಧರ್ಮದ ತತ್ತ್ವ–ಸಿದ್ಧಾಂತಗಳ ಅಗತ್ಯವಿಲ್ಲ. ಮನುಷ್ಯ ಧರ್ಮವಿದ್ದರೆ ಸಾಕು ಅದು ಅರಿವಿಗೆ ಬರುತ್ತದೆ. ಮತ್ತೊಬ್ಬರಿಗೆ ಮೋಸ, ಅನ್ಯಾಯ, ಅಧರ್ಮ ಮಾಡಬಾರದು ಎಂಬುದಕ್ಕೆ ಯಾವ ಶಿಕ್ಷಣದ ಅವಶ್ಯಕತೆಯೂ ಇಲ್ಲ, ಯಾವ ಧರ್ಮದ ಅವಶ್ಯಕತೆಯೂ ಇಲ್ಲ.

ಪ್ರತಿಯೊಂದು ದೊಡ್ಡ ಸಂಪತ್ತಿನ ಹಿಂದೆ ಒಂದು ಅಪರಾಧವಿರುತ್ತದೆ ಎಂದು ಫ್ರೆಂಚ್ ಕಾದಂಬರಿಕಾರರಾದ ಹಾಲ್ಜೊರೆ ಬಾಲ್ಜಾಕ್ ತಮ್ಮ 'ದ ಗಾಡ್ ಫಾದರ್' ಎಂಬ ಕಾದಂಬರಿಯಲ್ಲಿ ಹೇಳಿದ್ದಾರೆ. ಮನುಷ್ಯನ ದುರಾಸೆಯು ಅವನನ್ನು ಅಪರಾಧಿಯನ್ನಾಗಿಸುತ್ತದೆ. ಇಂದು ಅನೇಕರು ತಪ್ಪು ಎಂದರೆ ಅದು ಕಾನೂನಿನ ಪ್ರಕಾರ, ಅಪರಾಧ ಎಂದರೆ ನ್ಯಾಯಾಲಯದಲ್ಲಿ ನಿರೂಪಿತವಾದರೆ ಮಾತ್ರ ಎಂದು ತಪ್ಪಾಗಿ ತಿಳಿದಿದ್ದಾರೆ. ಕೋರ್ಟಿನಲ್ಲಿ ಹೇಳುವ ಸಾಕ್ಷಿಗಿಂತ ಆತ್ಮಸಾಕ್ಷಿ ಎಂಬುದು ಒಂದು ಇರುತ್ತದೆ. ಅದು ಸದಾ ಎಚ್ಚರಿಸುತ್ತಲೇ ಇರುತ್ತದೆ. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನೆನಪಿಸುತ್ತಲೇ ಇರುತ್ತದೆ. ಅದನ್ನು ಮೀರಿ ಮನುಷ್ಯ ಮುಂದುವರಿದಾಗ ಪಾಪಕೃತ್ಯಗಳು ಸಂಭವಿಸುತ್ತವೆ. ಕೆಲವರು ಪ್ರಾಯಶ್ಚಿತ್ತವನ್ನಾದರೂ ಮಾಡಿಕೊಳ್ಳುತ್ತಾರೆ. ಆದರೆ ಕೆಲವು ಪರಮಪಾಪಿಗಳಿಗೆ ಅದರ ಅರಿವು ಇಲ್ಲದೇ ಇರುವುದು ದುರದೃಷ್ಟಕರ.

ಸಮಾಜದಲ್ಲಿ ನಡೆಯುವ ಎಲ್ಲಾ ಧರ್ಮಕಾರ್ಯಗಳ ಹಿಂದೆ ಸದುದ್ದೇಶಗಳೇ ಇರುತ್ತವೆ ಎನ್ನಲಾಗದು. ಪಾಪಪ್ರಜ್ಞೆಯಿಂದ ಹೊರ ಬರಲು ಅನೇಕರು ಆಗಾಗ್ಗೆ ಪೂಜೆ, ಅಭಿಷೇಕ, ಉತ್ಸವ, ಮೆರವಣಿಗೆ, ದಾನ, ಧರ್ಮ, ಅನ್ನ ಸಂತರ್ಪಣೆ ಹೀಗೆ ಅನೇಕ ಧರ್ಮ ಕಾರ್ಯಗಳನ್ನು ಏರ್ಪಡಿಸುತ್ತಿರುತ್ತಾರೆ. ಪಾಪದ ಹಣದಲ್ಲಿ ಪುಣ್ಯದ ಕೆಲಸ ಮಾಡಿದರೆ ಯಾರು ಮೆಚ್ಚುವರು ಅಲ್ಲವೇ? ದೇವಸ್ಥಾನದ ಹುಂಡಿಗಳಲ್ಲಿ ಸಂಗ್ರಹವಾಗುವ ಲಕ್ಷ, ಕೋಟಿ ಹಣ ಭಕ್ತರು ದೇವರ ಮೇಲೆ ಇರಿಸಿರುವ ಭಕ್ತಿಯ ಕಾಣಿಕೆ, ಹರಕೆಯ ಕಾಣಿಕೆಯೇ ಆಗಿರುವುದಿಲ್ಲ. ಬಹುಪಾಲು ಹಣ ತಪ್ಪು ಕಾಣಿಕೆ ರೂಪದಲ್ಲಿ ಹುಂಡಿ ಸೇರಿರುತ್ತದೆ. ಮನುಷ್ಯ ಪಾಪಪ್ರಜ್ಞೆಯಿಂದ ಹೊರಬರಲು, ಸಮಾಧಾನಪಡಲು ಕಂಡುಕೊಂಡಿರುವ ಒಂದು ಸುಲಭ ಮಾರ್ಗ ಹುಂಡಿಗೆ ಕಾಣಿಕೆ ಹಾಕುವುದು. ಮನುಷ್ಯನ ದೃಷ್ಟಿಯಲ್ಲಿ, ಅವನ ಆಡಿಟ್‌ನಲ್ಲಿ ಲೆಕ್ಕ ಚುಕ್ತ ಆಗಿರಬಹುದು. ಆದರೆ ದೇವರ ಆಡಿಟ್‌ನಲ್ಲಿ ಬೇರೆಯದೇ ಲೆಕ್ಕ ನಿರ್ವಹಣೆಯಾಗಿರುತ್ತದೆ.

ಒಮ್ಮೆ ಮಾಡಬಾರದ ತಪ್ಪನ್ನು ಮಾಡಿ ದೇವರ ಗುಡಿಯಲ್ಲಿ ಮೂರ್ತಿಯ ಮುಂದೆ ನಿಂತು ತಪ್ಪನ್ನು ಮನ್ನಿಸುವಂತೆ ಕೇಳುವುದು ಸಹಜ. ಆದರೆ ತಪ್ಪು ಕಾಣಿಕೆ ಹಾಕಿ ಮತ್ತೆ ಮಾಡಿದ ತಪ್ಪನ್ನೇ ಪದೇ ಪದೆ ಮಾಡುವುದು ಎಂದರೆ, ತಪ್ಪು ಕಾಣಿಕೆ ಎಂಬುದು ನವೀಕರಣ ಬಾಬ್ತಿನ ರೀತಿ ಆಗುತ್ತದೆ. ದೇವರ ಮೂರ್ತಿ ಕಲ್ಲು ಅಥವಾ ಲೋಹ ಆಗಿರದೆ, ಮಾತನಾಡುವ ಹಾಗಿದ್ದರೆ ಮನುಷ್ಯ ಎಸಗಿದ ಕೃತ್ಯಕ್ಕೆ ಎಂತಹ ದಂಡನೆ ಸಿಗುತ್ತಿತ್ತೋ ಹೇಳಲಾಗದು. ಮಾಡಿದ ತಪ್ಪನ್ನು ದೇವರ ಮುಂದೆ ನಿವೇದಿಸುವ ಬದಲು ದೊಡ್ಡವರ ಮುಂದೆ, ಸನ್ಮಿತ್ರರ ಮುಂದೆ ಹೇಳಿಕೊಂಡರೆ ತಿದ್ದಿ ಬುದ್ಧಿ ಹೇಳುವ ಸಾಧ್ಯತೆಯಾದರೂ ಇರುತ್ತದೆ. ಅದಬಿಟ್ಟು ಕಲ್ಲು ದೇವರ ಮುಂದೆ ಕ್ಷಮೆ ಯಾಚಿಸಿ, ದೇವರು ಕ್ಷಮಿಸಿದ್ದಾನೆ ಎಂದು ಭಾವಿಸುವುದು ತಪ್ಪು ಅಲ್ಲವೇ?

ದೇವಸ್ಥಾನಕ್ಕೆ ಹೋಗಿ ಮಂಗಳಾರತಿ ತೆಗೆದುಕೊಳ್ಳುವುದು ತನ್ನಲ್ಲಿನ ದುಷ್ಟಗುಣಗಳನ್ನು ಸುಟ್ಟು ಹಾಕು ಎಂಬುದರ ಸಂಕೇತ, ತೀರ್ಥ ತೆಗೆದುಕೊಳ್ಳುವುದು ಮಲಿನವಾದ ತನ್ನ ದೇಹವನ್ನು ಶುದ್ಧೀಕರಿಸು ಎಂಬುದರ ಸಂಕೇತ, ಗಂಟೆಯ ನಾದವು ತಪ್ಪು ಮಾಡುವಾಗ ಎಚ್ಚರಿಕೆ ಗಂಟೆಯಂತೆ ಎಚ್ಚರಿಸು ಎಂಬುದರ ಸಂಕೇತ ಎಂದು ಭಾವಿಸಬೇಕು. ಆದರೆ ಇವುಗಳ ಅರ್ಥಗಳು ಅನರ್ಥವಾಗುವಂತೆ ಎಲ್ಲವೂ ಯಾಂತ್ರಿಕವಾಗಿ ನಡೆಯುತ್ತಿವೆ. ಪಾಪಗಳನ್ನು ಮಾಡಿ ನದಿಯಲ್ಲಿ ಪುಣ್ಯಸ್ನಾನ ಮಾಡಿದರೆ ಮೈಯಲ್ಲಿನ ಕೊಳೆ ಹೋಗುತ್ತದೆಯೇ ಹೊರತು ಪಾಪಗಳು ತೊಳೆದುಹೋಗುವುದಿಲ್ಲ.

ಪುಣ್ಯದ ಕೆಲಸ ಮಾಡುವವರಿಗೆಲ್ಲಾ ಒಳ್ಳೆಯದೇ ಆಗುತ್ತದೆ, ಪಾಪಿಗಳಿಗೆ ಕೆಟ್ಟದಾಗುತ್ತದೆ ಅಂತೇನಿಲ್ಲ. ಸತ್ಕಾರ್ಯ ಮಾಡುವ ಸಜ್ಜನರು ಅಪಘಾತದಲ್ಲಿ, ಮಾರಣಾಂತಿಕ ಖಾಯಿಲೆಯಿಂದ ಅಕಾಲದಲ್ಲಿಯೇ ತೀರಿ ಹೋದ ಉದಾಹರಣೆಗಳಿವೆ. ಹಾಗೆಯೇ ಪಾಪಿ ಚಿರಾಯು ಎಂಬ ಮಾತಿನಂತೆ ಪಾಪಿಗಳು ಉತ್ತಮ ಆರೋಗ್ಯದಿಂದ ಪೂರ್ಣ ಆಯುಷ್ಯವನ್ನು ಅನುಭವಿಸಿ ಸುಖ ಸಾವಿನ ಮುಕ್ತಿಯನ್ನು ಪಡೆದಿರುವುದು ಸಹ ಇದೆ.

ಭಕ್ತಿ ಎಂಬುದು ನಿಜವಾದ ಶಕ್ತಿ, ಅದು ಪಾಪಕೃತ್ಯ ಮಾಡುವ ಮೊದಲು ಎಚ್ಚರಿಸಿದರೆ ಮಾತ್ರ. ಇಲ್ಲವಾದಲ್ಲಿ ಭಕ್ತಿ ಎಂಬುದು ಒಂದು ಟೂಲ್ ಅಷ್ಟೆ. ಮನುಷ್ಯ ತಾನು ಒಂಟಿಯಾಗಿದ್ದಾಗ ಮಾತ್ರ ತನ್ನ ನಿಜವಾದ ಮುಖವಾಡ ಹೊಂದಿರುತ್ತಾನೆ. ಸಮಾಜದ ಮುಂದೆ ಮುಖವಾಡಗಳದ್ದೇ ಕಾರುಬಾರು. ಅನ್ಯರಿಗೆ ವಂಚಿಸುವುದಷ್ಟೇ ಅಲ್ಲ, ತನಗೆ ತಾನು ವಂಚಿಸಿಕೊಂಡು ಆತ್ಮವಂಚನೆ ಮಾಡಿಕೊಳ್ಳುತ್ತಿರುವುದು ಮಾತ್ರ ವಿಪರ್ಯಾಸ! ಮನುಷ್ಯ ಸಮಯದ ಗೊಂಬೆಯಂತೆ ವರ್ತಿಸುತ್ತಾನೆ. ಎಷ್ಟೇ ಜಾಗೃತನಾಗಿದ್ದರೂ, ಸಮಯ ಬಂದಾಗ ತನ್ನ ನೈಜತೆಯನ್ನು ಪ್ರದರ್ಶಿಸಿಬಿಡುತ್ತಾನೆ. ಶಿಕ್ಷಣ ಮನುಷ್ಯನಿಗೆ ವಿವೇಕ ಕಲಿಸುತ್ತದೆ ಎಂದು ನಂಬಲಾಗುತ್ತದೆ. ಆದರೆ ಎಷ್ಟೋ ಪ್ರಕರಣಗಳನ್ನು ಗಮನಿಸಿದಾಗ ಇದು ಸುಳ್ಳು ಎನಿಸುತ್ತದೆ. ಅವಿದ್ಯಾವಂತರು ವಂಚನೆ ಮಾಡಿದರೆ, ವಿದ್ಯಾವಂತರು ನಯವಂಚನೆ ಮಾಡುತ್ತಾರೆ.

ದೇವರು, ಆಸ್ತಿಕತೆ, ನೈತಿಕ ಭಯ..... ಇವೆಲ್ಲವೂ ಪಾಪಪುಣ್ಯಗಳನ್ನು ಹುಟ್ಟಿಹಾಕಿವೆ. ಎಲ್ಲಾ ಧರ್ಮಗಳಲ್ಲೂ ಇವುಗಳ ಉಲ್ಲೇಖವಿದೆ. ಹಾಗೆ ನೋಡಿದರೆ ಪಾಪಪುಣ್ಯಕ್ಕೆ ಯಾವ ಧರ್ಮದ ತತ್ತ್ವ–ಸಿದ್ಧಾಂತಗಳ ಅಗತ್ಯವಿಲ್ಲ. ಮನುಷ್ಯ ಧರ್ಮವಿದ್ದರೆ ಅದು ಅರಿವಿಗೆ ಬರುತ್ತದೆ. ಮತ್ತೊಬ್ಬರಿಗೆ ಮೋಸ, ಅನ್ಯಾಯ, ಅಧರ್ಮ ಮಾಡಬಾರದು ಎಂಬುದಕ್ಕೆ ಯಾವ ಶಿಕ್ಷಣದ ಅವಶ್ಯಕತೆಯೂ ಇಲ್ಲ, ಯಾವ ಧರ್ಮದ ಅವಶ್ಯಕತೆಯೂ ಇಲ್ಲ.

ಹೂರಣ: ಪಾಪಿಗಳಿಗೆ ಒಳಿತಾಯಿತು ಎಂದ ಮಾತ್ರಕ್ಕೆ ಸಜ್ಜನರು ಪಾಪಕೃತ್ಯ ಮಾಡಬೇಕಿಲ್ಲ.

ಮಕ್ಕಳ ಜೀವನ ಶೈಲಿಗೆ ತಂದೆ–ತಾಯಿ ಅಂಜುವ ಸ್ಥಿತಿ ನಿರ್ಮಾಣ

'ಪಾರ್ಟಿ' ನಾಟಕ ಕೃತಿ ಬಿಡುಗಡೆ ಸಮಾರಂಭದಲ್ಲಿ ಸಾಹಿತಿ ಜಯಂತ್ ಕಾಯ್ಕಿಣಿ ಅಭಿಮತ



ರಂಗಾಯಣ ಆವರಣದ ವನರಂಗದಲ್ಲಿ ನಾಟಕಕಾರ ಮಹೇಶ್ ಎಲಕುಂಚವಾರ್ ರಚಿತ ಮರಾಠಿ ನಾಟಕದ ಕನ್ನಡ ಅನುವಾದಿತ 'ಪಾರ್ಟಿ' ನಾಟಕ ಕೃತಿಯನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು,ಮಾ.29(ಎಸ್‌ಪಿಎನ್)– ನಗರ ಪ್ರದೇಶದಲ್ಲಿ ಬದಲಾದ ಜೀವನ ಶೈಲಿಯಿಂದ ಸಂಬಂಧಗಳಲ್ಲಿ ಬಿರುಕು ಕಾಣಿಸಿಕೊಂಡಿವೆ. ಪಟ್ಟಣದಲ್ಲಿ ನೆಲೆಸಿರುವ ಈಗಿನ ಯುವಕರು ಐರನ್ ಮಾಡಿದ ಬಟ್ಟೆ ಧರಿಸುತ್ತಾರೆ. ಜೊತೆಗೆ ಚಪ್ಪಲಿ ಧರಿಸುತ್ತಾರೆ. ಹಳ್ಳಿಯಿಂದ ನಗರಕ್ಕೆ ಬಂದ ತಂದೆ–ತಾಯಿ ಈ ದೃಶ್ಯವನ್ನು ನೋಡಿ ಅವರಿಗೆ ಹೆದರುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಹಿರಿಯ ಸಾಹಿತಿ ಜಯಂತ್ ಕಾಯ್ಕಿಣಿ ಅಭಿಪ್ರಾಯಪಟ್ಟರು.

ಮೈಸೂರು ರಂಗಾಯಣ ಆವರಣದ ವನರಂಗದಲ್ಲಿ ನಿರಂತರ ಫೌಂಡೇಶನ್, ಅಭಿರುಚಿ ಪ್ರಕಾಶನ ಸಹಯೋಗದೊಂದಿಗೆ ಆಯೋಜಿಸಿದ್ದ ನಾಟಕಕಾರ ಮಹೇಶ್ ಎಲಕುಂಚವಾರ್ ರಚಿತ ಮರಾಠಿ ನಾಟಕದ ಹಿರಿಯ ರಂಗಕರ್ಮಿ ಪ್ರಸಾದ್ ಕುಂದೂರು ಕನ್ನಡಕ್ಕೆ ಅನುವಾದಿಸಿರುವ 'ಪಾರ್ಟಿ' ನಾಟಕ ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಮರಾಠಿ ನಾಟಕದಲ್ಲಿ ಮಹೇಶ್ ಎಲಕುಂಚವಾರ್ ರಚನೆಯ ನಾಟಕಗಳಲ್ಲಿ ಅನಗತ್ಯ ಪದಗಳನ್ನು ಸೇರಿಸಲು ಇಷ್ಟಪಡುತ್ತಿರಲಿಲ್ಲ. ಆ ಸಂಭಾಷಣೆಗೆ ಎಷ್ಟು ಪದಗಳು ಅವಶ್ಯವೋ ಅಷ್ಟನ್ನು ಮಾತ್ರ ಸೇರಿಸುತ್ತಿದ್ದರು. ಮನುಷ್ಯನ ನಿತ್ಯ ಜೀವನದಲ್ಲಿ ನಾಟಕ ಬಂದಾಗಿದೆ. ಇದೀಗ ಅಕ್ಷರ ರೂಪದಲ್ಲಿ ಬಂದಿರುವ ನಾಟಕ ಸಮಾಜದ ಪ್ರತಿಬಿಂಬ ಆಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಲಕ್ಕಿ ಸಮುದಾಯ ಜಾತ್ರೆ, ಒಕ್ಕಣೆ ಸಮಯದಲ್ಲಿ ನಾನಾ ವೇಷ ಧರಿಸಿ, ಬೀದಿಬೀದಿಗಳಲ್ಲಿ ನೃತ್ಯ ಮಾಡುತ್ತಾರೆ. ಅವರು ಸಭ್ಯ ಸಮಾಜದ ಮೇಲಿರುವ ಕೋಪವನ್ನು ನಾಟಕದ ಪಾತ್ರಗಳಲ್ಲಿ ಅಭಿನಯಿಸಿ ತಮ್ಮ ಆಕ್ರೋಶಗಳನ್ನು ಹೊರಹಾಕುತ್ತಾರೆ. ಏಕೆಂದರೆ, ಸಭ್ಯ ಸಮಾಜ ಅವರನ್ನು ಸಮಾಜದ ಮುಖ್ಯವಾಹಿನಿಯಿಂದ ದೂರವಿಟ್ಟಿರುವ ಕೋಪದಿಂದ ಈ ರೀತಿ ಮಾಡುತ್ತಾರೆ ಎಂದರು.

ಹಳ್ಳಿಗಳಿಂದ ನಗರ ಪ್ರದೇಶಕ್ಕೆ ಬಂದಿರುವ ತಳಸಮುದಾಯ ಯುವಕರು, ಸಭ್ಯ ಸಮಾಜವಾದ ನಗರ ಪ್ರದೇಶದಲ್ಲಿ ಬದುಕುತ್ತಿರುವ ಜೀವನ ಶೈಲಿ ನೋಡಿ, ತಮ್ಮನ್ನು ಶಿಕ್ಷಣದಿಂದ ವಂಚಿಸಿ, ಇವರು ಮಾತ್ರ ಸುಖ ಜೀವನ ನಡೆಸುತ್ತಿದ್ದಾರೆ ಎಂದು ಮನಸ್ಸಿನಲ್ಲೇ ಶಪಿಸುತ್ತಾ, ವ್ಯವಸ್ಥೆ ವಿರುದ್ಧ ಸೆಟೆದು ನಿಲ್ಲಲು ಪ್ರಯತ್ನಿಸುತ್ತಾರೆ. ಇಂತಹ ಪ್ರಸಂಗಗಳನ್ನು 'ಪಾರ್ಟಿ' ನಾಟಕ ಬೆಳಕು ಚೆಲ್ಲಿದೆ ಎಂದರು. ವೇದಿಕೆಯಲ್ಲಿ ರಂಗಾಯಣ ಮಾಜಿ ನಿರ್ದೇಶಕ ಚಿದಂಬರರಾವ್ ಜಂಬೆ, ನಾಟಕಕಾರ ಚೌಗಲೆ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಪ್ರಕಾಶಕ ಅಭಿರುಚಿ ಗಣೇಶ್, ಅನುವಾದಕ ಪ್ರಸಾದ್ ಕುಂದೂರು ಸೇರಿದಂತೆ ಇತರರು ಉಪಸ್ಥಿತರಿದ್ದರು.

> ❝ ನಗರದ ಪ್ರದೇಶದಲ್ಲಿ ಬದುಕುತ್ತಿರುವ ಸಭ್ಯ ಸಮಾಜ ಒಂಟಿತನದಿಂದ ಬಳಲುತ್ತಿದೆ. ಸಭ್ಯ ಸಮಾಜ ಹಾವ ಭಾವಗಳನ್ನು ಗಮನಿಸುವ ತಳ ಸಮುದಾಯ ತಮ್ಮನ್ನು ಈ ವ್ಯವಸ್ಥೆಯಿಂದ ದೂರವಿಟ್ಟ ಸಮುದಾಯವನ್ನು ಸದಾ ಶಪಿಸುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ನಾಟಕಕಾರ ಮಹೇಶ್ ಎಲಕುಂಚವಾರ್ ರಚಿತ ನಾಟಕವನ್ನು ಯಥಾವತ್ ಕನ್ನಡಕ್ಕೆ ಅನುವಾದಿಸಿರುವ ಪ್ರಸಾದ್ ಕುಂದೂರು, ಕನ್ನಡದ ನೆಲಕ್ಕೆ ಹೊಂದುವಂತೆ ಅನುವಾದಿಸಿರುವುದು ಈ ನಾಟಕದ ವಿಶೇಷ.
>
> **–ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ, ಹಿರಿಯ ವಿಮರ್ಶಕ**

ಅವಧಿ ವಿಸ್ತರಣೆ

ಮೈಸೂರು, ಮಾ.29– ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜ್, ಡೆಹರಾಡೂನ್‌ನಲ್ಲಿ ಜನವರಿ 2027ರ ವರ್ಷದ 8ನೇ ತರಗತಿಗೆ ಪ್ರವೇಶ ಬಯಸುವ ಕರ್ನಾಟಕ ರಾಜ್ಯದ ಬಾಲಕ ಮತ್ತು ಬಾಲಕಿಯರ ಪ್ರವೇಶಕ್ಕಾಗಿ ಅರ್ಹತಾ ಪ್ರವೇಶ ಪರೀಕ್ಷೆಯು ಜೂ.7 ರಂದು ಬೆಂಗಳೂರು ಕೇಂದ್ರದಲ್ಲಿ ನಡೆಯಲಿದ್ದು, ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಏ.5 ರಿಂದ 15ರವರೆಗೆ ವಿಸ್ತರಿಸಲಾಗಿರುತ್ತದೆ.

ಅಭ್ಯರ್ಥಿಗಳು 7ನೇ ತರಗತಿಯಲ್ಲಿ ಓದುತ್ತಿದ್ದು, 11 1/2 ವರ್ಷದಿಂದ 13 ವರ್ಷದೊಳಗಿರುವ (ಅಂದರೆ ದಿನಾಂಕ 02–01–2014 ರಿಂದ 01–07–2015 ರೊಳಗೆ ಜನಿಸಿರುವ) ಅರ್ಹ ಅಭ್ಯರ್ಥಿಗಳು 15 ಏಪ್ರಿಲ್ 2026ರ ಒಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಮತ್ತು ಹಿಂದಿನ ವರ್ಷದ ಎಲ್ಲಾ ಪ್ರಶ್ನೆ ಪತ್ರಿಕೆಗಳನ್ನು ಪಡೆಯಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ನಿರ್ದೇಶಕರನ್ನು ಅಥವಾ ಕಾರ್ಯಾಲಯದ ದೂ.ಸಂ. 080 25589459 ಸಂಪರ್ಕಿಸುವುದು ಎಂದು ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಯ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಐಪಿಎಲ್–2026: ರೋಹಿತ್–ರಿಕೆಲ್ಟನ್ ಶತಕದಾಟ; ಮುಂಬೈಗೆ ಭರ್ಜರಿ ಗೆಲುವು



ಮುಂಬೈ, ಮಾ.29(ವಿವಿಹೆಚ್)– ರೋಹಿತ್ ಶರ್ಮಾ ಹಾಗೂ ರಿಯಾನ್ ರಿಕೆಲ್ಟನ್ ಅವರ ಭರ್ಜರಿ ಶತಕದಾಟ ನೆರವಿನಿಂದ ಅತಿಥೇಯ ಮುಂಬೈ ಇಂಡಿಯನ್ಸ್, ಕೋಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿ, ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 19ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಕೋಲ್ಕತ್ತಾ ನೈಟ್‌ರೈಡರ್ಸ್ ಟಾಸ್ ಸೋತು ಮೊದಲು ಬ್ಯಾಟ್ ಮಾಡಿತು. ಅದರಂತೆ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 220 ರನ್ ಗಳಿಸಿ ಮುಂಬೈಗೆ 221ರನ್‌ಗಳ ಬೃಹತ್ ಗುರಿ ನೀಡಿತ್ತು. ಈ ಮೊತ್ತ ಬೆನ್ನತ್ತಿದ ಮುಂಬೈ 19.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 224 ರನ್ ಕಲೆಹಾಕಿ ಗೆಲುವಿನ ನಗೆ ಬೀರಿತು.

ಕೆಕೆಆರ್ ಇನ್ನಿಂಗ್ಸ್: ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕ ಅಜಿಂಕ್ಯಾ ರಹಾನೆ ಹಾಗೂ ರಘುವಂಶಿ ಅವರ ಸ್ಫೋಟಕ ಬ್ಯಾಟಿಂಗ್ ಬಲದಿಂದ ಬೃಹತ್ ಮೊತ್ತ ಕಲೆಹಾಕಿತು. ಅಜಿಂಕ್ಯಾ ರಹಾನೆ ಹಾಗೂ ಫಿನ್ ಅಲೆನ್ 69 ರನ್‌ಗಳ ಸ್ಫೋಟಕ ಆರಂಭ ನೀಡಿದರು. ಈ ಹಂತದಲ್ಲಿ 17 ಎಸೆತಗಳಲ್ಲಿ 37 ರನ್ ಗಳಿಸಿದ್ದ ಅಲೆನ್ ಶಾರ್ದೂಲ್ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. ಕ್ಯಾಮರೂನ್ ಗ್ರೀನ್ 18 ರನ್ ಬೇಗನೆ ವಿಕೆಟ್ ಒಪ್ಪಿಸಿದರು.

ಇತ್ತ ನಾಯಕ ರಹಾನ್ 40 ಎಸೆತಗಳಲ್ಲಿ 4 ಬೌಂಡರಿ, 5 ಸಿಕ್ಸರ್ ಸಹಿತ 69ರನ್ ಚಚ್ಚಿದರು. ಬಳಿಕ ಬಂದ ವಿಕೆಟ್ ಕೀಪರ್, ಬ್ಯಾಟರ್ ಅಂಗ್ರಿಷ್ ರಘುವಂಶಿ 29 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್ ಸಹಿತ 51 ರನ್ ಕಲೆಹಾಕಿದರು. ಹಾಗೂ ರಿಂಕು ಸಿಂಗ್ ಅಜೇಯ 33 ಬಾರಿಸುವ ಮೂಲಕ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು.

ಮುಂಬೈ ಪರ ಶಾರ್ದೂಲ್ ಠಾಕೂರ್ 3 ವಿಕೆಟ್ ಪಡೆದು ಮಿಂಚಿದರೆ, ಹಾರ್ದಿಕ್ ಪಾಂಡ್ಯ 1 ವಿಕೆಟ್ ಪಡೆದುಕೊಂಡರು.

ಮುಂಬೈ ಇನ್ನಿಂಗ್ಸ್: ಕೆಕೆಆರ್ ನೀಡಿದ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಮುಂಬೈಗೆ ಮಾಜಿ ನಾಯಕ ರೋಹಿತ್ ಶರ್ಮಾ ಮತ್ತು ರಿಯಾನ್ ರಿಕೆಲ್ಟನ್ ಭರ್ಜರಿ ಆರಂಭ ಒದಗಿಸಿದರು. ತಮ್ಮ ಅವರೋಘ ಬ್ಯಾಟಿಂಗ್‌ನಿಂದ ಕೆಕೆಆರ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಈ ಜೋಡಿ ಕೇವಲ 71 ಎಸೆತಗಳಲ್ಲಿ 148 ರನ್ ಗಳಿಸಿ ತಂಡಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿತು.

ರೋಹಿತ್ ಶರ್ಮಾ 38 ಎಸೆತಗಳಲ್ಲಿ ತಲಾ 6 ಬೌಂಡರಿ, ಸಿಕ್ಸರ್ ಸಹಿತ 78 ರನ್ ಗಳಿಸಿ ಔಟಾದರು. ಬಳಿಕ ಬಂದ ಸೂರ್ಯಕುಮಾರ್ ಯಾದವ್ 8 ಎಸೆತಗಳಲ್ಲಿ 16 ರನ್ ಕಲೆಹಾಕಿ ನಿರ್ಗಮಿಸಿದರು. ಇತ್ತ ಸಮಯೋಚಿತ ಆಟವಾಡುತ್ತಿದ್ದ ರಿಕೆಲ್ಟನ್ 43 ಎಸೆತಗಳಲ್ಲಿ 4 ಬೌಂಡರಿ, 8 ಸಿಕ್ಸರ್ ಸಹಿತ 81 ರನ್ ಗಳಿಸಿ ಆಡುತ್ತಿದ್ದ ವೇಳೆ ಇಲ್ಲದ ರನ್ ಕದಿಯಲು ಹೋಗಿ ರನ್ ಔಟ್ ಆದರು.

ನಂತರ ಬಂದ ತಿಲಕ್ ವರ್ಮಾ 20 ರನ್ ಗಳಿಸಿ ಔಟಾದರೆ, ನಾಯಕ ಹಾರ್ದಿಕ್ ಪಾಂಡ್ಯ ಅಜೇಯ 18 ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ನಮನ್ ಧಿರ್ 4 ರನ್ ಗಳಿಸಿ ಸ್ಕ್ರೀಜ್‌ನಲ್ಲಿದ್ದರು. ಕೆಕೆಆರ್ ಪರ ಕಾರ್ತಿಕ್ ತ್ಯಾಗಿ, ಸುನೀಲ್ ನರೈನ್ ಹಾಗೂ ವೈಭವ್ ಅರೋರಾ ತಲಾ ಒಂದೊಂದು ವಿಕೆಟ್ ಪಡೆದರು.

ದೇಶಿ ಬಯೋಗ್ಯಾಸ್‌ನಿಂದ ಸಿಲಿಂಡರ್‌ಗಳ ಸಮಸ್ಯೆ ನಿವಾರಣೆ

'ಇಂಧನ, ನೀರು, ಸುಸ್ಥಿರ ಮನೆಗಳು' ವಿಚಾರದ ಚರ್ಚೆಯಲ್ಲಿ ನಿವೃತ್ತ ಇಂಜಿನಿಯರ್ ಸಲಹೆ



ಮಳೆ ನೀರು ಕೊಯ್ಲು ಕುರಿತು ಮಾಹಿತಿ ನೀಡುತ್ತಿರುವುದು

ಮೈಸೂರು,ಮಾ.29(ಎಸ್‌ಪಿಎನ್)– ಮಧ್ಯಪ್ರಾಚ್ಯದಲ್ಲಿ ಯುದ್ಧ ಆರಂಭವಾದಗಿನಿಂದ ದೇಶಾದ್ಯಂತ ಅಡುಗೆ ಮತ್ತು ವಾಣಿಜ್ಯ ಬಳಕೆಯ ಅನಿಲದ ಕೊರತೆ ಎದುರಾಗಿದೆ. ಈ ಸಮಸ್ಯೆಯಿಂದ ಹೊರಬರಲು ದೇಶಿ ಬಯೋಗ್ಯಾಸ್ ತಯಾರಿಕೆಗೆ ಒತ್ತು ನೀಡಬೇಕು. ಇದರಿಂದ ಗೃಹ ಬಳಕೆ ಹಾಗೂ ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ನಿವೃತ್ತ ಇಂಜಿನಿಯರ್ ರಮೇಶ್ ಕಿಕ್ಕೇರಿ ಅಭಿಪ್ರಾಯಪಟ್ಟರು.

ಮೈಸೂರು ಬೋಗಾದಿ ರೈಲ್ವೆ ಬಡಾವಣೆಯಲ್ಲಿರುವ ರಮೇಶ್ ಕಿಕ್ಕೇರಿ ನಿವಾಸದಲ್ಲಿ ಮೈಸೂರು ಗ್ರಾಹಕ ಪರಿಷತ್ ಏರ್ಪಡಿಸಿದ್ದ ಸಭೆಯಲ್ಲಿ 'ಇಂಧನ, ನೀರು, ಸುಸ್ಥಿರ ಮನೆಗಳು' ವಿಷಯ ಕುರಿತು ಪ್ರಾತ್ಯಕ್ಷತೆ ನೀಡಿ, ಸದಸ್ಯರಿಗೆ ಮಾಹಿತಿ ನೀಡುತ್ತ, ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದಲ್ಲಿ ಬಯೋಗ್ಯಾಸ್, ಸೋಲಾರ್ ವಿದ್ಯುತ್, ಮಳೆ ನೀರು ಕೊಯ್ಲು ಪದ್ಧತಿ ಅಳವಡಿಕೆ ಮಾಡಿಕೊಂಡರೆ ಬಹುತೇಕ ಅಡುಗೆ ಅನಿಲ, ವಿದ್ಯುತ್, ನೀರಿನ ಸಮಸ್ಯೆಗೆ ಪರಿಹಾರ ದೊರೆಯಲಿದೆ ಎಂದರು.

ಅಡುಗೆ ಅನಿಲ, ವಿದ್ಯುತ್, ಕುಡಿಯುವ ನೀರಿನ ವಿಚಾರದಲ್ಲಿ ಭಾರತ ಸ್ವಾವಲಂಬನೆ ಸಾಧಿಸಬೇಕೆಂದು ಹೇಳಿದ ಮಾತ್ರಕ್ಕೆ ನಮ್ಮ ಜನರು ಸುಲಭವಾಗಿ ದೇಶಿ ಬಯೋಗ್ಯಾಸ್, ಸೋಲಾರ್ ಫೆನಲ್, ಮಳೆ ನೀರು ಕೊಯ್ಲು ಅಳವಡಿಕೆಗೆ ಮುಂದಾಗುವುದಿಲ್ಲ. ಸಮಸ್ಯೆ ಬಂದಾಗ ಅದರಿಂದ ಮುಕ್ತಿ ಹೊಂದಲು ತಾತ್ಕಾಲಿಕವಾಗಿ ಅಳವಡಿಕೆ ಮಾಡಿಕೊಂಡು ಸಮಸ್ಯೆಯಿಂದ ಪಾರಾಗಲು ಮುಂದಾಗುತ್ತಾರೆ. ಅದರ ಬದಲು ನಮ್ಮ ನಮ್ಮ ಮನೆಯಲ್ಲೇ ದಿನನಿತ್ಯ ಉತ್ಪತ್ತಿಯಾಗುವ ಹಸಿ ತ್ಯಾಜ್ಯವನ್ನು ತಿಪ್ಪೆಗೆ ಬಿಸಾಕುವ ಬದಲು ಬಯೋಗ್ಯಾಸ್ ತಯಾರಿಕೆಗೆ ಮುಂದಾದರೆ, ನಮ್ಮ ದೇಶ ಬೇರೆ ದೇಶದ ಮೇಲೆ ಅವಲಂಬಿತವಾಗುವುದನ್ನು ತಡೆಯಬಹುದು ಎಂದರು.

ಈಗಾಗಲೇ ನಮ್ಮ ಮನೆಯಲ್ಲಿ ಅಡುಗೆ ಅನಿಲ, ವಿದ್ಯುತ್ ಹಾಗೂ ಮಳೆ ನೀರು ಕೊಯ್ಲು ಪದ್ಧತಿ ಅಳವಡಿಕೆಯಿಂದಾಗಿ ಮೂಲಸೌಕರ್ಯ ಒದಗಿಸುವಂತೆ ಸ್ಥಳೀಯ ಸಂಸ್ಥೆಗಳ ಮೇಲಿನ ಅವಲಂಬನೆ ಶೇ.60ರಷ್ಟು ಕಡಿಮೆಯಾಗಿದೆ. ಬಯೋಗ್ಯಾಸ್ ತಯಾರಿಕೆಯಿಂದಾಗಿ ನಮ್ಮ ಮನೆಗೆ ಅಡುಗೆ ಅನಿಲದ ಸಿಲಿಂಡರ್ ವರ್ಷಕ್ಕೊಂದು ಖರೀದಿ ಮಾಡುತ್ತೇವೆ. ಸೋಲಾರ್ ಫೆನಲ್ ಅಳವಡಿಕೆಯಿಂದ ನಮ್ಮ ಮನೆಯ ವಿದ್ಯುತ್ ಬಿಲ್(ಕನಿಷ್ಟ ಶುಲ್ಕ) ಶೂನ್ಯಕ್ಕಿಳಿದಿದೆ. ಮಳೆ ನೀರು ಕೊಯ್ಲು ಅಳವಡಿಕೆಯಿಂದ ಶನಿವಾರ ರಾತ್ರಿ ಸುರಿದ ಮಳೆಯಿಂದಾಗಿ 1500 ಲೀಟರ್ ನೀರು ಸಂಪ್‌ನಲ್ಲಿ ಶೇಖರಣೆ ಆಗಿದೆ ಎಂದು ಸಾಕ್ಷಿ ಸಮೇತ ಪ್ರಾತ್ಯಕ್ಷತೆಯಲ್ಲಿ ವಿವರಿಸಿದರು.

ಬಯೋಗ್ಯಾಸ್ ಬಳಕೆಗೆ ಮನೆ ಮುಂಭಾಗ 4X4 ಅಡಿ ಜಾಗ ಸಾಕು. ಸಾವಿರ ಲೀಟರ್ ಹಾಗೂ 750 ಲೀಟರ್ ಸಾಮರ್ಥ್ಯದ ವಾಟರ್ ಟ್ಯಾಂಕ್, ಪ್ಲಾಸ್ಟಿಕ್ ಪೈಪ್ ಸೇರಿದಂತೆ ಇತರೆ ಪರಿಕರಗಳಿಗೆ ಒಟ್ಟು 18ರಿಂದ 20 ಸಾವಿರದಲ್ಲಿ ಬಯೋಗ್ಯಾಸ್ ತಯಾರಿಸಬಹುದು. ಮೊದಲು 200ಕೆಜಿ ತೂಕದ ಸಗಣಿಯನ್ನು ಬೇರಸಿ ಬಯೋಗ್ಯಾಸ್ ತಯಾರಿಕೆಗೆ ಹಣಿಗೊಳಿಸಬೇಕು. ನಂತರ ಮನೆಯಲ್ಲೇ ತಯಾರಾಗುವ ಹಸಿ ತ್ಯಾಜ್ಯವನ್ನು ಬಳಸಿ ಬಯೋ ಗ್ಯಾಸ್ ತಯಾರಿಸಬಹುದು. ಇಷ್ಟರಲ್ಲಿ 4 ಜನಕ್ಕೆ ಅಡುಗೆ ಮಾಡಬಹುದು. ಬಯೋಗ್ಯಾಸ್‌ನಲ್ಲಿ ಅಡುಗೆ ಮಾಡಲು ಪ್ರತ್ಯೇಕ ಒಲೆ ವ್ಯವಸ್ಥೆ ಮಾಡಿಕೊಳ್ಳಬೇಕು ಹಾಗೂ ಎಲ್‌ಪಿಜಿ ಗ್ಯಾಸ್‌ನಲ್ಲಿ ಬರುವ ಶಾಖಕ್ಕೂ ಬಯೋಗ್ಯಾಸ್ ಬರುವ ಶಾಖವನ್ನು ಸ್ಟೌವ್ ಹಚ್ಚಿ ಶಾಖದ ಪ್ರಮಾಣವನ್ನು ತೋರಿಸಿಕೊಟ್ಟರು.

ಬಯೋಗ್ಯಾಸ್ ತಯಾರಿಕೆಗೆ ಒಂದು ತಿಂಗಳು ಕಷ್ಟವಾಗುತ್ತದೆ. ಬಳಿಕ ಅದಕ್ಕೆ ನಾವೇ ಹೊಂದಿಕೊಳ್ಳುತ್ತೇವೆ. ದೇಶವನ್ನು ಸ್ವಾವಲಂಭಿ ಮಾಡಬೇಕಾದರೆ, ಅಡುಗೆ ಅನಿಲ, ದಿನಬಳಕೆ ವಿದ್ಯುತ್, ಮಳೆ ನೀರು ಕೊಯ್ಲು ಪದ್ಧತಿ ಅಳವಡಿಕೆಯಿಂದ ಸಾಕಷ್ಟು ಆರ್ಥಿಕ ಸ್ವಾವಲಂಬನೆಯಾಗಬಹುದು ಎಂದು ತಮ್ಮ ಮನೆಯ ವಿದ್ಯುತ್ ಬಿಲ್ ತೋರಿಸಿ ಎಂಜಿಪಿ ಸದಸ್ಯರಿಗೆ ಸ್ವ–ವಿವರವಾಗಿ ತಿಳಿಸಿದರು.

ಈ ವೇಳೆ ಎಂಜಿಪಿ ಸದಸ್ಯರಾದ ಕೆ.ವಿ.ಭಾನುಪ್ರಶಾಂತ್, ರವಿಶಂಕರ್ ಬಳೆ, ವಿಶ್ವನಾಥ್, ನಾಗಪ್ಪ ಚಂದ್ರಶೇಖರ್, ಯು.ಎನ್.ರವಿಕುಮಾರ್, ವೆಂಕಟೇಶ್, ಪ್ರಭಾನಂದೀಶ್, ಗೀತಾ ವೇಲುಮಣಿ, ನಿವೃತ್ತ ಇಂಜಿನಿಯರ್ ಡಾ.ನಟರಾಜ್ ಉಪಸ್ಥಿತರಿದ್ದರು.

ಸ್ಥಾಪನೆ : 1916 — RBI License No. UBD KA 844P, Dt.28.01.1987

ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ.,

ಶಾಖೆಗಳು: 1) ಉದಯಗಿರಿ 2) ರಾಜೀವ್‌ನಗರ 3) ಹುಣಸೂರು
ಮುಖ್ಯ ಶಾಖೆ: ನ್ಯೂ ಸಯ್ಯಾಜಿ ರಾವ್ ರಸ್ತೆ, ಮೈಸೂರು–570001

ನಿಯಮ ಸೆಕ್ಷನ್ 13(4) ರ ಅಡಿಯಲ್ಲಿ ನಿಯಮ 8(1) – ಪರಿಶಿಷ್ಟ IV
ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್

ಕೆಳಸಹಿದಾರರು ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ [ನಿಯಮ, 2002 (2002ರ 54)] ರ ಅನ್ವಯ ಸೆಕ್ಷನ್ 13(12)ರ [ನಿಯಮ 3] ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ಸೆಕ್ಷನ್ 13(2) ರ ಅಡಿ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಸೂಚಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರು ಪಾವತಿಸುವಂತೆ ಸೂಚಿಸಲಾಗಿತ್ತು.

ಸಾಲಗಾರರುಗಳು ಸಾಲದ ಹಣವನ್ನು ಮರು ಪಾವತಿ ಮಾಡಲು ವಿಫಲರಾಗಿದ್ದು ಸಾಲಗಾರರುಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳ ಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4) ಕಾಯಿದೆ ನಿಯಮ 8 ಮತ್ತು 9 ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ದಿನಾಂಕದಂದು ವಿವರಿಸಲಾಗಿರುವ ಸ್ವತ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರುಗಳಿಗೆ, ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೊಬ್ಬರೂ ಸಹ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೆ ಆದರೆ ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು ಈ ಬ್ಯಾಂಕಿಗೆ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

ಕಾಯಿದೆ ಸೆಕ್ಷನ್ 13(8) ರ ನಿಬಂಧನೆಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಸಮಯಕ್ಕೆ ತಮ್ಮ ಸ್ವತ್ತುಗಳನ್ನು ಪಡೆದುಕೊಳ್ಳಲು ಸಾಲಗಾರರ ಗಮನಕ್ಕೂ ತರಲಾಗಿದೆ.

ಕ್ರಮ ಸಂಖ್ಯೆ	ಸಾಲಗಾರರು ಮತ್ತು ಜಾಮೀನುದಾರರ ಹೆಸರು	ಸ್ಥಿರಾಸ್ತಿ ವಿವರ	ಡಿಮ್ಯಾಂಡ್ ನೋಟೀಸ್ ದಿನಾಂಕ	ಸ್ವಾಧೀನಪಡಿಸಿಕೊಂಡಿರುವ ದಿನಾಂಕ	ಬಾಕಿ ಇರುವ ಮೊತ್ತ (ರೂ.ಗಳಲ್ಲಿ)
1.	1) ಶ್ರೀ ಮೊಹಮ್ಮದ್ ಕಾಶಿಫ್ ಷರೀಫ್ ಬಿನ್ ಮೊಹಮ್ಮದ್ ಇಕ್ಬಾಲ್ ಷರೀಫ್ 2) ಶ್ರೀಮತಿ ಹಫೀರ ತಾಹ್‌ಸೀನ್ ಕೋಂ ಮೊಹಮ್ಮದ್ ಕಾಶಿಫ್ ಷರೀಫ್ ಮನೆ ನಂ.2357/ಎ, ಎಂ–7/1, 7/2, 7/3, ಸುಲ್ತಾನ್ ಪಾರ್ಕ್ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಮಂಡಿ ಮೊಹಲ್ಲಾ, ಸುಲ್ತಾನ್ ಪಾರ್ಕ್ ರಸ್ತೆ, ಕಾರ್ಪೊರೇಶನ್ ಮನೆ ನಂ.2357/ಎ, ಎಂ–7/1, 7/2, 7/3 (ಉತ್ತರದ ಕಡೆಗೆ). ವಿಸ್ತೀರ್ಣ: ಪೂರ್ವ–ಪಶ್ಚಿಮ: 23.00 ಅಡಿಗಳು ಮತ್ತು ಉತ್ತರ–ದಕ್ಷಿಣ: 23.00 ಅಡಿಗಳು. ಪಶ್ಚಿಮದ ಕಡೆಗೆ: ಪೂರ್ವ–ಪಶ್ಚಿಮ: 24.00 ಅಡಿಗಳು ಮತ್ತು ಉತ್ತರ–ದಕ್ಷಿಣ: 8.00 ಅಡಿಗಳು. ಚಕ್ಕುಬಂಧಿ:– ಪೂರ್ವಕ್ಕೆ: ಖಾಸಗಿ ಸ್ವತ್ತು, ಪಶ್ಚಿಮಕ್ಕೆ: ಕೈಲಾಸಪುರಂ 1ನೇ ಮೇನ್, ಉತ್ತರಕ್ಕೆ: ಗಲ್ಲಿ, ದಕ್ಷಿಣಕ್ಕೆ: ಮೊಹಮ್ಮದ್ ನೂರುಲ್ಲ ಷರೀಫ್ ರವರ ಸ್ವತ್ತು	23.01.2026 ಎನ್‌ಪಿಎ ದಿನಾಂಕ 21.12.2025	24.03.2026	ಖಾತೆ ಸಂಖ್ಯೆ ಹೆಚ್‌ಪಿ–9509 ರೂ.17,37,900/– + ದಿನಾಂಕ 17.01.2026 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
2.	1) ಶ್ರೀ ನಯಾಮತ್ ಅಲಿ ಖಾನ್ ಬಿನ್ ಲತೀಫ್ ಖಾನ್ ಮನೆ ನಂ.73/2ಬಿ, 8ನೇ ಕ್ರಾಸ್, ರಾಜೇಂದ್ರ ನಗರ, ಎನ್.ಆರ್. ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಎನ್.ಆರ್. ಮೊಹಲ್ಲಾ, ಕೆಸರೆ, ರಾಜೇಂದ್ರ ನಗರ, ಒ.ಡಿ. ಬ್ಲಾಕ್, ಕೆಹೆಚ್‌ಬಿ ಮಾಡೆಲ್ ಹೌಸ್ ಮನೆ ನಂ.74/1ಎ. ವಿಸ್ತೀರ್ಣ: ಪೂರ್ವ–ಪಶ್ಚಿಮ: 50.00 ಅಡಿಗಳು ಮತ್ತು ಉತ್ತರ–ದಕ್ಷಿಣ: 25.00 ಅಡಿಗಳು. ಚಕ್ಕುಬಂಧಿ:– ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸ್ವತ್ತಿನ ನಂ.77/1ಎ, ಉತ್ತರಕ್ಕೆ: ಸ್ವತ್ತಿನ ನಂ.74/1ಬಿ, ದಕ್ಷಿಣಕ್ಕೆ: ಸ್ವತ್ತಿನ ನಂ.74/2ಬಿ.	23.01.2026 ಎನ್‌ಪಿಎ ದಿನಾಂಕ 06.11.2025	24.03.2026	ಖಾತೆ ಸಂಖ್ಯೆ ಹೆಚ್‌ಪಿ–8569 ರೂ.14,10,623/– + ದಿನಾಂಕ 17.01.2026 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
3.	ಇಕ್ಬಾಲ್ ಪಾಷ (ದಿವಂಗತರಾಗಿರುವುದರಿಂದ) ಬಿನ್ ಅಬ್ದುಲ್ ಬಷೀರ್ ಕಾನೂನು ಉತ್ತರಾಧಿಕಾರಿಗಳು: 1) ಶ್ರೀ ಫಯಾಜ್ ಅಹ್ಮದ್ ಬಿನ್ ಇಕ್ಬಾಲ್ ಪಾಷ 2) ಶ್ರೀ ಅಯಾಜ್ ಅಹ್ಮದ್ ಬಿನ್ ಇಕ್ಬಾಲ್ ಪಾಷ 3) ಶ್ರೀಮತಿ/ಕುಮಾರಿ ಅಜಿದ ಅಕ್ತರ್ ಬಿನ್ ಇಕ್ಬಾಲ್ ಪಾಷ 4) ಶ್ರೀಮತಿ/ಕುಮಾರಿ ಫೈಜ ಮಸ್ರೂರ್ ಬಿನ್ ಇಕ್ಬಾಲ್ ಪಾಷ 5) ಶ್ರೀಮತಿ ರಜಿಯ ಬಾನು ಕೊಂ ಇಕ್ಬಾಲ್ ಪಾಷ ಮನೆ ನಂ.2664, ಕೆ.ಟಿ. ಬೀದಿ, ಮಂಡಿ ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಮಂಡಿ ಮೊಹಲ್ಲಾ, ಸುನ್ನಿ ಚೌಕ್, ಮಾದರ್ ಸಾಬ್ ಗರಡಿ ಹತ್ತಿರ, ಎಂ.ಕೆ.ಡಿ.ಕೆ. ರಸ್ತೆ, ಕಾರ್ಪೊರೇಶನ್ ಮನೆ ನಂ.2633/ಎ3, ಹೊಸ ನಂ. ಎಂ–303/ಎ3. ವಿಸ್ತೀರ್ಣ: ಪೂರ್ವ–ಪಶ್ಚಿಮ: 10.00 ಅಡಿಗಳು ಮತ್ತು ಉತ್ತರ–ದಕ್ಷಿಣ: 10.00 ಅಡಿಗಳು. ಚಕ್ಕುಬಂಧಿ:– ಪೂರ್ವಕ್ಕೆ: ತಾಹಿರ ಬೀ ರವರ ಸ್ವತ್ತು, ಪಶ್ಚಿಮಕ್ಕೆ: ಮನೆ ನಂ.2633/ಎ ರಲ್ಲಿನ ಉಳಿಕೆ ಸ್ವತ್ತು ಹೊಸ ನಂ. ಎಂ–303/ಎ3, ಉತ್ತರಕ್ಕೆ: ಫರ್‌ಜಾನ ರವರ ಸ್ವತ್ತು, ದಕ್ಷಿಣಕ್ಕೆ: ಖಲೀಮ್ ಅಹ್ಮದ್ ರವರ ಸ್ವತ್ತು.	05.08.2025 ಎನ್‌ಪಿಎ ದಿನಾಂಕ 22.11.2020	24.03.2026	ಖಾತೆ ಸಂಖ್ಯೆ ಹೆಚ್‌ಪಿ–8725 ರೂ.1,69,028/– + ದಿನಾಂಕ 04.08.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ

ದಿನಾಂಕ: 29.03.2026
ಸ್ಥಳ: ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು.

ಮೈಸೂರು ಮಿತ್ರ
ಸೋಮವಾರ 30 ಮಾರ್ಚ್ 2026

ಸಿನಿವಾಣಿಜ್ಯ ಸಾಹಿತ್ಯ ಸ್ವಾಸ್ಥ್ಯ ಸಮಾಜ ಕದಲಿಸುತ್ತಿದೆ

ಮಂಡ್ಯ,ಮಾ.29– ಇತ್ತೀಚಿನ ದಿನಗಳಲ್ಲಿ ಸಿನಿವಾಣಿಜ್ಯ ಸಾಹಿತ್ಯವು ಸ್ವಾಸ್ಥ್ಯ ಸಮಾಜವನ್ನು ಕದಲಿಸುತ್ತಿವೆ ಎಂದು ಜಿಲ್ಲಾ ಬಿಜೆಪಿ ಮುಖಂಡ ಎಚ್.ಆರ್. ಅರವಿಂದ್ ಅಭಿಪ್ರಾಯಪಟ್ಟಿದ್ದಾರೆ

ನಗರದಲ್ಲಿರುವ ಗಾಂಧಿಭವನದಲ್ಲಿ ಕಸ್ತೂರಿ ಸಿರಿಗನ್ನಡ ವೇದಿಕೆ ರಾಜ್ಯ ಘಟಕ ಆಯೋಜಿಸಿದ್ದ ಅಖಿಲ ಕರ್ನಾಟಕ ರಾಜ್ಯಮಟ್ಟದ ಕವಿ ಕಾವ್ಯ ಮೇಳದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಸಿ, ಸಿನಿಮಾ ಕ್ಷೇತ್ರದ ವಾಣಿಜ್ಯ ಸಾಹಿತ್ಯವು ಸ್ವಾಸ್ಥ್ಯ ಸಮಾಜವನ್ನು ಕದಲಿಸಿ, ಸಂಸ್ಕಾರ ಭಾವನೆಗಳಿಗೆ ಧಕ್ಕೆ ತರುತ್ತಿವೆ, ಮನೋವಿಕಾರಕ್ಕೆ ಪ್ರಚೋ ಧನೆ ಮಾಡುತ್ತಿವೆ, ತಂದೆ–ತಾಯಿ–ಮಹಿಳೆಯರ ಗೌರವಕ್ಕೆ ಚ್ಯುತಿತರುತ್ತಿವೆ ಎಂದು ಎಚ್ಚರಿಸಿದರು.

ಹಿಂದೆ ಸಿನಿಮಾಗೀತೆಗಳು, ಗೀತೆರಚನೆಕಾರರ ಹಾಡುಗಳು ಸಮಾಜ, ಕುಟುಂಬ, ಮನಸ್ಸುಗಳನ್ನು ಬೆಸೆಯುತ್ತಿದ್ದವು, ಸೋಮಾರಿತನವನ್ನು ಬಡಿ ದೆಬ್ಬಿಸುತ್ತಿದ್ದವು, ಸಂಸ್ಕಾರದ ಮೌಲ್ಯಗಳನ್ನು ಬಿತ್ತರಿಸುತ್ತಿದ್ದವು, ಆದರೆ ಇಂದಿನ ಸಿನಿಮಾ ಗೀತೆಗಳು ಮನಸ್ಸುಗಳನ್ನು ದಾನವತ್ವದೆಡೆಗೆ ಸಾಗಿಸುತ್ತಿವೆ ಎಂದು ವಿಷಾದಿಸಿದರು.

ರಾಷ್ಟ್ರೀಯ ಬಸವದಳದ ಜಿಲ್ಲಾಧ್ಯಕ್ಷ ಎಂ.ಗುರುಪ್ರಸಾದ್, ಕಸಿವೇ ರಾಜ್ಯ ಕಾರ್ಯದರ್ಶಿ ಸಿ.ಜೆ.ಸುಜಾತ ಕೃಷ್ಣ ಮಾತನಾಡಿದರು. ಸಾಹಿತಿ ಕೆ.ಪಿ.ವೀರಪ್ಪ ಮಾತನಾಡಿ, ಜಾನಪದವಿಲ್ಲದೆ ಯಾವ ಸಾಹಿತ್ಯವೂ ಉತ್ತಮ ವಾಗದು, ಜನಪದವೇ ಎಲ್ಲದಕ್ಕೂ ಮೂಲಾಧಾರ, ಇಂದಿನ ಯುವಕವಿಗಳು, ಸಾಹಿತಿಗಳು ಜನಪದವನ್ನು ಅಭ್ಯಾಸ ಮಾಡಬೇಕು, ಸೇವಾ ಮನೋಭಾವ ಹೆಚ್ಚಿಸಿಕೊಳ್ಳಬೇಕು, ಮನುಷ್ಯನ ಜೀವನ ಕ್ಷಣಿಕ, ಮೂರುದಿನದ ಬಾಳಿನಲ್ಲಿ ನೂರುವರ್ಷ ನೆನೆಯುವಂತ ಕೊಡುಗೆ ನಿಮ್ಮಿಂದ ಸಮಾಜಕ್ಕೆ ಸಮರ್ಪಿತವಾಗಲಿ, ಸಾಹಿತ್ಯ, ಸಂಗೀತ, ಸಂಗ್ರಹ ದಾಖಲೆಯಾಗಿ ಉಳಿಯುತ್ತವೆ ಎಂದು ನುಡಿದರು.

ಕಸಿವೇ ರಾಜ್ಯಾಧ್ಯಕ್ಷ ಪೋತೇರ ಮಹದೇವು, ಮಹಾಜನ ಕಾಲೇಜಿನ ಡೀನ್ ಡಾ.ಎಚ್. ಶ್ರೀಧರ್, ಜೆಡಿಎಸ್ ಮುಖಂಡ ಕಿರಣ್ ರಾಮ ಲಿಂಗೇಗೌಡ, ಕಸಿವೇ ರಾಜ್ಯ ಉಪಾಧ್ಯಕ್ಷೆ ಎಂ.ಸಿ. ಚೊಂದಮ್ಮ ಪೂರ್ಣಚ್ಚ, ಸಾಹಿತಿ ಡಾ.ಪದ್ಮಾ ಶ್ರೀನಿವಾಸ್, ಪ್ರೊ.ಜೋಗಿ ಗೌಡ, ಕಸಿವೇ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮಯ್ಯ, ಮುಖಂಡ ರಾದ ಎಸ್.ಟಿ. ರಮೇಶ್, ಮಂಜುಳಾ ರಮೇಶ್, ಹಾವೇರಿ ನಾಗರಾಜು, ಶ್ಯಾಮಲತಾ, ಕ್ಷಮಾ ಮತ್ತಿತರರಿದ್ದರು.



ಅಖಿಲ ಕರ್ನಾಟಕ ರಾಜ್ಯಮಟ್ಟದ ಕವಿ ಕಾವ್ಯಮೇಳದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಸಲಾಯಿತು.

ರಸ್ತೆ, ಉದ್ಯಾನವನ ಅಭಿವೃದ್ಧಿಗೆ ಆದ್ಯತೆ



ಮರಿಗೌಡ ಬಡಾವಣೆಯಲ್ಲಿ ಸಿಮೆಂಟ್ ರಸ್ತೆಯನ್ನು ಶಾಸಕ ರವಿಕುಮಾರ್‌ಗೌಡ ಗಣಿಗ ಲೋಕಾರ್ಪಣೆಗೊಳಿಸಿದರು.


ಮಂಡ್ಯ,ಮಾ.29– ನಗರಸಭಾ ವ್ಯಾಪ್ತಿಯಲ್ಲಿರುವ ಎಲ್ಲಾ ರಸ್ತೆಗಳು ಮತ್ತು ಉದ್ಯಾನವನಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುತ್ತೇವೆ ಎಂದು ಶಾಸಕ ರವಿಕುಮಾರ್‌ಗೌಡ ಗಣಿಗ ಹೇಳಿದರು.

ನಗರದ ಮರಿಗೌಡ ಬಡಾವಣೆಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ಸಿಮೆಂಟ್ ರಸ್ತೆ ಲೋಕಾರ್ಪಣೆಗೊಳಿಸಿ, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಎಲ್ಲಾ ವಾರ್ಡ್‌ಗಳಲ್ಲಿ ಬರುವ ರಸ್ತೆ ಉದ್ಯಾನ ವನನ್ನು ಕೋಟ್ಯಾಂತರ ರೂ.ಗಳಲ್ಲಿ ಅಭಿವೃದ್ಧಿ ಪಡಿಸುತ್ತೇವೆ, ನಾಗರೀಕರ ಅನುಕೂಲಕ್ಕಾಗಿ ವಾಕಿಂಗ್ ಪಾತ್ ನಿರ್ಮಾಣ, ಶುದ್ಧಕುಡಿಯುವ ನೀರಿನ ವ್ಯವಸ್ಥೆ, ವ್ಯಾಯಾಮ ಪರಿಕರಗಳನ್ನು ಅಳವಡಿಸಲಾಗುವುದು, ದುರಸ್ಥಿಯಿದ್ದರೆ ರಿಪೇರಿ ಮಾಡಿಸಲಾಗುವುದು ಎಂದು ನುಡಿದರು.

ನಗರವನ್ನು ಬದಲಾವಣೆ ಮಾಡಿ, ಸುಂದರ ನಗರವನ್ನಾಗಿ ಕಟ್ಟಿಕೊಡುತ್ತೇನೆ, ಎಲ್ಲಾ ಪ್ರಮುಖ ವೃತ್ತಗಳಿಗೆ ನಾವೀನ್ಯತೆಯಲ್ಲಿ ನಿರ್ಮಾಣಮಾಡಿ ತೋರಿಸುತ್ತೇವೆ. ಹತ್ತಾರು ವರ್ಷಕಳೆದರೂ ಹಾಳಾಗದಂತಹ ಗುಣಮಟ್ಟದ ರಸ್ತೆಗಳು ನಾಗರೀಕರ ಅನುಕೂಲಕ್ಕೆ ನಿರ್ಮಾಣವಾಗುತ್ತಿವೆ ಎಂದು ತಿಳಿಸಿದರು.

ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಪೌರಾಯುಕ್ತೆ ಪಂಪಶ್ರೀ, ಸ್ಥಳೀಯ ಯುವ ಮುಖಂಡರಾದ ನಿರಂಜನ್, ಯೋಗಗುರು ಎಂ.ಎಚ್.ಚಂದ್ರ ಅನೂಪ್, ಗುರು ಆತ್ಮಾಂದ, ಸತೀಶ್‌ಬಾಬು, ರವೀಶ್ ಮಾಸ್ಟರ್, ಸಾಹಿತಿ ವೀರಪ್ಪ ಉದಯ್, ಶುಭಧಾಯಿನಿ, ಸುಜಾತ ಸಿದ್ದಯ್ಯ, ಜ್ಯೋತಿ ಮತ್ತಿತರರಿದ್ದರು.

ಅವಿರೋಧ ಆಯ್ಕೆ



ಜಿಲ್ಲಾ ಪಂಚಾಯತಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಿ ಗರಕಹಳ್ಳಿ ದೇವೇಗೌಡ, ಉಪಾಧ್ಯಕ್ಷರಾಗಿ ಅರಕೆರೆ ವಿನೋದ್, ಮಂಜಮ್ಮ ಮತ್ತು ರಾಜ್ಯ ಪರಿಸರ ಸದಸ್ಯರಾಗಿ ರುದ್ರಯ್ಯ ಆಯ್ಕೆಯಾಗಿದ್ದಾರೆ. ಇವರ ಜೊತೆಯಲ್ಲಿ ಇವರ ತಂಡದ ಐದು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದರು.

ಸಿಬಿಎಸ್‌ಇ ಶಿಕ್ಷಣದಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತಷ್ಟು ಉತ್ತೇಜನ

ಭಾರತೀನಗರ.ಮಾ.29– ಭಾರತೀ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಪ್ರಸ್ತುತ ವರ್ಷದಿಂದ ಸಿಬಿಎಸ್‌ಇ ಶಿಕ್ಷಣವನ್ನು ನೀಡಲು ಮುಂದಾಗಿರುವುದು ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತಷ್ಟು ಉತ್ತೇಜನ ನೀಡಿದಂತಾಗಿದೆ ಎಂದು ಭಾರತೀನಗರ ಇನ್ನರ್ ವಿಲ್ ಸಂಸ್ಥೆಯ ಸದಸ್ಯೆ ಅನುಪಮಸತೀಶ್ ತಿಳಿಸಿದರು.

ಭಾರತೀನಗರದ ಭಾರತೀ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ನಡೆದ ಕಿಂಡರ್ ಗಾರ್ಟನ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ, ಸಿಬಿಎಸ್‌ಇ ಶಿಕ್ಷಣದಿಂದ ಪಿಯುಸಿ ಹಂತದ ಶಿಕ್ಷಣಕ್ಕೆ ಅನುಕೂಲವಾಗುವುದರ ಜೊತೆಗೆ ಡಾಕ್ಟರ್, ಇಂಜಿನೀಯರ್ ಪರೀಕ್ಷೆಗಳಲ್ಲಿ ಸುಲಭವಾಗಿ ಉತ್ತೀರ್ಣರಾಗಬಹುದು. ನಗರ ಪ್ರದೇಶಗಳಲ್ಲಿ ದುಬಾರಿ ಹಣವನ್ನು ಡೊನೇಷನ್ ಮೂಲಕ ನೀಡಿ ಶಿಕ್ಷಣ ಪಡೆಯಬೇಕಾಗಿದೆ. ಆದರೆ ಭಾರತೀ ವಿದ್ಯಾಸಂಸ್ಥೆಯಲ್ಲಿ ಎಲ್‌ಕೆಜಿಯಿಂದ ಸ್ನಾತ ಕೋತ್ತರ ವಿಭಾಗದವರೆಗೂ ಕಾಲೇಜನ್ನು ತೆರೆದು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಪ್ರಾಂಶುಪಾಲೆ ಸಿ.ರಮ್ಯ ಮಾತನಾಡಿ, ದಿ.ಜಿ.ಮಾದೇಗೌಡರ ಆಶಯದಂತೆ ಭಾರತೀ ಶಿಕ್ಷಣ ಸಂಸ್ಥೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಯಶಸ್ವಿ ಕಂಡಿದೆ. ಪ್ರತಿ ವಿದ್ಯಾರ್ಥಿಯಲ್ಲಿರುವ ಸಾಮರ್ಥ್ಯವನ್ನು ಗುರುತಿಸಿ, ಅವರನ್ನು ಶಿಸ್ತುಬದ್ಧ, ಆತ್ಮ ವಿಶ್ವಾಸ ಮತ್ತು ಜವಾಬ್ದಾರಿಯುತ ನಾಗರಿಕರಾಗಿ ರೂಪಿಸುವುದು ನಮ್ಮ ಪ್ರಮುಖ ಗುರಿಯಾಗಿದೆ. ಮುಂದಿನ ದಿನಗಳಲ್ಲಿಯೂ ಇನ್ನಷ್ಟು ನವೀನ ಕಾರ್ಯಕ್ರಮಗಳ ಮೂಲಕ ಶಿಕ್ಷಣದಲ್ಲಿ ಶ್ರೇಷ್ಠತೆಯನ್ನು ಸಾಧಿಸಲು ನಾವು ಬದ್ಧರಾಗಿದ್ದೇವೆ" ಎಂದು ಅವರು ಹೇಳಿದರು.

ಆಸ್ಪರ್ ಜಿ.ಮಾದೇಗೌಡ ಆಸ್ಪತ್ರೆಯ ಸ್ತ್ರೀ ರೋಗ ತಜ್ಞೆ ಡಾ.ಉಮಾರವರು ಮಾತನಾಡಿ, ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಬಗ್ಗೆ ಮಾಹಿತಿಯನ್ನು ನೀಡಿದರು. ಮಕ್ಕಳಿಗೆ ಮೊಬೈಲ್ ಬಳಕೆಯ ಬದಲಾಗಿ ವಿವಿಧ ರೀತಿಯ ಕೌಶಲಾಧಾರಿತ, ಕ್ರಿಯಾತ್ಮಕ ಹಾಗೂ ದೈಹಿಕ ಚಟುವಟಿಕೆಗಳನ್ನು ಮಾಡಿಸಬೇಕು ಎಂಬುದಾಗಿ ಪೋಷಕರಿಗೆ ತಿಳಿಸಿಕೊಟ್ಟರು.

ವೇದಿಕೆಯಲ್ಲಿ ಹೆಲ್ತ್ ಸೈನ್ಸ್ ನಿರ್ದೇಶಕ ತಮೀಜ್ ಮಣಿ, ಇನ್ನರ್ ವಿಲ್ ಸಂಸ್ಥೆ ಸದಸ್ಯೆ ಜಯಲಕ್ಷ್ಮಿ ಪುಟ್ಟಸ್ವಾಮಿ, ಶಿಕ್ಷಕರಾದ ನಂದ, ರಶ್ಮಿ, ರೇಖಾ, ಸಿಂಧೂ, ಶೋಭಾ, ಅಭಿಲಾಷ, ನೇತ್ರಾವತಿ, ಅನು, ತನುಶ್ರೀ, ಹನ್ನ, ಜನ್ನಿ, ವಿದ್ಯಾ, ತಾರಾ, ನಿಸರ್ಗ, ಭವ್ಯ ಸೇರಿದಂತೆ ಹಲವರಿದ್ದರು.



ಕಿಂಡರ್‌ಗಾರ್ಟನ್ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಸಮಾರಂಭವನ್ನು ಗ್ರಾ.ಪಂ ಮಾಜಿ ಸದಸ್ಯೆ ಅನುಪಮಸತೀಶ್ ಉದ್ಘಾಟಿಸಿದರು.

ಕೆ.ಆರ್.ಪೇಟೆಯಲ್ಲಿ ಅಗ್ನಿಬನ್ನಿರಾಯಸ್ವಾಮಿ ಜಯಂತಿ ಆಚರಣೆ

ಕೆ.ಆರ್.ಪೇಟೆ: ಕೀಳರಿಮೆಯನ್ನು ಬಿಟ್ಟು ಸರ್ಕಾರದ ವತಿಯಿಂದ ಸಿಗುವ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಹೆಚ್ ಎಸ್. ರಾಜು ತಿಳಿಸಿದ್ದಾರೆ.

ತಾಲೂಕಿನ ಹೊಸಹೊಳಲು ಗ್ರಾಮದಲ್ಲಿ ತಿಗಳಗೌಡ ಸಮುದಾಯದ ಮೂಲ ಪುರುಷ ಅಗ್ನಿಬನ್ನಿರಾಯಸ್ವಾಮಿ ಜಯಂತಿಯನ್ನು ಉದ್ಘಾಟಿಸಿ,

ನಮ್ಮ ಸಮುದಾಯದವರು ನಮ್ಮಲ್ಲಿನ ಕೀಳರಿಮೆಯನ್ನು ದೂರ ಮಾಡಿ ಸಂಘಟಿತರಾಗಿ ಸರ್ಕಾರದ ವತಿಯಿಂದ ಸಿಗುವ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ಅಭಿವೃದ್ಧಿಯ ದಿಕ್ಕಿನತ್ತ ಸಾಗಬೇಕಾಗಿದೆ. ಸಮುದಾಯದ ಬಂಧುಗಳು ಜನಾಂಗದ ಸಂಘಟನೆಯ ಜೊತೆಗೆ ಇತರೆ ಸಮುದಾಯಗಳೊಂದಿಗೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳುವ ಮೂಲಕ ಸಮಾಜದ ಮುಖ್ಯ ವಾಹಿನಿಗೆ ಬರಲು ಮುಂದಾಗಬೇಕು ಎಂದರು.

ಸಮುದಾಯದ ಯಜಮಾನರುಗಳಾದ ಎಂ.ಲಕ್ಷ್ಮೀಗೌಡ, ಬಸವೇಗೌಡ, ಪಾಪೇಗೌಡ, ಪುರಸಭಾ ಮಾಜಿ ಉಪಾಧ್ಯಕ್ಷ ಆಟೋ ಕುಮಾರ್, ಸಂತೋಷ್, ಶಿಕ್ಷಣ ಇಲಾಖಾ ಪತ್ತಿನ ಸಹಕಾರ ಸಂಘದ ಸಿಇಓ ಜಯರಾಮ್,ಯುವ ಮುಖಂಡ ರವಿ, ಟೈಲರ್ ಮಂಜು, ಕಲಾಪ್ರಿಯ ಗೋವಿಂದರಾಜು, ಟೈಲರ್ ಗಣೇಶ್, ಜಯಮ್ಮ ಸೇರಿದಂತೆ ನೂರಾರು ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಗ್ನಿಬನ್ನಿರಾಯಸ್ವಾಮಿ ದಿನಾಚರಣೆಯ ಅಂಗವಾಗಿ ಎಲ್ಲರಿಗೂ ಹೊಸಹೊಳಲು ಅಗ್ನಿಬನ್ನಿರಾಯಸ್ವಾಮಿ ಸೇವಾ ಸಮಿತಿಯ ವತಿಯಿಂದ ಅನ್ನಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.



ಹೊಸಹೊಳಲು ಗ್ರಾಮದಲ್ಲಿ ತಿಗಳಗೌಡ ಸಮುದಾಯದ ಮೂಲ ಪುರುಷ ಅಗ್ನಿಬನ್ನಿರಾಯಸ್ವಾಮಿ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಬೈಕ್‌ಗಳ ನಡುವೆ ಡಿಕ್ಕಿ: ಸವಾರ ಸ್ಥಳದಲ್ಲೇ ಸಾವು

ಭಾರತೀನಗರ: ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಸವಾರರೊಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಸಮೀಪದ ಬೋರಾಪುರ ಗೇಟ್ ಬಳಿ ಜರುಗಿದೆ.



ಚಿಕ್ಕರಸಿನಕೆರೆ ಗ್ರಾಮದ ಶಿವಪ್ಪ(62) ಎಂಬುವರೇ ಅಪಘಾತದಿಂದ ಮೃತಪಟ್ಟ ದುರ್ದೈವಿ. ಇವರು ಚಿಕ್ಕರಸಿನಕೆರೆಯಿಂದ ತಮ್ಮ ಮಾವನ ಮನೆಗೆ ಬೋರಾಪುರಕ್ಕೆ ತೆರಳುವಾಗ ಮದ್ದೂರಿನಿಂದ ವೇಗವಾಗಿ ಬಂದ ಯುವಕರ ಬೈಕ್‌ವೊಂದು ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ಪರಿಣಾಮ ಶಿವಪ್ಪ ಅವರು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತದೇಹವನ್ನು ಮದ್ದೂರಿನ ತಾಲೂಕು ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ. ಭಾನುವಾರ ಮಧ್ಯಾಹ್ನ 3 ಗಂಟೆಯಲ್ಲಿ ತಮ್ಮ ಸ್ವಗ್ರಾಮದ ಚಿಕ್ಕರಸಿನಕೆರೆಯ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ಜರುಗಿತು. ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಗೂಡ್ಸ್ ವಾಹನ ಡಿಕ್ಕಿ ; ಬೈಕ್ ಸವಾರ ಸಾವು

ಭಾರತೀನಗರ: ಗೂಡ್ಸ್ ವಾಹನ ಹಿಂಬದಿಯಿಂದ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವಪ್ಪಿರುವ ಘಟನೆ ನೆಲಮಾಕನಹಳ್ಳಿ ಗ್ರಾಮದ ಬಳಿ ಜರುಗಿದೆ.



ಅಣ್ಣೂರು ಗ್ರಾಮದ ನಾರಾಯಣ(47) ಎಂಬುವವರೇ ಅಪಘಾತದಿಂದ ಮೃತಪಟ್ಟ ದುರ್ದೈವಿ. ಭಾರತೀನಗರದಿಂದ ಮಳವಳ್ಳಿಗೆ ತೆರಳುವಾಗ ಗೂಡ್ಸ್ ವಾಹನವೊಂದು ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತದೇಹವನ್ನು ಮಳವಳ್ಳಿ ತಾಲ್ಲೂಕು ಆಸ್ಪತ್ರೆಯಲ್ಲಿ ಪಂಚನಾಮೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ. ಭಾನುವಾರ ಸಂಜೆ 4 ಗಂಟೆಯಲ್ಲಿ ಅಣ್ಣೂರು ಗ್ರಾಮದ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ಜರುಗಿತು.

ಮಳವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮೂರನೇ ಪುಟದಿಂದ

ಡ್ರಗ್ಸ್ ಮಾಫಿಯಾ ಮಟ್ಟಹಾಕಿ, ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಿ

ನಿರ್ಮಾಣ ಮಾಡಬೇಕು ಎಂದು ಹೇಳಿದರು. ಎಷ್ಟೆ ಕಷ್ಟವಾದರೂ, ಯಾವುದೇ ಒತ್ತಡಕ್ಕೆ ಮಣಿಯದೆ ಪ್ರಾಮಾಣಿಕತೆಯಿಂದ ನ್ಯಾಯವಿತರಣೆ ಮಾಡಬೇಕು. ಎಲ್ಲರೂ ಸಮಾನತೆಯಿಂದ ಬದುಕುವ ವಾತಾವರಣ ನಿರ್ಮಿಸಿ. ಸಾಮಾಜಿಕ ವ್ಯವಸ್ಥೆಯ ವೈರುಧ್ಯತೆಯನ್ನು ಪರಿಗಣಿಸದೆ ಸಮಾನತೆ ಕಾಪಾಡಿ ಎಂದು ಸಿದ್ದರಾಮಯ್ಯ ಪೊಲೀಸರಿಗೆ ಟಿಪ್ಸ್ ನೀಡಿದರು.

ಇತ್ತೀಚಿಗೆ ಹೊಸ ಕ್ರಿಮಿನಲ್ ಚಟುವಟಿಕೆಗಳು ಹೆಚ್ಚಾಗುತ್ತಿದೆ. ಇದರಲ್ಲಿ ಸೈಬರ್ ಕ್ರೈಂ ಕೂಡ ಒಂದಾಗಿದೆ ಪೊಲೀಸರು ತರಬೇತಿ ವೇಳೆ ನೀಡಿರುವ ಜ್ಞಾನವನ್ನು ಬಳಸಿಕೊಂಡು ಇಂತಹ ಅಪರಾಧ ಕೃತ್ಯವನ್ನು ಪರಿಣಾಮಕಾರಿಯಾಗಿ ಮಟ್ಟ ಹಾಕಬೇಕು ಎಂದು ಹೇಳಿದರು.

ಪೊಲೀಸರು ಸರ್ಕಾರದ ಪ್ರತಿನಿಧಿಗಳಾಗಿದ್ದು, ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕು. ಯಾವುದೆ ಲೋಪವಿಲ್ಲದೆ ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದರು.

ನಮ್ಮ ಸಮಾಜದಲ್ಲಿ ಜಾತಿ ವ್ಯವಸ್ಥೆ ಬಲವಾಗಿದ್ದು, ಬಡವರು, ಮಹಿಳೆಯರು ಹಾಗೂ ದುರ್ಬಲವರ್ಗದವರಿದ್ದಾರೆ. ಇವರಿಗೆ ಅನ್ಯಾಯವಾಗದಂತೆ ಇವರ ರಕ್ಷಣೆಗೆ ದಾವಿಸುವುದು ಪೊಲೀಸರ ಆದ್ಯ ಕರ್ತವ್ಯವಾಗಬೇಕು ಎಂದು ತಿಳಿಸಿದರು.

ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ನೀಡಿರುವ ತರಬೇತಿಯ ಕಲಿಕೆಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಪೊಲೀಸರಿಗೆ ಆಧುನಿಕತೆಗೆ ತಕ್ಕಂತೆ ಇಂತಹ ತರಬೇತಿಗಳು ಆಗಾಗೆ ನೀಡುವ ಅವಶ್ಯಕತೆ ಇದೆ ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಈ ವೇಳೆ ಪ್ರಶಿಕ್ಷಣಾರ್ಥಿಗಳು ಆಕರ್ಷಕ ಪಥಸಂಚಲನ ನಡೆಸಿದರು. ಅಂತಿಮವಾಗಿ ಪ್ರಶಿಕ್ಷಣಾರ್ಥಿಗಳು ನಡೆಸಿದ ವಿದಳನ ನಡೆ (ನಿಧಾನ ನಡೆಯ ಪರೇಡ್) ಅತ್ಯಾಕರ್ಷಕವಾಗಿ ಜನ ಮೆಚ್ಚುಗೆ ಗಳಿಸಿತು.

ಗೃಹ ಸಚಿವ ಡಾ.ಜಿ.ಪರಮೇಶ್ವರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ರೇಷ್ಮೆ ಸಚಿವ ಕೆ.ವೆಂಕಟೇಶ್, ಶಾಸಕ ಟಿ.ಎಸ್.ಶ್ರೀವತ್ಸ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ, ತರಬೇತಿ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ದೇವಜ್ಯೋತಿ ರೇ, ಕೆಪಿಎ ನಿರ್ದೇಶಕ ಎನ್.ವಿಷ್ಣುವರ್ಧನ, ಉಪ ನಿರ್ದೇಶಕ ಎಸ್.ಎಲ್.ಚೆನ್ನ ಬಸವಣ್ಣ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಪ್ರಶಿಕ್ಷಣಾರ್ಥಿಗಳ ಆಕರ್ಷಕ ಪಥಸಂಚಲನವನ್ನು ಕಾಣಬಹುದು.

ಅನಿಲ್ ಕುಮಾರ ಎಂ.ತಿಪ್ಪಣ್ಣನವರ್ ಸರ್ವೋತ್ತಮ ಪಶಿಕ್ಷಾಣಾರ್ಥಿ

ಗದಗ ಮೂಲದ ಅನಿಲ್ ಕುಮಾರ ಎಂ.ತಿಪ್ಪಣ್ಣನವರ್ ಸರ್ವೋತ್ತಮ ಪಶಿಕ್ಷಾಣಾರ್ಥಿ ಮತ್ತು ಅತ್ಯುತ್ತಮ ಒಳಾಂಗಣ ಪ್ರಶಿಕ್ಷಣಾರ್ಥಿಯಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಅನಿಲ್ ಕುಮಾರ್ ಅವರು ಮುಖ್ಯಮಂತ್ರಿಗಳ ಟ್ರೋಫಿ, ಮುಖ್ಯಮಂತ್ರಿಗಳ ಸ್ವೋರ್ಡ್, ಡಿಜಿ ಮತ್ತು ಐಜಿಪಿರವರ ಬೇಟನ್ ಪಡೆದರು.

ಜಿ.ಶಾಂಭವಿ ಅವರು ಸರ್ವೋತ್ತಮ ಮಹಿಳಾ ಪ್ರಶಿಕ್ಷಣಾರ್ಥಿಯಾಗಿದ್ದು, ಗೃಹ ಮಂತ್ರಿಗಳ ಟ್ರೋಫಿ ಪಡೆದರು. ಅಲ್ಲದೆ ಎಂ.ಸುನೀಲ್ ಅತ್ಯುತ್ತಮ ಹೊರಾಂಗಣ ಪ್ರಶಿಕ್ಷಣಾರ್ಥಿ, ಸಿ.ಕೆ.ದಶರಥ ಅವರು ಉತ್ತಮ ರೈಫಲ್ ಫೈರಿಂಗ್ ಹಾಗೂ ಎಲ್.ಕೆ.ಶ್ರೀಧರ್ ಅವರು ಉತ್ತಮ ಪಿಸ್ತೂಲ್ ಫೈರಿಂಗ್‌ಗಾಗಿ ಬಹುಮಾನ ಪಡೆದರು.

ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಒಟ್ಟು 327 ಉಪ ನಿರೀಕ್ಷಕರು ತರಬೇತಿ ಪಡೆದಿದ್ದು, ಶೀಘ್ರವೇ ಅಧಿಕೃತವಾಗಿ ಕರ್ತವ್ಯಕ್ಕೆ ಹಾಜರಾಗಲಿದ್ದಾರೆ. ತರಬೇತಿ ಪಡೆದ 327 ಮಂದಿಯಲ್ಲಿ 237 ಪುರುಷರು ಹಾಗೂ 90 ಮಹಿಳೆಯರಾಗಿದ್ದಾರೆ.

12 ಮಂದಿ ಸೇನೆಯಲ್ಲಿ ಸೇವೆ ಸಲ್ಲಿಸಿದ್ದರೆ, 30 ಮಂದಿ ವಿವಿಧ ಸರ್ಕಾರಿ ಇಲಾಖೆಯಲ್ಲಿ ಸೇವೆ ಸಿದ್ದಾರೆ. 79 ಮಂದಿ ಪೊಲೀಸ್ ಇಲಾಖೆಯಲ್ಲೆ ಕರ್ತವ್ಯ ನಿರ್ವಹಿಸಿದ್ದವರು, 206 ಮಂದಿ ಹೊಸದಾಗಿ ನೇಮಕವಾದವರಾಗಿದ್ದಾರೆ. ಇವರಲ್ಲಿ 56 ಮಂದಿ ಸ್ನಾತಕೋತ್ತರ ಪದವಿ ಪಡೆದಿದ್ದರೆ, 127 ಬಿಇ ಪದವೀಧರರಾಗಿದ್ದಾರೆ. 143 ಪದವಿ ಪಡೆದರವರು ಹಾಗೂ ಒಬ್ಬ ಬಿಡಿಎಸ್ ಪಡೆದ ಪ್ರಶಿಕ್ಷಣಾರ್ಥಿ ಆಗಿದ್ದಾರೆ.

ಜನಸ್ನೇಹಿಯಾಗಿ, ಕ್ರಿಮಿನಲ್‌ಗಳಿಗೆ ಕರುಣೆ ತೋರಬೇಡಿ

ಪೊಲೀಸರು ಜನಸ್ನೇಹಿಯಾಗಬೇಕೆ ಹೊರತು, ಕ್ರಿಮಿನಲ್‌ಗಳಿಗೆ ಕರುಣೆ ತೋರಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸರಿಗೆ ಕಿವಿಮಾತು ಹೇಳಿದರು. ಕ್ರಿಮಿನಲ್ ಗಳ ವಿರುದ್ಧ ನಿಷ್ಠೂರವಾಗಿ ನಡೆದುಕೊಳ್ಳಬೇಕು, ಯಾವುದೇ ಮುಲಾಜು ಇಲ್ಲದೆ ಕ್ರಮ ಕೈಗೊಳ್ಳಬೇಕು. ಯಾವುದೇ ರೀತಿಯ ಆಸೆ, ಆಮಿಷಗಳಿಗೆ ಒಳಗಾಗಬಾರುದು, ಜೊತೆಗೆ ರಾಜಿ ಕೂಡ ಆಗಬಾರದು. ಪ್ರಾಮಾಣಿಕವಾಗಿ ನ್ಯಾಯದಾನ ಮಾಡಬೇಕು ಎಂದು ಸಲಹೆ ನೀಡಿದರು.

ಆದರೆ ನಿರಪರಾಧಿಗಳ ಬಗ್ಗೆ ಮಾನವೀಯತೆ ತೋರಿ, ಅವರನ್ನು ರಕ್ಷಿಸಬೇಕು. ಪೊಲೀಸರು ಮಾನವೀಯತೆಯ ಮೌಲ್ಯವನ್ನು ರೂಢಿಸಿಕೊಳ್ಳಬೇಕು ಎಂದು ಸಿದಿದರಾಮಯ್ಯ ಸಲಹೆ ನೀಡಿದರು. ಈ ವೇಳೆ ಮಾತನಾಡಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಎಂ.ಎ.ಸಲೀಂ ಅವರು, ಪೊಲೀಸರು ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು. ಇಲಾಖೆ ಹೆಸರಿಗೆ ಚ್ಯುತಿ ತರದಂತೆ ಕರ್ತವ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಶೀಘ್ರವೇ ಪೊಲೀಸ್ ಇಲಾಖೆಯ 8 ಸಾವಿರ ಹುದ್ದೆಗೆ ನೇಮಕಾತಿ

ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 8 ಸಾವಿರ ಹುದ್ದೆಗಳಿಗೆ ಶೀಘ್ರವೇ ನೇಮಕಾತಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇದೇ ವೇಳೆ ತಿಳಿಸಿದರು.

ಕಳೆದ ಮೂರು ವರ್ಷದ ಅವಧಿಯಲ್ಲಿ ನಮ್ಮ ಸರ್ಕಾರ ಪೊಲೀಸ್ ಇಲಾಖೆಯಲ್ಲಿ ಖಾಲಿ ಇದ್ದ 4,911 ಹುದ್ದೆಗಳನ್ನು ಭರ್ತಿ ಮಾಡಿದೆ. ಈಗ ಉಳಿದಿರುವ ಹುದ್ದೆಗಳಿಗೂ ನೇಮಕಾತಿ ಮಾಡಲಾಗುವುದು ಎಂದು ಆಶ್ವಾಸನೆ ನೀಡಿದರು. ಸರ್ಕಾರ ಅಭಿವೃದ್ಧಿ ಕೆಲಸ ಮಾಡಲು ಹಿಂಜರಿಯುವುದಿಲ್ಲ. ಈ ಮೂಲಕ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಯಾವುದೇ ತೊಂದರೆ ಆಗದಂತೆ ಎಲ್ಲಾ ಸೌಲಭ್ಯ ನೀಡಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

ಬಲಾಢ್ಯರ ಕೈಯಲ್ಲಿ ಅಧಿಕಾರ ದೊರೆತರೆ ಸಮ ಸಮಾಜ ನಿರ್ಮಾಣ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಪೊಲೀಸರು ಶ್ರೀಮಂತರೂ ಸೇರಿದಂತೆ ಬಲಾಢ್ಯದ ಒತ್ತಡಕ್ಕೆ ಮಣಿಯಬಾರದು. ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಲು ಧೈರ್ಯ, ಪ್ರಾಮಾಣಿಕತೆ, ದಕ್ಷತೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಉಪ ಪೊಲೀಸ್ ನಿರೀಕ್ಷರಿಗೆ ತರಬೇತಿ ನೀಡಿದ ಕರ್ನಾಟಕ ಪೊಲೀಸ್ ಅಕಾಡೆಮಿಯ ಸಿಬ್ಬಂದಿಗಳಿಗೆ ಎರಡು ಲಕ್ಷ ರೂಪಾಯಿ ನೀಡುವುದಾಗಿ ಇದೇ ವೇಳೆ ಸಿದ್ದರಾಮಯ್ಯ ಪ್ರಕಟಿಸಿದರು.

ನೀರಿನ ಸಂರಕ್ಷಣೆಗೆ ಬದ್ಧರಾಗಬೇಕಿದೆ

ಇದರಿಂದ ಗ್ರಾಮದ ಅಂತರ್ಜಲ ಮಟ್ಟವು ಗಮನಾರ್ಹವಾಗಿ ಸುಧಾರಿಸಿದೆ. ಹಾಗೆಯೇ ತೆಲಂಗಾಣದ ಮಂಚೇರಿಯಲ್ ಜಿಲ್ಲೆಯ ಮುಧಿಗುಂಟ ಗ್ರಾಮದ ಜನ ನೀರಿನ ಸಮಸ್ಯೆಯನ್ನು ಪರಿಹಾರಕ್ಕೆ ಒಗ್ಗೂಡಿದ್ದಾರೆ. 400 ಕುಟುಂಬಗಳು ತಮ್ಮ ಮನೆಗಳಲ್ಲಿ ಸೋಕ್‌ಪಿಟ್‌ಗಳನ್ನು ನಿರ್ಮಿಸಿ, ನೀರಿನ ಸಂರಕ್ಷಣೆಗಾಗಿ ಸಾಮೂಹಿಕ ಆಂದೋಲನವನ್ನು ಆರಂಭಿಸಿದ್ದಾರೆ. ಪರಿಣಾಮ ಗ್ರಾಮದ ಅಂತರ್ಜಲ ಮಟ್ಟದ ಸುಧಾರಣೆ ಜೊತೆಗೆ ಕಲುಷಿತ ನೀರಿನಿಂದ ಬಾಧಿಸುತ್ತಿದ್ದ ರೋಗಗಳೂ ಕಡಿಮೆಯಾಗಿವೆ ಎಂದು ಶ್ಲಾಘಿಸಿದರು.

ಅಮೆರಿಕ ಸೈನಿಕರ ನಿಯೋಜನೆ

ಮತ್ತು ನಾವಿಕರು ಆಗಮಿಸಿದ್ದಾರೆ. ಸಾಮಾನ್ಯವಾಗಿ ಜಪಾನ್‌ನಲ್ಲಿ ನೆಲೆಸಿರುವ ಹಡಗು ಶುಕ್ರವಾರ ಈ ಪ್ರದೇಶಕ್ಕೆ ಆಗಮಿಸಿದೆ. ಗುಂಪು ಸಾರಿಗೆ ಮತ್ತು ಮುಷ್ಕರ ಯುದ್ಧ ವಿಮಾನಗಳು, ಹಾಗೆಯೇ ಉಭಯಚರ ದಾಳಿ ಮತ್ತು ಯುದ್ಧ ತಂತ್ರದ ಸ್ವತ್ತುಗಳನ್ನು ಸಹ ಒಳಗೊಂಡಿದೆ. ಒಂದು ಹಡಗಿನ ಡೆಕ್‌ನಲ್ಲಿ ಹಲವಾರು ಸೀಹಾಕ್ ಹೆಲಿಕಾಪ್ಟರ್‌ಗಳು ಮತ್ತು ಸಿಬ್ಬಂದಿ ಸಾಗಣೆಗೆ ಸಾಮಾನ್ಯವಾಗಿ ಬಳಸುವ ಕೆಲವು ಆಸ್ಪ್ರೇ ವಿಮಾನಗಳನ್ನು ತೋರಿಸುವ ಹಾಗೂ ಎಫ್–35 ಫೈಟರ್ ಜೆಟ್ ಹೊಂದಿರುವುದು ಎರಡು ಪೋಸ್ಟ್‌ಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

ಅಮೆರಿಕದ ಮಿಲಿಟರಿಯ ಕಾರ್ಯಾಚರಣೆಗಳು ವಿಸ್ತಾರವಾಗಿವೆ. ನಾವು ಇದನ್ನು ನೋಡಿದ್ದು, ಇದನ್ನು ಯುದ್ಧತಂತ್ರದಿಂದ ರೂಪಿಸಲಾಗಿದೆ. ಇದು ಕೊನೆಯ ಕ್ಷಣದ ಯೋಜನೆ ಅಲ್ಲ. ಇರಾನಿನ ಪ್ರದೇಶವನ್ನು ವಶಪಡಿಸಿಕೊಂಡು ಸರ್ಕಾರವನ್ನು ತೀವ್ರ ಮುಜುಗರಕ್ಕೀಡು ಮಾಡುತ್ತದೆ. ಆದಾಗ್ಯೂ ಅಮೆರಿಕ ಪಡೆಗಳನ್ನು ರಕ್ಷಿಸುವುದು ದೊಡ್ಡ ಸವಾಲಾಗಿರುತ್ತದೆ. ಖಾರ್ಗ್ ದ್ವೀಪದ ಜನರಿಗೆ ರಕ್ಷಣೆ ಒದಗಿಸುವುದು ಕಷ್ಟಕರವಾದ ಕೆಲಸ. ಆದರೆ ಅದನ್ನು ವಶಪಡಿಸಿಕೊಳ್ಳುವುದು ಕಷ್ಟವಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅತ್ತ ಅಮೆರಿಕ ದಾಳಿ ಎದುರಿಸಲು ಇರಾನ್ ಕೂಡಾ ಸಜ್ಜಾಗುತ್ತಿದೆ ಎಂದು ತಿಳಿದುಬಂದಿದೆ.

ಪತ್ರಕರ್ತರ ಮೇಲೆ ದಾಳಿ: ಯುದ್ಧ ತೀವ್ರಗೊಳ್ಳುತ್ತಿರುವ ನಡುವೆ ಶನಿವಾರ ದಕ್ಷಿಣ ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿದ ದಾಳಿಗಳಲ್ಲಿ ಮೂವರು ಪತ್ರಕರ್ತರು ಹಾಗೂ 9 ಪ್ಯಾರಾಮೆಡಿಕಲ್ ಸಿಬ್ಬಂದಿ ಸಾವನ್ನಪ್ಪಿದ್ದಾರೆ. ಜೆಜ್ಜೈನ್ ರಸ್ತೆಯಲ್ಲಿ ಸ್ಪಷ್ಟವಾಗಿ ಗುರುತಿಸಲಾದ ಪತ್ರಿಕಾ ವಾಹನದ ಮೇಲೆ ನಡೆದ ದಾಳಿಯಲ್ಲಿ ಅಲ್–ಮಯಾದೀನ್ ಮಾಧ್ಯಮ ಸಂಸ್ಥೆಯ ಫಾತಿಮಾ ಫೌನಿ, ಅವರ ಸಹೋದರ ಹಾಗೂ ಸಹೋದ್ಯೋಗಿ ಮೊಹಮ್ಮದ್ ಮತ್ತು ವರದಿಗಾರ ಅಲಿ ಶುಐಬ್ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಈ ವಾಹನದ ಮೇಲೆ ನಾಲ್ಕು ನಿಖರ ಕ್ಷಿಪಣಿಗಳನ್ನು ಹೊಡೆದಿರುವುದಾಗಿ ಅಲ್–ಮಯಾದೀನ್ ತಿಳಿಸಿದ್ದು, ಇನ್ನೂ ಹಲವು ಪತ್ರಕರ್ತರು ಗಾಯಗೊಂಡಿದ್ದಾರೆ. ಅಲ್ಲದೆ ಆಂಬುಲೆನ್ಸ್‌ಗಳನ್ನು ಗುರಿಯಾಗಿಸಿಕೊಂಡು ನಡೆಸಿದ ದಾಳಿಯಲ್ಲಿ ಒಬ್ಬ ಅರೆವೈದ್ಯಕೀಯ ಸಿಬ್ಬಂದಿ ಮೃತಪಟ್ಟಿದ್ದಾರೆ. ಈ ದಾಳಿಯನ್ನು ಇಸ್ರೇಲಿ ಸೇನೆ ಒಪ್ಪಿಕೊಂಡಿದೆ.

ಮಿಲಿಟರಿ ಮೂಲಸೌಕರ್ಯಗಳ ಮೇಲೆ ಇಸ್ರೇಲ್ ಭೀಕರ ದಾಳಿ

ನವದೆಹಲಿ: ಇರಾನ್‌ನ ಮಿಲಿಟರಿ ಮೂಲಸೌಕರ್ಯವನ್ನು ಗುರಿಯಾಗಿಸಿಕೊಂಡು ಭಾನುವಾರ ಭಾರೀ ಪ್ರಮಾಣದ ದಾಳಿ ನಡೆಸಿರುವುದಾಗಿ ಇಸ್ರೇಲ್ ರಕ್ಷಣಾ ಪಡೆ(ಐಡಿಎಫ್) ಹೇಳಿದೆ. ಈ ಕುರಿತು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಐಡಿಎಫ್, ಡಜನ್ ಗಟ್ಟಲೇ ಯುದ್ಧ ಸಲಕರಣೆಗಳ ಸಂಗ್ರಹಗಾರ, ತಯಾರಿಕಾ ಕೇಂದ್ರ ಸೇರಿದಂತೆ ಇರಾನ್‌ನ ಭಯೋತ್ಪಾದಕತೆಗೆ ಸಂಬಂಧಿಸಿದ ಹಲವು ಕಡೆಗಳಲ್ಲಿ ದಾಳಿ ನಡೆಸಲಾಗಿದೆ. ಈ ವೇಳೆ ಕಮಾಂಡರ್ ಕಾರ್ಯ ನಿರ್ವಹಿಸುತ್ತಿದ್ದ ಸ್ಥಳಗಳು ಸೇರಿದಂತೆ ಹಲವಾರು ತಾತ್ಕಾಲಿಕ ಕಮಾಂಡ್ ಸೆಂಟರ್‌ಗಳನ್ನು ನಾಶ ಪಡಿಸಲಾಗಿದೆ. ಬ್ಯಾಲಿಸ್ಟಿಕ್ ಕ್ಷಿಪಣಿ ಉತ್ಪಾದನೆ ಮತ್ತು ಸಂಗ್ರಹ ಕೇಂದ್ರಗಳು, ವೈಮಾನಿಕ ರಕ್ಷಣಾ ವ್ಯವಸ್ಥೆಗಳು ಮತ್ತು ವೀಕ್ಷಣಾ ಪೋಸ್ಟ್‌ಗಳ ಮೇಲೆ ದಾಳಿ ಮಾಡಲಾಗಿದೆ ಎಂದು ತಿಳಿಸಲಾಗಿದೆ.

ರಾಜಕಾರಣ ಬೇಡ: ಇದು ದೇಶದ 140 ಕೋಟಿ ಜನರಿಗೂ ಸಂಬಂಧಿಸಿದ್ದು. ಎಲ್ಲರೂ ಒಟ್ಟಾಗಿ ಸವಾಲು ಎದುರಿಸಬೇಕಿರುವ ಸಂದರ್ಭದಲ್ಲೂ ಯಾರೆಲ್ಲ ವದಂತಿಗಳನ್ನು ಹಬ್ಬಿಸುತ್ತಿದ್ದಾರೋ, ಅವರು ದೇಶಕ್ಕೆ ದೊಡ್ಡ ನಷ್ಟ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರಗಳು ನೀಡಿರುವ ಸೂಚನೆ ಹಾಗೂ ಮಾಹಿತಿ ಮೇಲೆ ವಿಶ್ವಾಸವಿಟ್ಟು ಅವುಗಳನ್ನು ನಾಗರಿಕರು ಅನುಸರಿಸಬೇಕು. ಈಗಿನ ಕಠಿಣ ಸ್ಥಿತಿಯನ್ನೂ ನಾವು ದಾಟಿ, ಸಹಜ ಸ್ಥಿತಿಯನ್ನು ತಲುಪುತ್ತೇವೆ ಎಂಬ ವಿಶ್ವಾಸ ಇದೆ. ಆದರೆ ಇಂಥ ಸಂದರ್ಭದಲ್ಲೂ ಕೆಲವರು ರಾಜಕಾರಣ ಮಾಡುತ್ತಿರುವುದು ಸರಿಯಲ್ಲ. ಇದರಲ್ಲಿ ರಾಜಕೀಯದ ಸ್ವಾರ್ಥಕ್ಕೆ ಯಾವುದೇ ಕಾರಣಕ್ಕೂ ಜಾಗ ಕೊಡಬಾರದು ಎಂದು ನುಡಿದರು.

ಜಾಗತಿಕ ಬಿಕ್ಕಟ್ಟು: ಪ್ರಸಕ್ತ ಯುದ್ಧದ ಪರಿಣಾಮಗಳ ಕುರಿತು ಮಾತನಾಡಿದ ಮೋದಿ, ಮಾರ್ಚ್ ತಿಂಗಳಲ್ಲಿ ಜಗತ್ತೇ ಅಲ್ಲೋಲ ಕಲ್ಲೋಲವಾಗಿದೆ. ಯುದ್ಧ ನಡೆಯುತ್ತಿರುವ ಪ್ರದೇಶವು ನಮ್ಮ ಇಂಧನ ಅಗತ್ಯಗಳ ಪ್ರಮುಖ ಕೇಂದ್ರವಾಗಿದೆ. ಇದರಿಂದಾಗಿ, ವಿಶ್ವಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಕೊರತೆಯಿಂದ ಬಿಕ್ಕಟ್ಟು ಸೃಷ್ಟಿಯಾಗಿದೆ. ನಮ್ಮ ಜಾಗತಿಕ ಸಂಬಂಧಗಳು, ವಿವಿಧ ದೇಶಗಳಿಂದ ನಾವು ಪಡೆಯುವ ಸಹಕಾರ ಮತ್ತು ಕಳೆದ ದಶಕದಲ್ಲಿ ನಮ್ಮ ರಾಷ್ಟ್ರವು ನಿರ್ಮಿಸಿರುವ ಸಾಮರ್ಥ್ಯಗಳು ನೆರವಾಗಿವೆ. ಭಾರತವು ಇಂದಿನ ಸವಾಲುಗಳನ್ನು ಧೈರ್ಯದಿಂದ ಎದುರಿಸಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಜನತೆ ಒಗ್ಗೂಡಬೇಕು

ಕೋವಿಡ್ ಬಳಿಕದ ಸಂಕಷ್ಟ: ಇಡೀ ಜಗತ್ತು ಕೋವಿಡ್‌ನಿಂದಾಗಿ ದೀರ್ಘಕಾಲದವರೆಗೆ ಹಲವಾರು ಸಮಸ್ಯೆಗಳನ್ನು ಎದುರಿಸಿದ್ದು ನಮಗೆಲ್ಲರಿಗೂ ನೆನಪಿದೆ. ಕೋವಿಡ್ ಬಿಕ್ಕಟ್ಟಿನಿಂದ ಹೊರಬಂದ ನಂತರ, ಜಗತ್ತು ಹೊಸ ಆರಂಭದೊಂದಿಗೆ ಪ್ರಗತಿಯ ಹಾದಿಯಲ್ಲಿ ಮುಂದುವರೆಯುತ್ತದೆ ಎಂದು ನಾವೆಲ್ಲರೂ ನಿರೀಕ್ಷಿಸಿದ್ದೆವು. ಆದರೆ ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ಯುದ್ಧ ಉದ್ವಿಗ್ನತೆ ಹೆಚ್ಚುತ್ತಲೇ ಇದೆ. ಅದರಲ್ಲೂ ನಮ್ಮ ನೆರೆ ರಾಷ್ಟ್ರಗಳಲ್ಲಿ ಯುದ್ಧ ನಡೆಯುತ್ತಿರುವ ಕಾರಣ ನಮ್ಮ ದೈನಂದಿನ ಅವಶ್ಯಕತೆ ಮೇಲೆ ಭಾರೀ ಪರಿಣಾಮ ಬೀರಿದೆ. ಇಂಥ ಸಂಕಷ್ಟದ ಸ್ಥಿತಿಯನ್ನು ಭಾರತವು ಸವಾಲಾಗಿ ಎದುರಿಸುತ್ತಿದೆ ಎಂದು ಹೇಳಿದರು.

ಕೃತಜ್ಞತೆ ಸಲ್ಲಿಕೆ: ಗಲ್ಫ್ ದೇಶಗಳಲ್ಲಿ ಒಂದು ಕೋಟಿಗೂ ಹೆಚ್ಚು ಭಾರತೀಯರು ಕೆಲಸ ಮಾಡುತ್ತಿದ್ದಾರೆ. ಯುದ್ಧ ಸಂದರ್ಭದಲ್ಲಿ ಭಾರತೀಯರಿಗೆ ಎಲ್ಲಾ ಸಹಾಯ ಒದಗಿಸಿರುವುದಕ್ಕೆ ಆ ದೇಶಗಳಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಇದೇ ವೇಳೆ ತಿಳಿಸಿದರು.

ರೀಲ್ಸ್ ಅಜ್ಜಿ ನಿಧನ

ಯಲ್ಲಾಪುರ: ರೀಲ್ಸ್ ಅಜ್ಜಿ ಎಂದೇ ಖ್ಯಾತರಾಗಿದ್ದ ಉತ್ತರ ಕನ್ನಡ ಜಿಲ್ಲೆ, ಯಲ್ಲಾಪುರ ತಾಲೂಕಿನ ಮಂಚಿಕೇರಿ ನಿವಾಸಿ ಲಕ್ಷ್ಮಿ ನಾಯ್ಕ(93) ಅವರು ವಯೋಸಹಜ ಅನಾರೋಗ್ಯದಿಂದ ಭಾನುವಾರ ನಿಧನರಾದರು. ಡ್ರಾಮಾ ಜ್ಯೂನಿಯರ್ ಖ್ಯಾತಿಯ ಸೂರಜ್ ತಮ್ಮ ಅಜ್ಜಿ ಲಕ್ಷ್ಮಿ ಜೊತೆ ರೀಲ್ಸ್ ಮಾಡುತ್ತಿದ್ದರು. ಮೊಮ್ಮಗ ಸೂರಜ್ ಹೇಳಿಕೊಟ್ಟಂತೆ ಲಕ್ಷ್ಮಿ ನಾಯ್ಕ ನಟನೆ ಮಾಡುತ್ತಿದ್ದರು. ಈ ಮೂಲಕ ರಾಜ್ಯಾದ್ಯಂತ ಇವರು ಅಪಾರ ಅಭಿಮಾನಿಗಳನ್ನು ಹೊಂದಿದ್ದರು. ಲಕ್ಷ್ಮಿ ನಾಯ್ಕ ನಿಧನಕ್ಕೆ ಅವರ ಅಭಿಮಾನಿಗಳು ಸಂತಾಪ ಸೂಚಿಸಿದ್ದಾರೆ.



ಎಲ್‌ಪಿಜಿ ಸರಬರಾಜು

ಕಂಪನಿಗಳಾದ (OMCs) IOCL, BPCL ಮತ್ತು HPCL ಮೂಲಕ ಆಟೋ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಈ ಸಂಸ್ಥೆಗಳು ಪ್ರತಿ ಲೀಟರ್‌ಗೆ 77.74 ರೂ.ನಂತೆ ಆಟೋ ಎಲ್‌ಪಿಜಿ ಪೂರೈಸುತ್ತಿವೆ.

ಕಳೆದ ವಾರದಲ್ಲಿ ದಿನಕ್ಕೆ ಸರಾಸರಿ 64.9 ಮೆಟ್ರಿಕ್ ಟನ್ ಆಟೋ ಎಲ್‌ಪಿಜಿಯನ್ನು ವಿತರಿಸಲಾಗಿದೆ. ಸಂಘರ್ಷದ ಮೊದಲು ಈ ಪ್ರಮಾಣವು ದಿನಕ್ಕೆ 57.6 ಮೆಟ್ರಿಕ್ ಟನ್ ಇತ್ತು. ಇದು ಪೂರೈಕೆಯಲ್ಲಿನ ಗಮನಾರ್ಹ ಹೆಚ್ಚಳವನ್ನು ತೋರಿಸುತ್ತದೆ. ರಾಜ್ಯದಾದ್ಯಂತ ಪ್ರತಿದಿನ ಸುಮಾರು 4 ಲಕ್ಷ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು ಹಾಗೂ ಸುಮಾರು 18,000 ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನು ಪೂರೈಕೆ ಮಾಡಲಾಗುತ್ತಿದೆ. ಎಲ್ಲಾ ವಲಯಗಳಿಗೂ ಯಾವುದೇ ಅಡೆತಡೆಯಿಲ್ಲದೆ ಎಲ್‌ಪಿಜಿ ಸರಬರಾಜು ಆಗುವುದನ್ನು ಖಚಿತಪಡಿಸಿ ಕೊಳ್ಳಲು ರಾಜ್ಯ ಸರ್ಕಾರವು ನಿರಂತರವಾಗಿ ಪರಿಸ್ಥಿತಿಯ ಮೇಲೆ ನಿಗಾ ಇರಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮೈಸೂರು ಮಿತ್ರ
ಸೋಮವಾರ 30 ಮಾರ್ಚ್ 2026

ಕೆ.ಆರ್.ಆಸ್ಪತ್ರೆ, ಚೆಲುವಾಂಬ, ಸೂಪರ್ ಸ್ಪೆಷಾಲಿಟಿ, ಜಯದೇವ ಸೇರಿ
ಮೈಸೂರಿನ ವಿವಿಧ ಆಸ್ಪತ್ರೆಗಳಿಗೆ ವೈದ್ಯಕೀಯ ಶಿಕ್ಷಣ ಸಚಿವರ ಭೇಟಿ

ವಿವಿಧ ವೈದ್ಯಕೀಯ ಸೇವಾ ಘಟಕಗಳ ಉದ್ಘಾಟನೆ



ಮೈಸೂರಿನ ಕೆ.ಆರ್.ಎಸ್ ರಸ್ತೆಯಲ್ಲಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ಡಯಾಲಿಸಿಸ್ ಘಟಕವನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್ ಭಾನುವಾರ ಉದ್ಘಾಟಿಸಿದರು. ಶಾಸಕ ಕೆ.ಹರೀಶ್‌ಗೌಡ, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಎಂಎಂಸಿ ಮತ್ತು ಆರ್‌ಐ ಡೀನ್ ಮತ್ತು ನಿರ್ದೇಶಕಿ ಡಾ.ದಾಕ್ಷಾಯಣಿ ಮತ್ತಿತರರಿದ್ದರು.

ಮೈಸೂರು, ಮಾ.29(ಎಂಕೆ)– ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಡಿಯಲ್ಲಿ ಕಾರ್ಯನಿರ್ವಹಿಸುವ ಕೆ.ಆರ್.ಆಸ್ಪತ್ರೆ, ಚೆಲುವಾಂಬ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಕೇರ್, ಪಿಕೆಟಿಬಿ ಆಸ್ಪತ್ರೆ ಹಾಗೂ ಸ್ವಾಯತ್ತ ಸಂಸ್ಥೆಯಾದ ಜಯದೇವ ಹೃದ್ರೋಗ ಆಸ್ಪತ್ರೆಗೂ ಭೇಟಿ ನೀಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್, ವಿವಿಧ ವೈದ್ಯಕೀಯ ಸೇವಾ ಘಟಕಗಳನ್ನು ಉದ್ಘಾಟಿಸಿದರು.

ಕೆ.ಆರ್.ಆಸ್ಪತ್ರೆಯಲ್ಲಿ 'ಡಿಜಿಟಲ್ ರೇಡಿಯೋಗ್ರಫಿ(ಆಧುನಿಕ ಎಕ್ಸರೆ ತಂತ್ರಜ್ಞಾನ)' ಘಟಕ, ಚೆಲುವಾಂಬ ಆಸ್ಪತ್ರೆಯಲ್ಲಿ 'ನವಜಾತ ಶಿಶುಗಳ ತೀವ್ರ ನಿಗಾ ಘಟಕ (ಎನ್‌ಐಸಿಯು)', 'ಮಾಡ್ಯುಲರ್ ಆಪರೇಷನ್ ಥಿಯೇಟರ್(ಎಂಒಟಿ)', 'ಇನ್ ವಿಟ್ರೊ ಫಲೀಕರಣ(ಐವಿಎಫ್–ಟೆಸ್ಟ್ ಟ್ಯೂಬ್ ಬೇಬಿ) ಹಾಗೂ ಪಿಕೆಟಿಬಿ ಆಸ್ಪತ್ರೆ ಯಲ್ಲಿ 'ಇಂಟರ್ವೆನ್ಷನಲ್ ಪಲ್ಮನಾಲಜಿ ಸೂಟ್ (ಐಪಿ ಸೂಟ್)' ಘಟಕ ಉದ್ಘಾಟಿಸಿದರು.

ಹಾಗೆಯೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನರರೋಗ ಚಿಕಿತ್ಸೆಗಳಿಗೆ ಸಂಬಂಧಿಸಿದ 'ಎಲೆಕ್ಟ್ರೋ ಎನ್ಸೆಫಲೋ ಗ್ರಾಫ್ (ಇಇಜಿ)', 'ನರ್ವ್ ಕಂಡಿಷನ್ ಸ್ಟಡಿ (ಎನ್‌ಸಿಎಸ್)', 'ನ್ಯೂರೋ ಕ್ಯಾಥ್ ಲ್ಯಾಬ್', 'ಡಯಾಲಿಸಿಸ್', 'ಎಕ್ಸರೇ', 'ಕೇಂದ್ರ ಶುದ್ಧೀಕೃತ ಸರಬರಾಜು ವಿಭಾಗ', 'ಅಲ್ಟ್ರಾ ಸೌಂಡ್' ಹಾಗೂ ಟ್ರಾಮಾ ಕೇರ್ ಸೆಂಟರ್‌ನಲ್ಲಿ 'ರೊಬೊಟಿಕ್ ಶಸ್ತ್ರ ಚಿಕಿತ್ಸೆ' 'ಪ್ರಯೋಗಾಲಯ(ಲ್ಯಾಬ್)', 'ರಕ್ತ ಸಂಗ್ರಹಣಾ ಘಟಕ'ಕ್ಕೆ ವಿದ್ಯುಕ್ತ ಚಾಲನೆ ನೀಡಿದರು.

ನಂತರ ಉದ್ಘಾಟನೆಗೆ ಸಿದ್ಧವಾಗಿರುವ ಕಿದ್ವಾಯಿ ಪೆರಿಫೆರಲ್ ಕ್ಯಾನ್ಸರ್ ಕೇಂದ್ರ ಹಾಗೂ ಜಯದೇವ ಹೃದ್ರೋಗ ಆಸ್ಪತ್ರೆಗೆ ಭೇಟಿ ನೀಡಿದ ಅವರು, ಪರಿಶೀಲನೆ ನಡೆಸಿದರು. ಕಿದ್ವಾಯಿ ಪೆರಿಫೆರಲ್ ಕ್ಯಾನ್ಸರ್ ಕೇಂದ್ರಕ್ಕೆ ಅಗತ್ಯವಿರುವ ವೈದ್ಯಕೀಯ ಸಲಕರಣೆಗಳು, ಹಾಸಿಗೆಗಳು, ಇನ್ನಿತರೆ ಸಲಕರಣೆಗಳ ವ್ಯವಸ್ಥೆ ಮಾಡಿಕೊಳ್ಳುವಂತೆ ಸೂಚಿಸಿದರು.

ಬಳಿಕ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸಂಪೂರ್ಣವಾಗಿ ಎಲ್ಲಾ ವೈದ್ಯಕೀಯ ಸೌಲಭ್ಯದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಪ್ಲಾಸ್ಟಿಕ್ ಸರ್ಜರಿ, ನೆಫ್ರಾಲಜಿ, ಯುರಾಲಜಿ, ನ್ಯೂರೋಲಜಿ, ಡಯಾಲಿಸಿಸ್, ಗ್ಯಾಸ್ಟ್ರೋಎಂಟ್ರಾಲಜಿ, ಸರ್ಜಿಕಲ್ ಆಂಕೋಲಜಿ, ನ್ಯೂರೋ ಕ್ಯಾಥ್ ಲ್ಯಾಬ್ ಸೇರಿದಂತೆ ಆಧುನಿಕ ವೈದ್ಯಕೀಯ ಸಲಕರಣೆಗಳೊಂದಿಗೆ ಎಲ್ಲಾ ರೀತಿಯ ಚಿಕಿತ್ಸೆಯನ್ನು ಗುಣಮಟ್ಟದೊಂದಿಗೆ ನೀಡಲಾಗುತ್ತಿದೆ. ಮೈಸೂರಿಗೆ ಇದೊಂದು ಕೊಡುಗೆ ಆಗಿದ್ದು, ಮೈಸೂರು ವಿಭಾಗ(ಮೈಸೂರು, ಮಂಡ್ಯ, ಹಾಸನ, ಚಾ.ನಗರ ಮತ್ತು ಕೊಡಗು)ದ ಜನರು ಉಚಿತವಾಗಿ ಗುಣಮಟ್ಟದ ಚಿಕಿತ್ಸೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕೋರಿದರು.

ಉಚಿತ ಡಯಾಲಿಸಿಸ್‌ಗೆ ಮನವಿ: ಇದೇ ವೇಳೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಡಯಾಲಿಸಿಸ್ ಘಟಕದಲ್ಲಿ ಉಚಿತವಾಗಿ ಡಯಾಲಿಸಿಸ್ ಚಿಕಿತ್ಸೆ ನೀಡುವಂತೆ ರೋಗಿಗಳು ಹಾಗೂ ರೋಗಿಗಳ ಸಂಬಂಧಿಕರು ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ಸಚಿವರು, ಇದುವರೆಗೂ ಉಚಿತವಾಗಿಯೇ ಡಯಾಲಿಸಿಸ್ ಚಿಕಿತ್ಸೆ ನೀಡಲಾಗುತ್ತಿದೆ. ಗೊಂದಲ ಉಂಟಾಗಿದ್ದು, ಕೂಡಲೇ ಬಗೆಹರಿಸಿ, ಉಚಿತವಾಗಿ ನೀಡುವಂತೆ ತಿಳಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಸಾವಿರ ಕೋಟಿಗೂ ಹೆಚ್ಚು ಅನುದಾನ: ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಮೈಸೂರಿನ ಆರೋಗ್ಯ ಕ್ಷೇತ್ರಕ್ಕೆ ಸಾವಿರ ಕೋಟಿಗೂ ಹೆಚ್ಚಿನ ಅನುದಾನವನ್ನು ನೀಡಲಾಗಿದೆ. ಕೆಲಸಗಳು ನಡೆಯುತ್ತಿವೆ. ಸಾರ್ವಜನಿಕರ ಅನುಕೂಲತೆ ಅರಿತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಸ್ಥೆಯಡಿ ನಿರ್ವಹಿಸುವ ಎಲ್ಲಾ ಆಸ್ಪತ್ರೆಗಳಲ್ಲಿ ಉತ್ತಮ ಸೇವೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಮತ್ತು ನಿರ್ದೇಶಕಿ ಡಾ.ದಾಕ್ಷಾಯಣಿ, ಆಡಳಿತಾಧಿಕಾರಿ ಮಹೇಶ್, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಶೋಭಾ, ಚೆಲುವಾಂಬ ವೈದ್ಯಕೀಯ ಅಧೀಕ್ಷಕಿ ಡಾ.ಆರ್.ಸುಧಾ, ಪಿಕೆಟಿಬಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪ್ರಶಾಂತ್, ಟ್ರಾಮಾ ಕೇರ್ ಸೆಂಟರ್‌ನ ನೋಡಲ್ ಅಧಿಕಾರಿ ಡಾ.ನೀಲನ್‌ಗೌಡ ವಿ.ಪಾಟೀಲ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನೋಡಲ್ ಅಧಿಕಾರಿ ಡಾ.ಮೋಹನ್, ಹಿರಿಯ ವೈದ್ಯರಾದ ಡಾ.ಸುರೇಶ್, ಡಾ.ಸತೀಶ್, ನಾಮನಿರ್ದೇಶಿತ ಸದಸ್ಯೆ ತನುಜಾ ಮಹೇಶ್, ಜಯದೇವ ಆಸ್ಪತ್ರೆಯ ಪ್ರಿಯದರ್ಶಿನಿ ಮತ್ತಿತರರಿದ್ದರು.

ಮೈಸೂರು ಹೆಲ್ತ್ ಹಬ್...

ಮೈಸೂರು ಹೆಲ್ತ್ ಹಬ್ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಜಯದೇವ ಆಸ್ಪತ್ರೆಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಹೆಚ್ಚುವರಿಯಾಗಿ 150 ಹಾಸಿಗೆಗಳ ಸೇರ್ಪಡೆಗೆ ಬಜೆಟ್‌ನಲ್ಲಿ 180 ಕೋಟಿ ರೂ. ನೀಡಲಾಗಿದೆ. ಹೊಸದಾಗಿ ಇನ್ಸ್‌ಟಿಟ್ಯೂಟ್ ಆಫ್ ನೆಫ್ರೋಲಜಿ, ಇನ್ಸ್‌ಟಿಟ್ಯೂಟ್ ಆಫ್ ಎಂಡೊಕ್ರೈನಾಲಜಿ ಕಟ್ಟಡ ನಿರ್ಮಾಣ ಆರಂಭವಾಗಿದೆ. ಕೆ.ಆರ್.ಆಸ್ಪತ್ರೆಯಲ್ಲಿ ಹೊಸ ಹೊರರೋಗಿಗಳ ವಿಭಾಗ(ಒಪಿಡಿ ಬ್ಲಾಕ್) ನಿರ್ಮಾಣವಾಗಲಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಉತ್ತಮ ಆರೈಕೆ ನೀಡುವ ಉದ್ದೇಶವನ್ನು ಸರ್ಕಾರ ಹೊಂದಿದ್ದು, ಮೈಸೂರು ಮಾತ್ರವಲ್ಲದೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ವೈದ್ಯಕೀಯ ಸೇವಾ ಕೇಂದ್ರಗಳನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೆಲಸ ಮಾಡುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್ ತಿಳಿಸಿದರು.

ಅದರಂತೆ ಅಗತ್ಯತೆಗೆ ಅನುಗುಣವಾಗಿ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಯನ್ನು ನಿಯೋಜನೆ ಮಾಡುತ್ತಿದ್ದು, ಮೆಡಿಕಲ್ ಸೀಟ್‌ಗಳ ಸಂಖ್ಯೆಯನ್ನು ಹೆಚ್ಚಳ ಮಾಡಲಾಗಿದೆ. ಒಟ್ಟಾರೆಯಾಗಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುವ ಎಲ್ಲಾ ಆಸ್ಪತ್ರೆಗಳ ನಿರ್ವಹಣೆಗೆ ಮಾಸ್ಟರ್ ಪ್ಲಾನ್ ಆಗಿದ್ದು, ಪ್ಲಾನ್ ಪ್ರಕಾರವೇ ಕಾರ್ಯನಿರ್ವಹಣೆಯಾಗುತ್ತಿದೆ ಎಂದರು.

> "ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದೂರದೃಷ್ಟಿ ಫಲವಾಗಿ ಮೈಸೂರಿಗೆ ಹಲವು ಆಸ್ಪತ್ರೆಗಳು ಬಂದಿವೆ. ಈ ಎಲ್ಲಾ ಆಸ್ಪತ್ರೆಗಳಲ್ಲಿ ಹಿಂದುಳಿದವರು, ಬಡವರಿಗೆ ಉಚಿತವಾಗಿ ಸೇವೆ ಸಿಗುತ್ತಿದೆ. ಇದರಿಂದ ಮೈಸೂರು ಹಾಗೂ ಸುತ್ತಲ ಜಿಲ್ಲೆಯವರಿಗೂ ಅನುಕೂಲವಾಗಿದೆ. –ಕೆ.ಹರೀಶ್‌ಗೌಡ, ಶಾಸಕ, ಚಾಮರಾಜ ಕ್ಷೇತ್ರ

400 ವೈದ್ಯಕೀಯ ಸೀಟು ಹೆಚ್ಚಿಸಲು ಪ್ರಸ್ತಾವನೆ...

> "ರಾಜ್ಯಾದ್ಯಂತ ಒಟ್ಟು 400 ವೈದ್ಯಕೀಯ ಸೀಟು ಹೆಚ್ಚಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಕಳೆದ ವರ್ಷ ರಾಜ್ಯಾದ್ಯಂತ 450 ಸೀಟು ಹೆಚ್ಚಿಸಲಾಗಿದೆ. ಮೈಸೂರಲ್ಲೂ ಸೀಟ್‌ಗಳ ಸಂಖ್ಯೆಯನ್ನು 200ರಿಂದ 250ಕ್ಕೆ ಹೆಚ್ಚಿಸಲಾಗಿದೆ. ಅದೇ ರೀತಿ ಈ ಸಾಲಿನಲ್ಲಿ ಮತ್ತೆ 400 ಸೀಟು ಹೆಚ್ಚಿಸಲು ಮನವಿ ಮಾಡಲಾಗಿದೆ.
> –ಡಾ.ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವ

ಕಾವೇರಿ ನೀರು ಹಂಚಿಕೆ ವಿವಾದ
ರಿಟ್ ಅರ್ಜಿ ಸಲ್ಲಿಕೆಗೂ ಮುನ್ನ ರೈತರು, ರೈತ ಸಂಘಟನೆಗಳ ಅಭಿಪ್ರಾಯ ಸಂಗ್ರಹ
ಕಾವೇರಿ ರಕ್ಷಣಾ ಸಮಿತಿ ಸಭೆಯಲ್ಲಿ ನಿರ್ಧಾರ




ಬೆಂಗಳೂರಿನ ವಿಜಯನಗರದಲ್ಲಿರುವ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಕಾವೇರಿ ನದಿ ರಕ್ಷಣಾ ಸಮಿತಿ ಸಭೆ ನಡೆಯಿತು.

ಮೈಸೂರು,ಮಾ.29(ಎಂಕೆ)–ಕಾವೇರಿ ನದಿ ನೀರು ಹಂಚಿಕೆ ತೀರ್ಪು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸುವ ಮುನ್ನ ರೈತರು, ರೈತ ಸಂಘಟನೆಗಳ ಅಭಿಪ್ರಾಯ ಸಂಗ್ರಹಕ್ಕೆ ಕಾವೇರಿ ನದಿ ರಕ್ಷಣಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು.

ಬೆಂಗಳೂರಿನ ವಿಜಯನಗರದಲ್ಲಿರುವ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಸಮಿತಿ ಅಧ್ಯಕ್ಷ ಹೆಚ್.ಕೆ.ರಾಮು ಅಧ್ಯಕ್ಷತೆ ಹಾಗೂ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕಾವೇರಿ ನದಿ ಉಗಮ ಸ್ಥಾನದಿಂದ ಹಿಡಿದು ಅಂತ್ಯದವರೆಗೆ ರೈತ ಸಂಘಟನೆಗಳಿಂದ ಪ್ರಸ್ತುತ ಸ್ಥಿತಿಗತಿಗಳ ವಿವರ ಕ್ರೋಢೀಕರಿಸಲು ನಿರ್ಧಾರ ಕೈಗೊಳ್ಳಲಾಯಿತು.

ಸುಪ್ರೀಂಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸುವುದಕ್ಕೂ ಮುನ್ನ ಪ್ರವಾಸ ಮಾಡಿ, ಅಭಿಪ್ರಾಯ ಸಂಗ್ರಹವಾಗಬೇಕಿದೆ. ಈ ನಿಟ್ಟಿನಲ್ಲಿ ಏಪ್ರಿಲ್ ಕೊನೆ ವಾರದೊಳಗೆ ಕೈಗೊಳ್ಳಲು ಕಾಲಾವಧಿ ನಿರ್ಣಯಿಸಬೇಕೆಂದು ಚರ್ಚಿಸಲಾಯಿತು. ಮಾಜಿ ಎಂಎಲ್‌ಸಿಗಳಾದ ತಿಪ್ಪೇಸ್ವಾಮಿ, ದೇವೇಗೌಡ, ನಿವೃತ್ತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ, ಡಾ.ಸಿ.ಸೋಮಶೇಖರ್, ಡಿ.ಎಸ್.ವೀರಯ್ಯ, ಸಮಿತಿ ಪ್ರಧಾನ ಕಾರ್ಯದರ್ಶಿ ಟಿ.ನಂಜಪ್ಪ, ಕೋಶಾಧ್ಯಕ್ಷ ಸಿ.ಜಗದೀಶ, ಕಾರ್ಯಾಧ್ಯಕ್ಷ ಕೆ.ಟಿ.ಚಂದ್ರು, ಮಹಿಳಾ ಉಪಾಧ್ಯಕ್ಷೆ ಕನ್ಯಾಕುಮಾರಿ, ಉಪಾಧ್ಯಕ್ಷ ಸಿ.ಎಸ್.ಸುರೇಶ್, ವಕೀಲ ಗಂಗಾಧರಗೌಡ, ಲಕ್ಷ್ಮಿಕಾಂತ್, ಡಿ.ಆನಂದ್, ಹೈಕೋರ್ಟ್ ವಕೀಲ ಟಿ.ಎಲ್.ಮೂರ್ತಿ, ಮಂಡ್ಯದ ಪ್ರಶಾಂತ್‌ಗೌಡ, ಚನ್ನಪಟ್ಟಣದ ರಾಜು, ರವಿ, ರವಿಕೀರ್ತಿ, ಜೆ.ಓಂಕೀರ್ತಿ, ಲಿಂಗಯ್ಯ ಮಾಸ್ಟರ್ ಮತ್ತಿತರರಿದ್ದರು.

ಸಂಸದ ಯದುವೀರ್ ಒಡೆಯರ್ ಹುಟ್ಟುಹಬ್ಬ ಆಚರಣೆ...



ಮೈಸೂರು ರಾಜವಂಶಸ್ಥರೂ ಆದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಜನ್ಮದಿನದ ಹಿನ್ನೆಲೆಯಲ್ಲಿ ಮಾಜಿ ಉಪ ಮೇಯರ್, ಮೈಸೂರು ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ ನೇತೃತ್ವದಲ್ಲಿ ಜಯನಗರದ ಚಿಕ್ಕಹರದನಹಳ್ಳಿ ಬಡಾವಣೆಯಲ್ಲಿರುವ ಛಾಯಾದೇವಿ ಅನಾಥಾಶ್ರಮದ ಮಕ್ಕಳಿಗೆ ಭೋಜನ ವ್ಯವಸ್ಥೆ ಮಾಡಲಾಯಿತು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಮಂಡಲ ಅಧ್ಯಕ್ಷ ರಾಕೇಶ್ ಭಟ್, ಎಂ.ರಾಜಕುಮಾರ್, ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಪ್ರತಾಪ್, ಮೋರ್ಚಾ ಸಂಚಾಲಕರಾದ ಅಶೋಕಪುರ ಮಹೇಶ್, ಶಿವು ಪಟೇಲ್, ರೈಲ್ವೆ ರಾಜು, ಸುಂದರ್‌ರಾಜ್, ಆಶ್ರಮದ ಕಾರ್ಯನಿರ್ವಾಹಕ ಶಿವರುದ್ರಪ್ಪ ಇತರರು ಉಪಸ್ಥಿತರಿದ್ದರು.

ಇಂದು ಕಸಾಯಿಖಾನೆ, ಮಾಂಸ ಮಾರಾಟ ಕಡ್ಡಾಯ ನಿಷೇಧ

ಮೈಸೂರು,ಮಾ.29–ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಮಾ.30ರಂದು ಮಹಾವೀರ ಜಯಂತಿ ಪ್ರಯುಕ್ತ ಮುಚ್ಚಲಾಗುತ್ತದೆ. ಈ ದಿನ (ಕುರಿ/ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು) ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಿದೆ. ಹಾಗಾಗಿ ಮೈಸೂರು ಪಾಲಿಕೆ ವ್ಯಾಪ್ತಿಯಲ್ಲಿ ಬರುವ ವಿವಿಧ ಮಾಂಸದ ಅಂಗಡಿಗಳನ್ನು ಮುಚ್ಚಲು ಆದೇಶ ನೀಡಲಾಗಿದೆ ಎಂದು ಮೈಸೂರು ಪಾಲಿಕೆ ಕಾರ್ಯಪಾಲಕ ಅಭಿಯಂತರರು(ಪರಿಸರ) ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಷೇಧಿತ ಸಂಘಟನೆಯ ನಾಲ್ವರ ಗುಂಡಿಕ್ಕಿ ಹತ್ಯೆ

ಮಣಿಪುರ: ಮಣಿಪುರದ ಕಾಮ್ಜಾಂಗ್ ಜಿಲ್ಲೆಯಲ್ಲಿ ನಿಷೇಧಿತ ಸಂಘಟನೆಯ ನಾಲ್ವರು ಸದಸ್ಯರನ್ನು ವಿರೋಧಿ ಗುಂಪಿನ ಸದಸ್ಯರು ಗುಂಡಿಕ್ಕಿ ಕೊಂದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಜಿಲ್ಲೆಯ ಹಾಂಗ್‌ಬೈ ಗ್ರಾಮದಲ್ಲಿ ಶನಿವಾರ ರಾತ್ರಿ 9 ಗಂಟೆಗೆ ಈ ಗುಂಡಿನ ದಾಳಿ ನಡೆದಿದ್ದು, ಭಾನುವಾರ ಬೆಳಗ್ಗೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ್ದಾರೆ. ನಿಷೇಧಿತ ಎನ್‌ಎಸ್‌ಸಿಎನ್ ಈಸ್ಟರ್ನ್ ಫ್ಲಾಂಕ್‌ನ ನಾಲ್ವರು ಸದಸ್ಯರ ಶವಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ವಿರೋಧಿ ಗುಂಪಿನ ಸದಸ್ಯರು ತನ್ನ ಆರು ಕಾರ್ಯಕರ್ತರಿದ್ದ ವಾಹನವನ್ನು ತಡೆದು ಅವರ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ದಾಳಿಯಲ್ಲಿ ನಾಲ್ವರು ಕಾರ್ಯಕರ್ತರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಇಬ್ಬರು ಸ್ಥಳದಿಂದ ಪರಾರಿಯಾಗುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ನಿಷೇಧಿತ ಎನ್‌ಎಸ್‌ಸಿಎನ್ ಈಸ್ಟರ್ನ್ ಫ್ಲಾಂಕ್ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕೃಷಿ ಹೊಂಡದಲ್ಲಿ ಈಜಲು ಹೋಗಿ ಒಂದೇ ಕುಟುಂಬದ ನಾಲ್ವರು ಮಕ್ಕಳು ಜಲಸಮಾಧಿ

ಯಾದಗಿರಿ: ಕೃಷಿ ಹೊಂಡದಲ್ಲಿ ಈಜಲು ಹೋಗಿದ್ದ ಒಂದೇ ಕುಟುಂಬದ ನಾಲ್ವರು ಮಕ್ಕಳು ಜಲಸಮಾಧಿಯಾಗಿರುವ ದಾರುಣ ಘಟನೆ ಜಿಲ್ಲೆಯ ಸುರಪುರ ತಾಲೂಕು ನಗನೂರು ಗ್ರಾಮದಲ್ಲಿ ಭಾನುವಾರ ನಡೆದಿದೆ. ಮೃತ ಮಕ್ಕಳನ್ನು ನಗನೂರಿನ ರಾಜೀವ್ ಬಾಲಪ್ಪ ಅವರ ಮಕ್ಕಳಾದ ಶರತ್(6), ಹನುಮೇಶ್(7), ಮಲ್ಲಪ್ಪ ಬಾಲಪ್ಪ ಅವರ ಪುತ್ರ ಕಿರಣ್(6), ರಾಜೀವ್ ಅವರ ಸಹೋದರಿ ಗುಬ್ಬಮ್ಮ ಅವರ ಪುತ್ರಿ ಬಸಮ್ಮ(11) ಎಂದು ಗುರುತಿಸಲಾಗಿದೆ. ಇವರು ಶಾಲೆಗೆ ರಜೆ ಇದ್ದಿದ್ದರಿಂದ ಒಟ್ಟಾಗಿ ಈಜಲು ಹೋಗಿದ್ದ ವೇಳೆ ಈ ದುರಂತ ಸಂಭವಿಸಿದೆ. ವಿಷಯ ತಿಳಿದು ಪೋಷಕರು, ಸಂಬಂಧಿಕರಿಗೆ ಆಘಾತವಾಗಿದ್ದು, ಗ್ರಾಮದಲ್ಲಿ ಆಕ್ರಂದನ ಮುಗಿಲು ಮುಟ್ಟಿದೆ. ರೈತರ ಅನುಕೂಲಕ್ಕಾಗಿ ನಿರ್ಮಿಸಲಾದ ಈ ಕೃಷಿ ಹೊಂಡಗಳಿಗೆ ರಕ್ಷಣಾ ಬೇಲಿ ಇಲ್ಲದೆ ಹೀಗೆ ಚಿಕ್ಕ ಮಕ್ಕಳು ಬಲಿಯಾಗುತ್ತಿದ್ದು, ಕೃಷಿ ಇಲಾಖೆ ಹಾಗೂ ರೈತರು ಸೂಕ್ತ ಕ್ರಮ ವಹಿಸಬೇಕಿದೆ.



ಮೈಸೂರಲ್ಲಿ ಭಗವಾನ್ ಬುದ್ಧರ ಮೂರ್ತಿ ಪ್ರತಿಷ್ಠಾಪನೆ
ಧಮ್ಮ ಪರಿಪಾಲನೆ ಹಳ್ಳಿ–ಹಳ್ಳಿಗಳಿಗೆ ತಲುಪಬೇಕಿದೆ



ಸಿದ್ಧಾರ್ಥ ಬುದ್ಧ ವಿಹಾರದಲ್ಲಿ ಭಗವಾನ್ ಬುದ್ಧರ ಮೂರ್ತಿಯ ಪ್ರತಿಷ್ಠಾಪನೆಯನ್ನು ಭಾನುವಾರ ನೆರವೇರಿಸಲಾಯಿತು.

ಮೈಸೂರು,ಮಾ.29(ಎಂಕೆ)– ಮೈಸೂರಿನ ವಿಜಯನಗರ 1ನೇ ಹಂತ ದಲ್ಲಿರುವ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣದಲ್ಲಿ ಕರ್ನಾಟಕ ಬುದ್ಧ ಧಮ್ಮ ಸಮಿತಿ ವತಿಯಿಂದ ನೂತನವಾಗಿ ನಿರ್ಮಿಸಿರುವ ಸಿದ್ಧಾರ್ಥ ಬುದ್ಧ ವಿಹಾರದಲ್ಲಿ ಭಗವಾನ್ ಬುದ್ಧರ ಮೂರ್ತಿಯ ಪ್ರತಿಷ್ಠಾಪನೆಯನ್ನು ಭಾನುವಾರ ನೆರವೇರಿಸಲಾಯಿತು.

ನಾಗಪುರ ಅಲೋಕ ಬುದ್ಧವಿಹಾರದ ವಿನಯ ರಕ್ಷಿತ ಭಂತೇಜಿ, ಕೊಳ್ಳೇಗಾಲ ಜೇತವನ ಬುದ್ಧ ವಿಹಾರದ ಮನೋರಕ್ಖಿತ ಭಂತೇಜಿ, ಚೆನ್ನೈ ಮಹಾಬೋಧಿ ಮಿಷನ್‌ನ ಬುದ್ಧಪ್ರಕಾಶ್ ಭಂತೇಜಿ, ಬೈಲಕುಪ್ಪೆ ನಳಂದ ವಿವಿಯ ಕರ್ಮ ರಿಂಪೋಚೆ ಭಂತೇಜಿ, ಚಾಮರಾಜನಗರದ ನಳಂದ ಬೌದ್ಧ ವಿವಿಯ ಬೋಧಿ ದತ್ತ ಭಂತೇಜಿ, ಕೂಡ್ಲೂರು ನಳಂದ ಬುದ್ಧ ವಿಹಾರದ ಭೋದಿರತ್ನ ಭಂತೇಜಿ ಹಾಗೂ ಬಿಎಸ್‌ಐ ಕರ್ನಾಟಕ ರಾಜ್ಯ ಶಾಖೆಯ ಸಂಘ ನಾಯಕ ಡಾ.ಕಲ್ಯಾಣ ಸಿರಿ ಭಂತೇಜಿ ಸಮ್ಮುಖದಲ್ಲಿ ಪ್ರತಿಷ್ಠಾಪಿಸಲಾಯಿತು.

ಹಾಗೆಯೇ ಕೊಳ್ಳೇಗಾಲ ಜೇತವನ ಬುದ್ಧ ವಿಹಾರದ ಮನೋರಕ್ಖಿತ ಭಂತೇಜಿ ನೇತೃತ್ವದಲ್ಲಿ 500ಕ್ಕೂ ಬೌದ್ಧ ಅನುಯಾಯಿಗಳು ಸಾಮೂಹಿಕವಾಗಿ ಧಮ್ಮ ದರ್ಶನ, ಪರಿತ್ರಾಣ ಪಠಣ, ಪಂಚಶೀಲ ಬೋಧನೆ, ಮೈತ್ರಿಧ್ಯಾನ, ಧಮ್ಮೋಪದೇಶಗಳನ್ನು ನಡೆಸಿದರು. ನಂತರ ವೇದಿಕೆ ಕಾರ್ಯಕ್ರಮದಲ್ಲಿ ಕರ್ನಾಟಕ ಬುದ್ಧ ಧಮ್ಮ ಸಮಿತಿಗಳ ಒಕ್ಕೂಟ ಗೌರವಾಧ್ಯಕ್ಷ ಬಿ.ಗೋಪಾಲ್, 'ಸಿದ್ಧಾರ್ಥ ಬುದ್ಧ ವಿಹಾರ ನಡೆದು ಬಂದ ಹಾದಿ' ಪುಸ್ತಕ ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಭಗವಾನ್ ಬುದ್ಧ ವಿಹಾರ ಮುಂದಿನ ಜನಾಂಗಕ್ಕೆ ಮಾದರಿಯಾಗಿ, ಅಂಬೇಡ್ಕರ್ ಕಂಡ ಪ್ರಬುದ್ಧ ಸಮಾಜ ನಿರ್ಮಾಣಕ್ಕೆ ಬುನಾದಿ ಹಾಕಬೇಕಿದೆ. ಬುದ್ಧನ ಆಶಯಕ್ಕೆ ಸಮಾಜ ಪರಿವರ್ತನೆಯಾಗಿ, ಅಶೋಕನ ಕಾಲದ ಸುವರ್ಣ ಯುಗ ಮರುಕಳಿಸಬೇಕಿದೆ. ಧಮ್ಮದಿಂದ ಅಸ್ಪೃಶ್ಯತೆ ನಿರ್ಮೂಲನೆಯಾಗಬೇಕಿದೆ. ಧಮ್ಮ ಪರಿಪಾಲನೆ ಹಳ್ಳಿ ಹಳ್ಳಿಗೆ ತಲುಪ ಬೇಕಿದೆ ಎಂದು ಕರೆ ನೀಡಿದರು.

ಕರ್ನಾಟಕ ಬುದ್ಧ ಧಮ್ಮ ಮೈಸೂರು ಸಮಿತಿ ಕಾರ್ಯದರ್ಶಿ ಆರ್.ಮಹಾದೇವಪ್ಪ ಮಾತನಾಡಿ, 25 ವರ್ಷಗಳ ಕನಸು ನನಸಾಗಿದೆ. ಯಾವುದೇ ಧಾರ್ಮಿಕ ಸಂಸ್ಥೆಗಳು ಸಂಪತ್ತಿನ ಕೇಂದ್ರವಾಗಬಾರದು. ಧಮ್ಮ ಉದ್ದೇಶ ಸಂಪತ್ತು ಕ್ರೋಢಿಕರಣವಲ್ಲ ಎಂದರು. ಕರ್ನಾಟಕ ಬುದ್ಧ ಧಮ್ಮ ಸಮಿತಿ ಗೌರವಾಧ್ಯಕ್ಷ ಬಿ.ಗೋಪಾಲ್, ಜಿಲ್ಲಾಧ್ಯಕ್ಷ ಪ್ರೊ.ಡಿ.ನಂಜುಂಡಯ್ಯ, ಬೆಸ್ಟ್ ಸಂಸ್ಥೆ ಕಾರ್ಯದರ್ಶಿ ಡಾ.ಜಗನ್ನಾಥ್, ಬೆಂಗಳೂರು ಪ್ರದೇಶಾಭಿವೃದ್ಧಿ ಮಂಡಳಿ ಯೋಜನಾ ಇಲಾಖೆ ನಿರ್ದೇಶಕ ಡಿ.ಚಂದ್ರಶೇಖರ್, ರಾಜಪ್ಪ, ಶಿವರಾಜು ಮತ್ತಿತರರು ಉಪಸ್ಥಿತರಿದ್ದರು.

ದೇಶ – ವಿದೇಶ

ಥಾರ್ ಡಿಕ್ಕಿ: ಅಜ್ಜ, ಇಬ್ಬರು ಮೊಮ್ಮಕ್ಕಳು ದುರ್ಮರಣ



ಚಂಡೀಗಢ: ವೇಗವಾಗಿ ಬಂದ ಥಾರ್ ಡಿಕ್ಕಿ ಹೊಡೆದ ಪರಿಣಾಮ ನಡೆದುಕೊಂಡು ಹೋಗುತ್ತಿದ್ದ ಅಜ್ಜ ಮತ್ತು ಇಬ್ಬರು ಮೊಮ್ಮಕ್ಕಳು ಸಾವನ್ನಪ್ಪಿರುವ ಘಟನೆ ಗುರು ಗ್ರಾಮದ ಪಟೌಡಿಯ ಖೋಡ್ ಗ್ರಾಮದಲ್ಲಿ ನಡೆದಿದೆ. ಸುಭಾಷ್ ತನ್ನ ಇಬ್ಬರು ಮೊಮ್ಮಕ್ಕಳೊಂದಿಗೆ ತನ್ನ ಸಹೋದರರನ್ನು ಭೇಟಿ ಮಾಡಲು ಖೋಡ್ ಗ್ರಾಮದ ಬಳಿಯ ಲೋಕ್ರಾ ರಸ್ತೆಗೆ ಬಂದಿದ್ದರು. ಶುಕ್ರವಾರ ರಾತ್ರಿ 11 ಗಂಟೆ ಸುಮಾರಿಗೆ, ಇಬ್ಬರು ಮೊಮ್ಮಕ್ಕಳೊಂದಿಗೆ ಮನೆಗೆ ಹಿಂತಿರುಗುತ್ತಿದ್ದಾಗ, ಮಹೀಂದ್ರಾ ಥಾರ್ ಕಾರು ಹಿಂದಿನಿಂದ ಅವರಿಗೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಮೂವರು ಸ್ವಲ್ಪ ದೂರಕ್ಕೆ ಬಿದ್ದಿದ್ದಾರೆ. ಮಾಹಿತಿ ತಿಳಿದ ತಕ್ಷಣ ಪಟೌಡಿ ಪೊಲೀಸ್ ಠಾಣೆಯ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಮೂವರ ಮೃತದೇಹಗಳನ್ನು ಶವಾಗಾರಕ್ಕೆ ಕಳುಹಿಸಿದ್ದಾರೆ. ಅಪಘಾತದ ನಂತರ ಥಾರ್ ಚಾಲಕ ಕಾರನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ. ಅಪಘಾತವೆಸಗಿದ ಗುರುಗ್ರಾಮ್‌ನ ಗೋರಿಯಾವಾಸ್ ಗ್ರಾಮದ ನಿವಾಸಿ ದೀಪಾಂಶುನನ್ನು (25) ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

No Kings ಚಳವಳಿ: ಟ್ರಂಪ್ ವಿರುದ್ಧವೇ ಆಕ್ರೋಶ



ವಾಷಿಂಗ್ಟನ್: ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ಈಗ ಅಮೆರಿಕದಲ್ಲೇ ವ್ಯಾಪಕ ಆಕ್ರೋಶ ಭುಗಿಲೆದ್ದಿದೆ. ಇರಾನ್ ವಿರುದ್ಧದ ಯುದ್ಧ ಸೇರಿದಂತೆ ಟ್ರಂಪ್ ಅವರ ನೀತಿಯನ್ನು ವಿರೋಧಿಸಿ ಪ್ರತಿಭಟನಾಕಾರರ ದೊಡ್ಡ ಸಮೂಹವೇ ಬೀದಿಗಿಳಿದಿದ್ದಾರೆ. ನೋ ಕಿಂಗ್ಸ್ (ರಾಜರು ಬೇಡ – No King) ಚಳವಳಿಯ ಭಾಗವಾಗಿ ದೇಶದಾದ್ಯಂತ ಪ್ರತಿಭಟನಾಕಾರರು ರ್‍ಯಾಲಿ ನಡೆಸಿ ಟ್ರಂಪ್ ಅವರ ಸರ್ವಾಧಿಕಾರಿ ಧೋರಣೆಯ ಆಡಳಿತ ಶೈಲಿ, ವಲಸೆ ನೀತಿ ಹಾಗೂ ಇರಾನ್ ವಿರುದ್ಧದ ಯುದ್ಧದ ಕುರಿತು ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನೊ ಕಿಂಗ್ಸ್ ಚಳವಳಿಯ ಭಾಗವಾಗಿ 1 ವರ್ಷದಲ್ಲಿ ಟ್ರಂಪ್ ವಿರುದ್ಧ ಜನರು 3ನೇ ಸಲ ಜನ ಬೀದಿಳಿಗಿಳಿದಿದ್ದಾರೆ.

50 ಸ್ಟೇಟ್‌ಗಳ ದೊಡ್ಡ ಹಾಗೂ ಸಣ್ಣ ನಗರಗಳು ಸೇರಿದಂತೆ 3,200ಕ್ಕೂ ಹೆಚ್ಚು ಸಮಾವೇಶಗಳಲ್ಲಿ ಕನಿಷ್ಠ 80 ಲಕ್ಷ ಜನರು ಪ್ರತಿಭಟನೆಗೆ ಧುಮುಕಿದ್ದಾರೆ. ಅಮೆರಿಕದ ಅತಿ ಜನನಿಬಿಡ ನಗರವಾದ ನ್ಯೂಯಾರ್ಕ್, ವಾಷಿಂಗ್ಟನ್, ಲಾಸ್ ಏಂಜಲೀಸ್, ಡಲ್ಲಾಸ್, ಫಿಲಡೆಲ್ಫಿಯಾ ಸೇರಿದಂತೆ ಅನೇಖ ನಗರಗಳಲ್ಲಿ ದೊಡ್ಡ ಸಭೆಗಳು, ಪ್ರತಿಭಟನಾ ರ್‍ಯಾಲಿಗಳು ನಡೆದವು. ಆದ್ರೆ ಈ ಕುರಿತು ಅಮೆರಿಕದ ಸರ್ಕಾರಿ ಮೂಲಗಳಿಂದ ಯಾವುದೇ ಸ್ಪಷ್ಟನೆ ಬಂದಿಲ್ಲ.


ಇದು ನನ್ನದಲ್ಲ, 10 ಕೋಟಿ ಮರಳಿ ಪಡೆಯುವಂತೆ ಬ್ಯಾಂಕ್‌ಗೆ ಮಹಿಳೆ ಮನವಿ



ಲಕ್ನೋ: ತಾಂತ್ರಿಕ ದೋಷದಿಂದ ಉತ್ತರ ಪ್ರದೇಶದ ಮೈನ್‌ಪುರಿಯ ಮಹಿಳೆಯೊಬ್ಬರ ಬ್ಯಾಂಕ್ ಆಫ್ ಇಂಡಿಯಾದ ಖಾತೆಗೆ ಜಮೆಯಾಗಿದ್ದ 10 ಕೋಟಿ ರೂ. ಹಣವನ್ನು ಮರಳಿ ಪಡೆಯುವಂತೆ ಬ್ಯಾಂಕ್‌ಗೆ ಮನವಿ ಮಾಡಿದ್ದಾರೆ. ಮಹಿಳೆಯ ಕಾರ್ಯಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ.

ಬಿಚ್ವಾನ್ ಪ್ರದೇಶದ ದೇವ್‌ಗಂಜ್ ಗ್ರಾಮದ ನಿವಾಸಿಯಾದ ರೈತ ಪರಸ್ಥಾನ್ ಬಹೇಲಿಯಾ ಅವರ ಪತ್ನಿ ರೀಟಾ ಅವರ ಖಾತೆಗೆ ಈ ಹಣ ಜಮೆಯಾಗಿತ್ತು. ನವರಾತ್ರಿ ಸಮಯದಲ್ಲಿ ಹಣವನ್ನು ಹಿಂಪಡೆಯಲು ಅವರು ಸ್ಥಳೀಯ ಬ್ಯಾಂಕ್‌ಗೆ ಭೇಟಿ ನೀಡಿದ್ದರು. ಈ ವೇಳೆ ಶಾಖೆ ಮುಚ್ಚಿದ್ದರಿಂದ, ಹತ್ತಿರದ ಎಟಿಎಂಗೆ ಹೋಗಿ ತಮ್ಮ ಬ್ಯಾಲೆನ್ಸ್ ಪರಿಶೀಲಿಸಿದ್ದರು. ಈ ವೇಳೆ 9,99,49,588 ರೂ. ಇರುವುದಾಗಿ ಎಟಿಎಂನಲ್ಲಿ ತೋರಿಸಿದೆ. ಈ ಭಾರೀ ಮೊತ್ತವನ್ನು ನೋಡಿ ದಂಪತಿ ದಿಗ್ಭ್ರಮೆಗೊಂಡು, ಮತ್ತೊಂದು ಎಟಿಎಂನಲ್ಲಿ ಪರಿಶೀಲಿಸಿದ್ದಾರೆ. ಈ ವೇಳೆ ಪರಿಶೀಲನೆ ಮಾಡುವಾಗ ವೀಡಿಯೋ ಮಾಡಿಕೊಂಡಿದ್ದಾರೆ. ಆ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಅವರ ಖಾತೆಯಲ್ಲಿ ಅಪಾರ ಮೊತ್ತ ತೋರಿಸುತ್ತಿದ್ದರೂ, ರೀಟಾ ಯಾವುದೇ ಹಣವನ್ನು ಪಡೆದುಕೊಂಡಿಲ್ಲ. ಕುಟುಂಬಸ್ಥರಿಗೂ ಹಣ ತೆಗೆಯದಂತೆ ಸೂಚಿಸಿದ್ದರು.

ಸ್ನಾನಗೃಹದಲ್ಲಿ ಬಿದ್ದು ಗಾಯಗೊಂಡಿದ್ದ ಪಾಕ್ ಸೇನೆ ಮಾಜಿ ಮುಖ್ಯಸ್ಥ ಬಜ್ವಾ ನಿಧನ



ರಾವಲ್ಪಿಂಡಿ: ಪಾಕಿಸ್ತಾನ ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಕ್ವಮರ್ ಜಾವೇದ್ ಬಜ್ವಾ ಅವರು ನಿಧನರಾಗಿದ್ದಾರೆ.

ಹಲವು ವಾರಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ಅವರು, ರಾವಲ್ಪಿಂಡಿಯಲ್ಲಿರುವ ಸೇನಾ ಆಸ್ಪತ್ರೆಯಲ್ಲೇ ಕೊನೆಯುಸಿರೆಳೆದಿದ್ದಾರೆ ಎಂದು ವರದಿಯಾಗಿದೆ. ಬಜ್ವಾ ಅವರು ಇದೇ ವರ್ಷ (2026ರ) ಫೆಬ್ರವರಿಯಲ್ಲಿ ಸ್ನಾನಗೃಹದಲ್ಲಿ ಬಿದ್ದು, ತಲೆಗೆ ಗಂಭೀರ ಪೆಟ್ಟು ಮಾಡಿಕೊಂಡಿದ್ದರು. ಅವರನ್ನು ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇರಿಸಿ ಚಿಕಿತ್ಸೆ ನೀಡಲಾಗುತ್ತಿತ್ತು.

ಸೇನಾ ಕಾರ್ಯಗಳಷ್ಟೇ ಅಲ್ಲದೆ, ದೇಶದ ರಾಜಕೀಯ ವಿಚಾರದಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದ ಬಜ್ವಾ, ಪಾಕಿಸ್ತಾನದ ಅತ್ಯಂತ ಪ್ರಬಲ ಸೇನಾ ಮುಖ್ಯಸ್ಥರಲ್ಲಿ ಒಬ್ಬರು ಎನಿಸಿದ್ದರು. ಸರ್ಕಾರದ ಮೇಲೆ ಸೇನೆಯ ಪ್ರಭಾವ ಬೀರುತ್ತಿದೆ ಎಂಬ ಕಾರಣಕ್ಕೆ, ಬಜ್ವಾ ಅವಧಿಯು ಸುದ್ದಿಯಾಗಿತ್ತು. 2016ರ ನವೆಂಬರ್‌ನಿಂದ 2022ರ ನವೆಂಬರ್‌ವರೆಗೆ ಸೇನಾ ಪಡೆ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಅವರನ್ನು ಆಗಿನ ಪ್ರಧಾನಿ ನವಾಜ್ ಷರೀಫ್ ನೇಮಕ ಮಾಡಿದ್ದರು. ಆ ಅವಧಿಯು, ಭಾರತದೊಂದಿಗಿನ ಉದ್ವಿಗ್ನತೆ ಸೇರಿದಂತೆ, ಹಲವು ಮಹತ್ವದ ಘಟನಾವಳಿಗಳಿಗೆ ಸಾಕ್ಷಿಯಾಗಿತ್ತು. ಭಾರತೀಯ ಸೇನೆಯು ಪಾಕಿಸ್ತಾನದ ಬಾಲಕೋಟ್ ಮೇಲೆ ವಾಯುದಾಳಿ ನಡೆಸಿದ್ದೂ ಆಗಲೇ. ಬಜ್ವಾ ನಿಧನಕ್ಕೆ ರಾಜಕೀಯ ನಾಯಕರು, ಸೇನಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ದೆವ್ವ ಹಿಡಿದಿದೆ ಎಂದು ವಿಮಾನದ ಎಮರ್ಜೆನ್ಸಿ ಡೋರ್ ತೆಗೆಯಲು ಯತ್ನ!



ಲಕ್ನೋ: ಬೆಂಗಳೂರಿಂದ ವಾರಣಾಸಿಗೆ ಹೋಗುತ್ತಿದ್ದ ಇಂಡಿಗೋ ವಿಮಾನದಲ್ಲಿ ಎಮರ್ಜೆನ್ಸಿ ಡೋರ್ ತೆಗೆಯಲು ಪ್ರಯಾಣಿಕನೊಬ್ಬ ಯತ್ನಿಸಿದ ಘಟನೆ ನಡೆದಿದೆ. ವಿಚಾರಣೆ ವೇಳೆ ಆತ ನನಗೆ ದೆವ್ವ ಹಿಡಿದಿದೆ ಎಂದು ಹೇಳಿಕೊಂಡಿದ್ದಾನೆ. ಎಮರ್ಜೆನ್ಸಿ ಡೋರ್ ತೆಗೆಯಲು ಯತ್ನಿಸಿದ ಪ್ರಯಾಣಿಕನನ್ನು ಉತ್ತರ ಪ್ರದೇಶದ ಮೌ ಜಿಲ್ಲೆಯ ನಿವಾಸಿ ಮೊಹಮ್ಮದ್ ಅದ್ನಾನ್ ಎಂದು ಗುರುತಿಸಲಾಗಿದೆ. ಮಾ.28ರಂದು ಇಂಡಿಗೋ ವಿಮಾನ 6ಇ–185 ರಾತ್ರಿ 8:15ರ ಸುಮಾರಿಗೆ ಬೆಂಗಳೂರಿನಿಂದ ಹೊರಟಿತ್ತು. ಪ್ರಯಾಣ ಆರಂಭಗೊಂಡ ಕೇವಲ 15 ನಿಮಿಷಗಳಲ್ಲಿ ಅದ್ನಾನ್ ಎಮರ್ಜೆನ್ಸಿ ಡೋರ್ ತೆಗೆಯಲು ಯತ್ನಿಸಿದ್ದ. ಈ ವೇಳೆ, ಅಧಿಕಾರಿಗಳು ಆತನಿಗೆ ಎಚ್ಚರಿಕೆ ನೀಡಿದ್ದರು.

ವಾರಣಾಸಿಯ ಲಾಲ್ ಬಹದ್ದೂರ್ ಶಾಸ್ತ್ರಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಾತ್ರಿ 10:20ರ ಸುಮಾರಿಗೆ ವಿಮಾನ ಲ್ಯಾಂಡಿಂಗ್‌ಗೆ ಸಿದ್ಧವಾಗಿದ್ದಾಗಲೂ ಅದ್ನಾನ್ ವಿಮಾನದ ಎಮರ್ಜೆನ್ಸಿ ಡೋರ್ ತೆಗೆಯಲು ಯತ್ನಿಸಿದ್ದಾನೆ. ಈ ವೇಳೆ ವಿಮಾನ 500 ಅಡಿಗಳ ಎತ್ತರದಲ್ಲಿತ್ತು. ತಕ್ಷಣ ಪೈಲಟ್ ಲ್ಯಾಂಡಿಂಗ್ ಪ್ರಯತ್ನವನ್ನು ರದ್ದುಗೊಳಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಳಿಕ ವಿಮಾನವು ರಾತ್ರಿ 10:35ಕ್ಕೆ ಲ್ಯಾಂಡ್ ಮಾಡಲಾಯಿತು. ಲ್ಯಾಂಡಿಂಗ್ ಬಳಿಕ ಅದ್ನಾನ್‌ನನ್ನು ತಕ್ಷಣವೇ ವಿಮಾನಯಾನ ಸಂಸ್ಥೆಯ ಭದ್ರತಾ ಸಿಬ್ಬಂದಿ ಮತ್ತು ಸಿಐಎಸ್‌ಎಫ್‌ಗೆ ಹಸ್ತಾಂತರಿಸಲಾಯಿತು. ಬಳಿಕ ಪೊಲೀಸರಿಗೆ ಮಾಹಿತಿ ನೀಡಿ ಪ್ರಕರಣ ದಾಖಲಿಸಲಾಯಿತು.

ಕುಟ್ಟ ಸರ್ಕಾರಿ ಆಸ್ಪತ್ರೆಗೆ ಶಾಸಕರ ದಿಢೀರ್ ಭೇಟಿ



ಕುಟ್ಟ ಸರ್ಕಾರಿ ಆಸ್ಪತ್ರೆಗೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಡಿಕೇರಿ,ಮಾ.29–ಪೊನ್ನಂಪೇಟೆ ತಾಲೂಕಿನ ಕುಟ್ಟ ಸರ್ಕಾರಿ ಆಸ್ಪತ್ರೆಗೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರು ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೇರಳ ಚುನಾವಣಾ ಪ್ರಚಾರದ ಜವಾಬ್ದಾರಿ ನಡುವೆ ಇಂದು ಸ್ವಕ್ಷೇತ್ರಕ್ಕೆ ಬರುತ್ತಿದ್ದಾಗ ದಾರಿ ಮಧ್ಯೆ ಕುಟ್ಟ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಸೌಲಭ್ಯಗಳ ಕೊರತೆಯ ಕುರಿತು ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳಿಂದ ಮಾಹಿತಿ ಪಡೆದರು. ಸ್ಥಳದಲ್ಲೆ ಉನ್ನತ ವೈದ್ಯಾಧಿಕಾರಿಗಳಿಗೆ ಕರೆ ಮಾಡಿ ಆಸ್ಪತ್ರೆಗೆ ಸೂಕ್ತ ಸೌಲಭ್ಯ ಕಲ್ಪಿಸಿ ಅಗತ್ಯ ವೈದ್ಯರ ನೇಮಕಕ್ಕೂ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಒಳ ರೋಗಿಗಳ ಆರೋಗ್ಯ ವಿಚಾರಿಸಿ ಆಸ್ಪತ್ರೆಯಿಂದ ದೊರೆಯುತ್ತಿರುವ ಚಿಕಿತ್ಸೆಯ ಬಗ್ಗೆ ವಿವರ ಪಡೆದರು.

ಈ ಸಂದರ್ಭ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕಾಳಿಮಾಡ ಪ್ರಶಾಂತ್, ಕುಟ್ಟ ವಲಯ ಅಧ್ಯಕ್ಷ ರಾಮಕೃಷ್ಣ, ಪಕ್ಷದ ಪ್ರಮುಖರಾದ ಮುಕಟ್ಟೀರ ನವೀನ್, ಪಾಲ್ವಿನ್, ತಿತೀರ ಮಂದಣ್ಣ, ಪೆಮ್ಮಂಡ ರಾಜ, ಮಚ್ಚಮಾಡ ಮನು, ಸಿದ್ದು ನಾಚಪ್ಪ, ಫಾರ್ದಿನ್, ಅಶ್ರಫ್, ವಾಜೀದ್ ಮತ್ತಿತರರು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆಗೆ ಬ್ಯಾಂಕಿನಿಂದ ಸಾಲ ಪಡೆಯುವ ದುಃಸ್ಥಿತಿಯೇ

ಸರ್ಕಾರಕ್ಕೆ ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷ ಅಭಯ ದಿವಾಕರ್ ತೀಕ್ಷ್ಣ ಪ್ರಶ್ನೆ

ಮಡಿಕೇರಿ,ಮಾ.29: ಖಾಸಗಿ ಬ್ಯಾಂಕಿನಿಂದ ಸಾಲ ಪಡೆದು ಸರ್ಕಾರಿ ಶಾಲೆಗಳನ್ನು ನಡೆಸುವಂತಹ ಕೆಟ್ಟ ಪರಿಸ್ಥಿತಿಗೆ ಸರ್ಕಾರ ಬಂದಿದೆಯೇ ಎಂದು ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷ ಅಭಯ ದಿವಾಕರ್ ಖಾರವಾಗಿ ಪ್ರಶ್ನಿಸಿದ್ದಾರೆ.

ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಅಡಿಯಲ್ಲಿ 230ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದನ್ನು ವಿರೋಧಿಸಿ 'ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಜೇಷನ್' ವಿದ್ಯಾರ್ಥಿ ಸಂಘಟನೆ ಮತ್ತು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ನೇತೃತ್ವದಲ್ಲಿ ಕುಶಾಲನಗರದ ಮಹಿಳಾ ಸಮಾಜದಲ್ಲಿ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಅವರು, ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳನ್ನು ಸರ್ಕಾರ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ 2500 ಕೋಟಿ ಸಾಲ ಮಾಡಿ ತೆರೆಯುತ್ತಿದೆ ಸರ್ಕಾರಕ್ಕೆ ಇಂಥ ಕೆಟ್ಟ ಪರಿಸ್ಥಿತಿ ಉದ್ಭವಿಸಿದೆಯೆ ಎಂದು ಪ್ರಶ್ನಿಸಿದರು. ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳನ್ನು ಹೊರಗುತ್ತಿಗೆ ನೀಡಿ ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳನ್ನಾಗಿ ಪರಿವರ್ತಿಸುವ ಹುನ್ನಾರವನ್ನು ಸರ್ಕಾರ ಮಾಡುತ್ತಿದೆ ಎಂದು ಆರೋಪಿಸಿದರು.

ಜ್ಯೋತಿರಾವ್ ಫುಲೆ, ಸಾವಿತ್ರಿಬಾಯಿ ಫುಲೆ ತಮ್ಮ ಜೀವನವನ್ನೇ ಶಾಲೆಗಳಿಗಾಗಿ ಅರ್ಪಿಸಿದರು. ಬಿಜೆಪಿ ಸರ್ಕಾರ ಸಂಯೋಜನೆ ಹೆಸರಿನಲ್ಲಿ 13,800 ಸರ್ಕಾರಿ ಶಾಲೆ ಗಳನ್ನು ಮುಚ್ಚಲು ಹೊರಟಿದ್ದರು. ಆಗ ಇಡೀ ರಾಜ್ಯದಾದ್ಯಂತ ಹೋರಾಟ ಮಾಡಿ ಶಾಲೆಗಳನ್ನು ಉಳಿಸಿದ್ದೆವು. ಪ್ರಸ್ತುತ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಅಡಿಯಲ್ಲಿ 40 ಸಾವಿರ ಶಾಲೆಗಳನ್ನು ಮುಚ್ಚಲು ಹೊರಟಿದೆ. ಒಟ್ಟಾರೆ ಎಲ್ಲಾ ಸರ್ಕಾರಗಳ ಅಂತಿಮ ಗುರಿ ಸರ್ಕಾರಿ ಶಾಲೆಗಳನ್ನು ಮುಚ್ಚಿ ಬಡ ವಿದ್ಯಾರ್ಥಿಗಳಿಂದ ಶಿಕ್ಷಣವನ್ನು ಕಸಿದುಕೊಳ್ಳುವುದೇ ಆಗಿದೆ ಎಂದು ಆರೋಪಿಸಿದರು.



ಕುಶಾಲನಗರದಲ್ಲಿ ನಡೆದ ಪ್ರತಿಭಟನಾ ಸಮಾವೇಶವನ್ನುದ್ದೇಶಿಸಿ ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷ ಅಭಯ ದಿವಾಕರ್ ಮಾತನಾಡಿದರು.

ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ, ಕುಶಾಲನಗರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎಸ್ ನಾಗೇಶ್, ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯಿಂದ ವಿಜಯ ನಗರದ ಸುರೇಶ್, ಚಿಕ್ಕತ್ತೂರು ಹರೀಶ್, ತೊರೆನೂರು ಸಾಗರ್ ಅವರುಗಳು ಮಾತನಾಡಿದರು.

ಶಿಕ್ಷಣ ಉಳಿಸಿ ಸಮಿತಿ ರಚನೆ: ಸಾರ್ವಜನಿಕ ಶಿಕ್ಷಣ ಉಳಿಸಲು ಮುಂದಿನ ದಿನಗಳಲ್ಲಿ ಬಲಿಷ್ಠ ಹೋರಾಟವನ್ನು ಕಟ್ಟಲು ಜಿಲ್ಲಾ ಮಟ್ಟದ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ರಚಿಸಲಾಯಿತು. ಸಮಿತಿಯ ಸಲಹೆಗಾರರಾಗಿ ಹಿರಿಯ ಪತ್ರಕರ್ತ ಟಿ.ಪಿ ರಮೇಶ್, ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೇಶವ್ ಕಾಮತ್, ತಾಲೂಕು ಅಧ್ಯಕ್ಷ ಕೆ.ಎಸ್. ನಾಗೇಶ್ ಅವರನ್ನು ಆಯ್ಕೆ ಮಾಡಲಾಯಿತು. ಸಮಿತಿಯ ಅಧ್ಯಕ್ಷರಾಗಿ ವಿಜಯನಗರದ ಸುರೇಶ, ಕಾರ್ಯದರ್ಶಿಯಾಗಿ ಸ್ವಾತಿ ಹಾಗೂ ಉಪಾಧ್ಯಕ್ಷರಾಗಿ ವಿಜಯನಗರದ ಅಕ್ಷಯ್, ಚಿಕ್ಕತ್ತೂರಿನ ಹರೀಶ್, ತೊರೆನೂರಿನ ಸಾಗರ್, ಬ್ಯಾಡಗೊಟ್ಟ ಹಾಡಿಯ ಚಿಮ್ಮಿ, ಕಾರ್ಮಿಕ ಸಂಘಟನೆಯ ಶಾಂತಿ, ಯುವಜನ ಸಂಘಟನೆಯ ಪೂರ್ಣಿಮಾ ಹಾಗೂ ವಿವಿಧ ಹಳ್ಳಿಗಳಿಂದ 100ಕ್ಕೂ ಹೆಚ್ಚು ಮಂದಿಯನ್ನು ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

ಸಮಾವೇಶದಲ್ಲಿ ಕೊಡಗು ಜಿಲ್ಲಾ ಸಂಘಟನೆ ಪ್ರಮುಖರಾದ ಸ್ವಾತಿ, ಯುವಜನ ಪದಾಧಿಕಾರಿಗಳಾದ ಪೂರ್ಣಿಮಾ, ನೀತು, ಮಂಜು ಹಾಗೂ ವಿವಿಧ ಗ್ರಾಮ ಶಾಲೆಗಳ ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

70 ಅಡಿ ಆಳಕ್ಕೆ ಜೀಪು ಉರುಳಿ ಚಾಲಕ ಸಾವು

ನಾಪೋಕ್ಲು, ಮಾ.29–ಚಾಲಕನ ನಿಯಂತ್ರಣ ತಪ್ಪಿ ಜೀಪು 70 ಅಡಿ ಆಳಕ್ಕೆ ಉರುಳಿ ಅಸುನೀಗಿರುವ ಘಟನೆಯೊಂದು ನಿನ್ನೆ ಸಂಭವಿಸಿದೆ.



ಶರಿ ಮೇದಪ್ಪ

ಸಮೀಪದ ಬಲ್ಲಮಾವಟ್ಟಿ ಗ್ರಾಮ ಪಂಚಾಯಿತಿಯ ಪೇರೂರು ಗ್ರಾಮದ ನಿವಾಸಿ ರೈತ ಬೊಟ್ಟೋಳಟಡ ಶರಿ ಮೇದಪ್ಪ(54) ದುರ್ಮರಣಗೊಂಡವರಾಗಿದ್ದಾರೆ.

ಕಾರ್ಮಿಕರೊಂದಿಗೆ ಶರಿಮೇದಪ್ಪ ತಮ್ಮ ಜೀಪಿನಲ್ಲಿ ಕಾಫಿ ತೋಟದಿಂದ ಮನೆಗೆ ಹಿಂತಿರುಗುತ್ತಿದ್ದ ಸಂದರ್ಭದಲ್ಲಿ ನಿಯಂತ್ರಣ ತಪ್ಪಿ ರಸ್ತೆಯಿಂದ ಸುಮಾರು 70ಅಡಿ ಕೆಳಗೆ ಉರುಳಿ ಬಿದ್ದಿದೆ. ಈ ಸಂದರ್ಭ ಜೀಪಿನಿಂದ ಹೊರಕ್ಕೆ ಎಸೆಯಲ್ಪಟ್ಟ ಮೇದಪ್ಪ ಪ್ರಜ್ಞೆ ಕಳೆದುಕೊಂಡಿದ್ದರು. ಕೂಡಲೇ ನಾಪೋಕ್ಲುವಿನಲ್ಲಿ ಪ್ರಥಮ ಚಿಕಿತ್ಸೆಕೊಡಿಸಿ ಬಳಿಕ ಮಡಿಕೇರಿಗೆ ತೆರಳುತ್ತಿದ್ದಾಗ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಜೀಪು ಸಂಪೂರ್ಣ ಜಖಂಗೊಂಡಿದ್ದು ಕಾರ್ಮಿಕರು ಸಣ್ಣ ಪುಟ್ಟ ಗಾಯಗಳಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ. ಮೃತ ಶರಿ ಮೇದಪ್ಪ(54) ಅವಿವಾಹಿತರಾಗಿದ್ದು, ತಾಯಿ ರಾಣಿ ಹಾಗೂ ತಂಗಿ ಹಾಗೂ ತಮ್ಮನನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಭಾನುವಾರ ಪೇರೂರು ಗ್ರಾಮದ ಬೊಟ್ಟೋಳಂಡ ಕುಟುಂಬದ ರುದ್ರಭೂಮಿಯಲ್ಲಿ ನೆರವೇರಿತು.



ಶರಿ ಮೇದಪ್ಪ ಚಲಾಯಿಸುತ್ತಿದ್ದ ಜೀಪು ಉರುಳಿ ಬಿದ್ದಿರುವುದು.

ಶ್ರದ್ಧಾಭಕ್ತಿಯಿಂದ ನಡೆದ ಮುತ್ತಪ್ಪ ದೇವಸ್ಥಾನದ ತೆರೆ ಮಹೋತ್ಸವ

ವಿರಾಜಪೇಟೆ, ಮಾ.29– ಅರಸು ನಗರದ ಶ್ರೀಮುತ್ತಪ್ಪ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ ಹಾಗೂ [ಕೋಲ] ತೆರೆ ಮಹೋತ್ಸವ ಮತ್ತು ತಾಲಪೊಲಿ ಮೆರವಣಿಗೆಯೊಂದಿಗೆ ಶ್ರದ್ಧಾಭಕ್ತಿ ಹಾಗೂ ವಿಜೃಂಭಣೆಯಿಂದ ಆಚರಿಸಲಾಯಿತು

ಮಾ.26 ರಂದು ಬೆಳಿಗ್ಗೆ ದೇವಸ್ಥಾನದ ಕಳಸ ಪ್ರತಿಷ್ಠೆ, ಕೇರಳದ ಪ್ರಸಿದ್ದ ತಂತ್ರಿ ಬ್ರಹ್ಮಶ್ರೀ ಕುಮಾರ್ ಅವರಿಂದ ಪುನರ್ ಪ್ರತಿಷ್ಠಾಪನಾ ಪೂಜಾ ಕಾರ್ಯಗಳೊಂದಿಗೆ ಪ್ರಾರಂಭಗೊಂಡು, 27 ರಂದು ಮುಂಜಾನೆ ಗಣಪತಿ ಹೋಮ, ನಂತರ ಕಳಸ ಪೂಜೆ, ಶ್ರೀ ಮುತ್ತಪ್ಪ ಹಾಗೂ ತಿರುವಪ್ಪನ್ ಮತ್ತು ಗುಳಿಗನ್ ದೇವರ ಪ್ರತಿಷ್ಠಾಪನೆ ಬಳಿಕ, ಕಳಶಾಭಿಷೇಕ, ಮಹಾಪೂಜೆ ನಂತರ ದೇವಸ್ಥಾನ ಆವರಣದಲ್ಲಿ ಏರ್ಪಡಿಸಲಾಗಿದ್ದ ಸಭಾ ಕಾರ್ಯಕ್ರಮದಲ್ಲಿ ದೇವಸ್ಥಾನ ಸಮಿತಿ ಅಧ್ಯಕ್ಷ ಬಿ.ಎಸ್. ಸದಾನಂದ ಅಧ್ಯಕ್ಷತೆ ವಹಿಸಿದ್ದರು, ಸಭೆಯಲ್ಲಿ ಅತಿಥಿಗಳಾಗಿ ಕೇರಳದ ಚೆಂಗಳಾಯಿ ಪಣಿಕರ್ ಇ.ಕೆ.ಬಾಲನ್, ಕೇರಳದ ತಂತ್ರಿ ಬ್ರಹ್ಮಶ್ರೀ ಕುಮಾರ್, ಸ್ಥಳಿಯ ಜ್ಯೋತಿಷಿ ದಿವಾಕರ್ ಭಟ್, ಪುರಸಭೆಯ ಮಾಜಿ ಸದಸ್ಯ ಪಟ್ಟಡ ರಂಜಿ ಪೂಣಚ್ಚ, ಬಿ.ಕೆ.ಚಂದ್ರು, ಮೀನುಪೇಟೆ ಶ್ರೀ ಮುತ್ತಪ್ಪ ಮಲಯಾಳಿ ಸಮಾಜದ ಅಧ್ಯಕ್ಷ ಪಿ.ಜಿ. ಸುಮೇಶ್, ಬಾಲನ್, ನಗರ ಬಿಜೆಪಿ ಅಧ್ಯಕ್ಷ ಅಂಜಪರವಂಡ ಅನಿಲ್ ಮಂದಣ್ಣ, ವಿನಾಯಕ ಟ್ರಾವೆಲ್ಸ್ ಮಾಲಿಕ ಬಿ.ವಿ. ಹೇಮಂತ್ ಮಾತನಾಡಿದರು. ಎಂ.ಎಂ. ಶಶಿಧರನ್ ಸ್ವಾಗತಿಸಿ ನಿರೂಪಿಸಿದರು. ಮಧ್ಯಾಹ್ನ ಮತ್ತು ರಾತ್ರಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

28ರ ಬೆಳಿಗ್ಗೆ ಧ್ವಜಾರೋಹಣ ಕಾರ್ಯಕ್ರಮದ ಬಳಿಕ ಶ್ರೀ ಮುತ್ತಪ್ಪನ ಮಲೆಯಿಳಿಸುವುದು ಹಾಗೂ ವೆಳ್ಳಾಟಂ, ಸಂಜೆ 6 ಗಂಟೆಗೆ ಕಳಸದೊಂದಿಗೆ ಪುಟ್ಟ ಮಕ್ಕಳು ಮಹಿಳೆಯರು ದೀಪ ಹಿಡಿದು, ತಾಲಪೊಲಿ ಮೆರವಣಿಗೆಯು ತೆಲುಗರ ಬೀದಿಯ ಶ್ರೀ ಮಾರಿಯಮ್ಮ ದೇವಸ್ಥಾನದಿಂದ ಮೆರವಣಿಗೆ ಹೊರಟು ಜೈನರ ಬೀದಿ, ದೊಡ್ಡಟ್ಟಿ ಚೌಕಿಗಾಗಿ ಚರ್ಚ್ ರಸ್ತೆ ಮಾರ್ಗವಾಗಿ ಅರಸುನಗರ ಮುತ್ತಪ್ಪ ದೇವಸ್ಥಾನ ತಲುಪಿದ ಬಳಿಕ ಶ್ರೀ ಮುತ್ತಪ್ಪ ಹಾಗೂ ತಿರುವಪ್ಪನ್ ವೆಳ್ಳಾಟಂ ನಂತರ ಅನ್ನಸಂತರ್ಪಣೆ ಬಳಿಕ ರಾತ್ರಿ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. 29 ರಂದು ಪ್ರಾತಃಕಾಲ ಸಿಡಿಮದ್ದು ಪ್ರದರ್ಶನ, ಗುಳಿಗನ್ ವೆಳ್ಳಾಟಂ, ಮುತ್ತಪ್ಪನ ಮತ್ತು ತಿರುವಪ್ಪನ್ ಕೋಲ ವಿಜೃಂಭಣೆಯಿಂದ ಆಚರಿಸಲಾಯಿತು.



ಶ್ರೀ ಮುತ್ತಪ್ಪ ದೇವಸ್ಥಾನದ ಪುನರ್ ಪ್ರತಿಷ್ಠಾಪನೆಯಲ್ಲಿ ನಡೆದ ಕೋಲ ಮಹೋತ್ಸವ

ಸುಂಟಿಕೊಪ್ಪದಲ್ಲಿ ಸಿಡಿಲು ಬಡಿದು ತೆಂಗಿನ ಮರಕ್ಕೆ ಬೆಂಕಿ

ಸುಂಟಿಕೊಪ್ಪ, ಮಾ.29–ಸುಂಟಿಕೊಪ್ಪ ಪಟ್ಟಣದಲ್ಲಿ ಗುಡುಗು ಸಹಿತ ಸಿಡಿಲಿನ ಪರಿಣಾಮ ಗದ್ದೆಹಳ್ಳದ ರಾಮ ಎಸ್ಟೇಟ್ ಬಳಿಯಲ್ಲಿ ತೆಂಗಿನ ಮರಕ್ಕೆ ಸಿಡಿಲು ಬಡಿದು ಬೆಂಕಿ ಹೊತ್ತಿಕೊಂಡಿರುವ ಬಗ್ಗೆ ವರದಿಯಾಗಿದೆ. ಗದ್ದೆಹಳ್ಳದ ರಾಮ ಎಸ್ಟೇಟ್ ಮಾಲೀಕ ದಿನೇಶ್ ಎಂಬುವರ ಮನೆಯ ಮುಂಭಾಗದಲ್ಲಿ ಅಂದಾಜು 80 ಅಡಿ ಎತ್ತರದ ಬೃಹತ್ ಗಾತ್ರದ ತೆಂಗಿನ ಮರಕ್ಕೆ ಸಂಜೆ ಸಂದರ್ಭ ಭಾರೀ ಶಬ್ಧದೊಂದಿಗೆ ಸಿಡಿಲು ಬಡಿದಿದೆ. ಪರಿಣಾಮ ಬೆಂಕಿ ಹೊತ್ತಿಕೊಂಡು ತೆಂಗಿನ ಮರದ ಸುಳಿ ಸಹಿತ ಗರಿಗಳು ಸಂಪೂರ್ಣ ಸುಟ್ಟು ಹೋಗಿವೆ. ಸಿಡಿಲಿನಿಂದ ಮನೆಯ ಗೃಹೋಪಯೋಗಿ ವಸ್ತುಗಳು ಹಾಗೂ ಕೊಳವೆ ಬಾವಿಗೆ ಅಳವಡಿಸಲಾಗಿದ್ದ ಮೋಟಾರ್‌ಗೂ ಹಾನಿಯಾಗಿದ್ದು ನಷ್ಟ ಉಂಟಾಗಿದೆ ಎಂದು ತಿಳಿದು ಬಂದಿದೆ.



ಸಿಡಿಲು ಬಡಿದ ಪರಿಣಾಮ ತೆಂಗಿನ ಮರಕ್ಕೆ ಬೆಂಕಿ ಹೊತ್ತಿಕೊಂಡಿರುವುದು.

ಗಣಪತಿ ದಿನೇಶ್ ನಿಧನ



ನಾಪೋಕ್ಲು, ಮಾ.29– ಸಮೀಪದ ಹೊದವಾಡ ಗ್ರಾಮದ ನಿವಾಸಿ ಅನ್ನಚಂಡ ಗಣಪತಿ ದಿನೇಶ್(52) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಮೃತರು ಪತ್ನಿ ಗೀತಾ ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಹೊದವಾಡ ಗ್ರಾಮದಲ್ಲಿ ನೆರವೇರಿತು.

ಚೆಟ್ಟಿನೆರವನ ಕುಶಾಲಪ್ಪ



ನಾಪೋಕ್ಲು : ಸಮೀಪದ ಬಲ್ಲಮಾವಟಿ ನೆಲಜಿ ಗ್ರಾಮದ ನಿವಾಸಿ ಚೆಟ್ಟಿನೆರವನ ಕುಶಾಲಪ್ಪ (ಸಾಬು 69) ಶನಿವಾರ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ ವಾರಿಜಾ ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನೆಲಜಿ ಗ್ರಾಮದಲ್ಲಿ ಭಾನುವಾರ ನೆರವೇರಿತು.

2500 ಕೋಟಿ ಸಾಲ ಪಡೆದು ಸರ್ಕಾರಿ ಶಾಲೆ ಮುಚ್ಚಲು ಕೆಪಿಎಸ್ ಮ್ಯಾಗ್ನೆಟ್ ಯೋಜನೆ

ಎಐಡಿಎಸ್‌ಓ ಪ್ರತಿಭಟನಾ ಸಮಾವೇಶದಲ್ಲಿ ಆರೋಪ

ಚಾಮರಾಜನಗರ, ಮಾ.29– ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಜಿಲ್ಲೆಯಾದ್ಯಂತ 550ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದನ್ನು ಖಂಡಿಸಿ, ಎಐಡಿಎಸ್‌ಓ (AIDSO) ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ನೇತೃತ್ವದಲ್ಲಿ ನಗರದಲ್ಲಿ ಜಿಲ್ಲಾ ಮಟ್ಟದ ಪ್ರತಿಭಟನಾ ಸಮಾವೇಶ ನಡೆಯಿತು.

ನಗರದ ರೋಟರಿ ಹಾಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಈ ಸಮಾವೇಶದಲ್ಲಿ 150ಕ್ಕೂ ಹೆಚ್ಚು ಪೋಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಸಮಾವೇಶದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷೆ ಚಂದ್ರಕಲಾ ಅವರು, ಕೆಪಿಎಸ್ ಮ್ಯಾಗ್ನೆಟ್ ನೀತಿಯ ಮೂಲಕ ಸರ್ಕಾರವು ಸರ್ಕಾರಿ ಶಾಲೆಗಳನ್ನು ಹಂತ ಹಂತವಾಗಿ ಮುಚ್ಚಿ, ಬಡ ವಿದ್ಯಾರ್ಥಿಗಳ ಶಿಕ್ಷಣ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನ ಮಾಡುತ್ತಿದೆ ಎಂದು ಆರೋಪಿಸಿದರು. ಈ ಯೋಜನೆಗಾಗಿ ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕ್‌ನಿಂದ 2500 ಕೋಟಿ ರೂ. ಸಾಲ ಪಡೆದಿದ್ದು, ಅದರ ಷರತ್ತುಗಳನ್ನು ಸರ್ಕಾರ ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದರು.

ಮತ್ತೊಬ್ಬ ಭಾಷಣಕಾರರಾದ ಎಐಡಿಎಸ್‌ಓ ರಾಜ್ಯ ಸಮಿತಿ ಉಪಾಧ್ಯಕ್ಷೆ ಅಪೂರ್ವ ಸಿ.ಎಂ ಅವರು ಮಾತನಾಡಿ, ರಾಜ್ಯದ ಸರ್ಕಾರಿ ಶಾಲೆಗಳ ದುಸ್ಥಿತಿಯನ್ನು ವಿವರಿಸಿದರು. ಸುಮಾರು 21,000 ಶಾಲೆಗಳ ಕಟ್ಟಡಗಳು ಕುಸಿಯುವ ಸ್ಥಿತಿಯಲ್ಲಿದ್ದು, 4000ಕ್ಕೂ ಹೆಚ್ಚು ಶಾಲೆಗಳಲ್ಲಿ ಶೌಚಾಲಯಗಳಿಲ್ಲ ಹಾಗೂ 7000ಕ್ಕೂ ಹೆಚ್ಚು ಶಾಲೆಗಳಲ್ಲಿ ಏಕೋಪಾಧ್ಯಾಯ ವ್ಯವಸ್ಥೆ ಇದೆ. ಇಂತಹ ಸಮಸ್ಯೆಗಳನ್ನು ಪರಿಹರಿಸುವ ಬದಲು ಸರ್ಕಾರ ಶಾಲೆಗಳನ್ನು ಮುಚ್ಚಲು ಮುಂದಾಗಿರುವುದು ಖಂಡನೀಯ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಿರಿಯ ರಂಗಕರ್ಮಿ ವೆಂಕಟರಾಜು, AIDYO ಯುವ ಮುಖಂಡ ಸುನಿಲ್ ಟಿ.ಆರ್., AIKKMS ರೈತ ಸಂಘದ ಬಸವರಾಜು ಎಚ್.ಎಂ., AIMMS ಮಹಿಳಾ ಹೋರಾಟಗಾರ್ತಿ ಆಸಿಯಾ ಬೇಗಂ, AIUTUC ಕಾರ್ಮಿಕ ಮುಖಂಡ ಬ್ರಿಜೇಶ್ ಸೇರಿದಂತೆ ಹಲವು ಸಂಘಟನೆಗಳ ಪ್ರತಿನಿಧಿಗಳು ಮಾತನಾಡಿದರು.

ಸಮಾವೇಶದ ಅಧ್ಯಕ್ಷತೆಯನ್ನು ಎಐಡಿಎಸ್‌ಓ ಜಿಲ್ಲಾ ಸಂಚಾಲಕಿ ಚಂದನ ಯು.ಕೆ ವಹಿಸಿದ್ದರು. ಪದಾಧಿಕಾರಿಗಳಾದ ಹೇಮಲತಾ ಕೆ., ನಂದೀಶ್ ಸೇರಿದಂತೆ ವಿವಿಧ ಹಳ್ಳಿಗಳ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು



ಚಾಮರಾಜನಗರ ಜಿಲ್ಲೆಯಾದ್ಯಂತ 550ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದನ್ನು ಖಂಡಿಸಿ, ಎಐಡಿಎಸ್‌ಓ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ನೇತೃತ್ವದಲ್ಲಿ ಪ್ರತಿಭಟನಾ ಸಮಾವೇಶ ನಡೆಸಲಾಯಿತು.

ನಷ್ಟ ತಪ್ಪಿಸಲು ವ್ಯವಸಾಯ ಉದ್ಯಮವಾಗಬೇಕು

ಯಳಂದೂರು, ಮಾ 29–ವ್ಯವಸಾಯದಲ್ಲಿ ನಷ್ಟವನ್ನು ಅನುಭವಿಸುವರ ಸಂಖ್ಯೆಯೇ ಅಧಿಕವಾಗಿದೆ. ಏಕೆಂದರೆ ರೈತರು ತಾವು ಬೆಳೆದ ಬೆಳೆಗೆ ಸೂಕ್ತ ಮಾರುಕಟ್ಟೆಯನ್ನು ಮಾಡುವ ಕಲೆಯನ್ನು ಕರಗತ ಮಾಡಿಕೊಂಡು ರೈತ ಉದ್ಯಮಿಯ ರೂಪ ಪಡೆಯಬೇಕು, ವ್ಯವಸಾಯ ಉದ್ಯಮವಾಗಬೇಕು ಎಂದು ಮುಡುಕನಪುರ ಹಲವಾರ ಮಠದ ಷಡಕ್ಷರಿ ದೇಶಿಕೇಂದ್ರ ಮಹಾಸ್ವಾಮಿಜಿ ಕರೆ ನೀಡಿದರು.

ಭಾನುವಾರ ತಾಲೂಕಿನ ಗೌಡಹಳ್ಳಿ ಗ್ರಾಮ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಹಮ್ಮಿಕೊಂಡಿದ್ದ ರೈತರೊಂದಿಗೆ ರೈತ ಮುಖಂಡರು, ಮಣ್ಣಿನ ಮಕ್ಕಳ ಸಬಲೀಕರಣ, ಪ್ರಬುದ್ಧ ಪ್ರಜಾಸ್ನೇಹಿ, ಪ್ರಜ್ಞಾವಂತಿಕೆ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ರೈತರು ತಾವು ಬೆಳೆದ ಬೆಳೆಗೆ ಸೂಕ್ತ ಮಾರುಕಟ್ಟೆಯನ್ನು ಸೃಷ್ಟಿಸಿಕೊಳ್ಳಬೇಕು. ಭತ್ತವನ್ನು ನೀಡುವ ಬದಲು ಅಕ್ಕಿಯಾಗಿ ಮಾಡಿ ಇದನ್ನು ಪ್ಯಾಕ್ ಮಾಡಿ ಮಾರಾಟ ಮಾಡಬೇಕು, ಎಳನೀರನ್ನು ಪ್ಯಾಕೆಟ್‌ನಲ್ಲಿ ಮಾರಾಟ ಮಾಡುವುದು, ತಮ್ಮ ಉತ್ಪನ್ನಗಳನ್ನು ಸಂಸ್ಕರಿಸಿ ಮಾರಾಟ ಮಾಡುವ ಕಲೆಯನ್ನು ಕಲಿಯಬೇಕು. ಆಗ ಇವರಿಗೆ ಹೆಚ್ಚು ಲಾಭ ದೊರೆಯುತ್ತದೆ. ಸಹಕಾರ ಸಂಘಗಳಲ್ಲಿ ರೈತರಿಗೆ ಹೆಚ್ಚು ಅನುಕೂಲವಾಗುವ ಕಾರ್ಯಕ್ರಮಗಳನ್ನು ಸರ್ಕಾರಗಳು ಮಾಡುತ್ತಿಲ್ಲ. ಇದನ್ನು ಮಾಡುವಂತಾಗಬೇಕು. ರೈತರ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸಬೇಕು. ವೈಜ್ಞಾನಿಕ ಬೆಲೆಯನ್ನು ನೀಡಬೇಕು ಎಂದು ಸಲಹೆ ನೀಡಿದರು.

ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ರೈತ ಈ ದೇಶದ ಜೀವನಾಡಿಯಾಗಿದ್ದಾನೆ. ಸರ್ಕಾರ ರೈತರ ಪರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ನನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ಕಣ್ಣೇಗಾಲ ಪಿಕಪ್‌ನಿಂದ 19 ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಮೊದಲಿಗೆ 6 ಕೆರೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಕಾಮಗಾರಿ 70 ಕೋಟಿ ರೂ. ವೆಚ್ಚದಲ್ಲಿ ನಡೆಯಲಿದೆ. ಇದರೊಂದಿಗೆ ಗುಂಡಾಲ್ ಸೀರೀಸ್ ಕಾಲುವೆ ದುರಸ್ತಿ ಕೆರೆಗಳ ನೀರು ತುಂಬಿಸುವ ಯೋಜನೆಗೂ 60 ಕೋಟಿ ರೂ. ಹಣ ಬಿಡುಗಡೆಯಾಗಿದೆ ಎಂದು ಮಾಹಿತಿ ನೀಡಿದರು. ಸಂತೆಮರಹಳ್ಳಿಯಲ್ಲಿ ಎಳನೀರು ಮಾರುಕಟ್ಟೆಗೆ 5 ಕೋಟಿ ರೂ. ಹಣ ಬಿಡುಗಡೆಯಾಗಿದ್ದು ರೈತರು ತಾವು ಬೆಳೆದ ಎಳೆನೀರನ್ನು ಮಧ್ಯವರ್ತಿಗಳ ಹಾವಳಿ ಇಲ್ಲದೆ ನೇರವಾಗಿ ಮಾರಾಟ ಮಾಡಬಹುದು, ಸಾಗಾಣಿಕೆ ವೆಚ್ಚವೂ ಕಡಿಮೆಯಾಗುವುದರಿಂದ ಹೆಚ್ಚು ಲಾಭಗಳಿಸಬಹುದು. ಗೌಡಹಳ್ಳಿಯೂ ಸೇರಿದಂತೆ ಎರಡು ಕಡೆ ಚೆಕ್ ಡ್ಯಾಂಗಳ ನಿರ್ಮಾಣಕ್ಕೆ 3 ಕೋಟಿ ರೂ. ಹಣ ಬಿಡುಗಡೆಯಾಗಿದ್ದು ಈ ಭಾಗದ ರೈತರಿಗೆ ಇದರಿಂದ ಹೆಚ್ಚು ಅನುಕೂಲವಾಗಲಿದೆ. ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮವನ್ನು ಆಯೋಜನೆ ಮಾಡಿರುವ ರೈತ ಸಂಘದ ಜಿಲ್ಲಾ ಅಧ್ಯಕ್ಷ ಗೌಡಹಳ್ಳಿ ಎಸ್. ಸೋಮಣ್ಣರವರು ಅಭಿನಂದನಾರ್ಹರು ಎಂದರು.

ರೈತ ಸಂಘದ ಜಿಲ್ಲಾಧ್ಯಕ್ಷ ಗೌಡಹಳ್ಳಿ ಎಸ್. ಸೋಮಣ್ಣ ಮಾತನಾಡಿದರು. ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಜಿ, ಪಂಚಗವಿ ಮಠದ ಶ್ರೀಕಂಠಸ್ವಾಮಿ, ಗೌಡಹಳ್ಳಿ ವಿರಕ್ತಮಠದ ಮರಿತೋಂಟದಾರ್ಯ ಸ್ವಾಮಿಜಿ ಸಮಾಜ ಸೇವಕ ನಿಶಾಂತ್, ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಕಾರ್ಯದರ್ಶಿ ವಿದ್ಯಾಸಾಗರ್, ಕೃಷಿಕ ಸಮಾಜದ ಅಧ್ಯಕ್ಷ ಗೌಡಹಳ್ಳಿ ರವಿ, ವೈ.ಸಿ. ಪ್ರಕಾಶ್, ಕುಮಾರಬಾವಿ, ವೆಂಕಟೇಶ್, ಪ್ರಭುಸ್ವಾಮಿ, ನಾಗರಾಜು, ಚಿಕ್ಕರಾಜು, ಬಸವರಾಜು, ಮಲ್ಲಿಕಾರ್ಜುನಸ್ವಾಮಿ, ಸುಂದ್ರಪ್ಪ, ಶಾಂತಮೂರ್ತಿ ಸೇರಿದಂತೆ ಅನೇಕರು ಇದ್ದರು.



ಯಳಂದೂರು ತಾಲೂಕಿನ ಗೌಡಹಳ್ಳಿ ಗ್ರಾಮದಲ್ಲಿ ಭಾನುವಾರ ನಡೆದ ರೈತರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮುಡುಕನಪುರ ಹಲವಾರ ಮಠದ ಷಡಕ್ಷರಿ ದೇಶಿಕೇಂದ್ರ ಮಹಾಸ್ವಾಮೀಜಿ ಮಾತನಾಡಿದರು.

ನಾಗವಳ್ಳಿಯಲ್ಲಿ ಕಾಳಮ್ಮ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರ

ಚಾಮರಾಜನಗರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್(ರಿ) ವತಿಯಿಂದ ಡಾ.ಡಿ. ವೀರೇಂದ್ರ ಹೆಗ್ಗಡೆರವರು ಹಾಗೂ ಮಾತೃಶ್ರೀ ಅಮ್ಮನವರ ಆಶಯದಂತೆ ನಾಗವಳ್ಳಿ ವಲಯದ ನಾಗವಳ್ಳಿ ಗ್ರಾಮದಲ್ಲಿ ಯಾರು ನೋಡಿಕೊಳ್ಳದ ನಿರ್ಗತಿಕ ಮಾಸಾಶನ ಫಲಾನುಭವಿಯಾದ ಕಾಳಮ್ಮ ಅವರಿಗೆ ಕಳೆದ 4 ವರ್ಷಗಳಿಂದ ತಿಂಗಳಿಗೆ 1 ಸಾವಿರ ರೂ. ಮಾಸಾಶನ ನೀಡುತ್ತಿದ್ದು ಅವರುಗುಡಿಸಲಿನಲ್ಲಿ ಜೀವನ ಸಾಗಿಸುತ್ತಿದ್ದು ಯೋಜನೆ ವತಿಯಿಂದ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಮಾಡಲಾಯಿತು.



ಜಿಲ್ಲಾ ನಿರ್ದೇಶಕ ಎ. ದಿನೇಶ್ ಮಾತನಾಡಿ ಮಾತೃಶ್ರೀ ಅಮ್ಮನವರ ಕನಸಿನ ಕೂಸಾದ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಈ ವಾತ್ಸಲ್ಯ ಮನೆ ನಿರ್ಮಾಣ ಮಾಡಲಾಗಿದೆ.ಈ ಮನೆಯಲ್ಲಿ ಸುಖ–ಶಾಂತಿ ನೆಮ್ಮದಿ ಆರೋಗ್ಯವಾಗಿ ಜೀವನ ನಡೆಸಲಿ ಎಂದು ಶುಭ ಹಾರೈಸಿದರು. ವಾತ್ಸಲ್ಯ ಮನೆ ನಾಮಫಲಕ ಅನಾವರಣವನ್ನು ಊರಿನ ಗೌಡರಾದ ಪುಟ್ಟಸ್ವಾಮಿರವರು ನೆರವೇರಿಸಿದರು.ಗ್ರಾಮ ಪಂಚಾಯಿತಿ ಪಿಡಿಓ ಭಾಸ್ಕರ್ ಮನೆ ಮುಂಬಾಗಿಲು ರಿಬ್ಬನ್ ಬಿಡಿಸುವ ಮೂಲಕ ಮನೆ ಒಳಗೆ ಪ್ರವೇಶಿಸಿ ಶುಭ ಕೋರಿದರು. ಮಂಜುನಾಥ ಸ್ವಾಮಿಗೆ ಪೂಜೆ ನಡೆಸಿ ಹಾಲು ಉಕ್ಕಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲ್ಲೂಕು ಯೋಜನಾಧಿಕಾರಿ ಹರೀಶ್ ಕುಮಾರ್‌ಶೆಟ್ಟಿ, ಮುಖಂಡರಾದ ರಂಗಸ್ವಾಮಿ, ಸುಂದರ, ಬಸವಣ್ಣ, ಚಿಕ್ಕಣ್ಣನಾಯಕ, ಬಂಗಾರ ಸ್ವಾಮಿ, ಒಕ್ಕೂಟ ಅಧ್ಯಕ್ಷರು ವಲಯದ ಮೇಲ್ವಿಚಾರಕರು, ಜ್ಞಾನ ವಿಕಾಸ ಸಮನ್ವಯಾಧಿಕಾರಿ, ಸೇವಾಪ್ರತಿನಿಧಿ, ಒಕ್ಕೂಟ ಪದಾಧಿಕಾರಿಗಳು, ಸಂಘದ ಸದ್ಯಸರು ಹಾಜರಿದ್ದರು.

ನರ್ಸಿಂಗ್ ವೃತ್ತಿಗೆ ದೇಶ, ವಿದೇಶದಲ್ಲೂ ಬೇಡಿಕೆ

ಪ್ರಥಮ ವರ್ಷದ ನರ್ಸಿಂಗ್ ವಿದ್ಯಾರ್ಥಿಗಳಿಂದ ಜ್ಯೋತಿ ಬೆಳಗಿಸುವಿಕೆ, ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ

ಚಾಮರಾಜನಗರ: ನಿಸ್ವಾರ್ಥ ಸೇವೆಯ ಸಂಕೇತವಾಗಿರುವ ನರ್ಸಿಂಗ್ ವೃತ್ತಿ ಒಂದುಪವಿತ್ರ ವೃತ್ತಿಯಾಗಿದ್ದು ಈ ವೃತ್ತಿಗೆ ದೇಶ, ವಿದೇಶದಲ್ಲೂ ಬೇಡಿಕೆ ಇದೆ ಎಂದು ಬೆಂಗಳೂರು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಶ್ರೀಕಾಂತ್ ಫುಲಾರಿ ಹೇಳಿದರು.

ನಗರದ ಡಾ.ರಾಜ್ ಕುಮಾರ್ ರಂಗಮಂದಿರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್ ಮತ್ತು ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಮುಚ್ಚಯ ವತಿಯಿಂದ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳಿಂದ ಜ್ಯೋತಿ ಬೆಳಗಿಸುವಿಕೆ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಸಕ್ತ ವರ್ಷದಲ್ಲಿ ಕರ್ನಾಟಕದಲ್ಲಿ 656 ನರ್ಸಿಂಗ್ ಕಾಲೇಜುಗಳಲ್ಲಿ 40 ಸಾವಿರ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳಲಾಗಿದೆ. ಖಾಸಗಿ ಶಾಲೆಗಳಲ್ಲೂ 40 ಸಾವಿರ ಪ್ರವೇಶ ಮಾಡಿಕೊಳ್ಳಲಾಗಿದ್ದು ಒಟ್ಟಾರೆ. ಪ್ರತಿ ವರ್ಷವೂ 80 ಸಾವಿರ ವಿದ್ಯಾರ್ಥಿಗಳು ನರ್ಸಿಂಗ್ ಕೋರ್ಸ್ ಪೂರ್ಣಗೊಳಿಸಿ ಹೊರಗಡೆ ಬರುತ್ತಿದ್ದಾರೆ. ಆದರೂ ಕೂಡ ನರ್ಸಿಂಗ್ ಕೊರತೆಯಾಗಿದೆ. ರಾಜ್ಯ, ದೇಶ, ವಿದೇಶದಲ್ಲೂ ನರ್ಸಿಂಗ್ ವೃತ್ತಿಗೆ ಬೇಡಿಕೆಯಿದೆ ಎಂದರು.

ಕರ್ನಾಟಕದಿಂದ ನರ್ಸ್‌ಗಳನ್ನು ಕಳುಹಿಸಿಕೊಡುವಂತೆ ಜರ್ಮನ್, ಇಟಲಿ, ಫ್ರಾನ್ಸ್ ಸೇರಿದಂತೆ ಬೇರೆಬೇರೆ ವಿದೇಶಗಳಿಂದಲೂ ಬೇಡಿಕೆಗಳು ಬಂದಿವೆ. ಸರ್ಕಾರವೇ ವಿದೇಶಗಳಿಗೆ ಕಳುಹಿಸುವ ವ್ಯವಸ್ಥೆ ಇದ್ದು, ಸರ್ಕಾರ ವಿದೇಶಿ ಉದ್ಯೋಗಗಳನ್ನು ನೀಡುತ್ತಿದೆ. ಆ ದೇಶದ ಭಾಷೆ ಗೊತ್ತಿದ್ದರೆ ಸಲೀಸಾಗಿ ಕೆಲಸ ಮಾಡಬಹುದು. ಸರ್ಕಾರವೇ ಬಜೆಟ್‌ನಲ್ಲಿ ಭಾಷಾ ಕಲಿಕೆಗೆ ಅನುದಾನ ಘೋಷಣೆ ಮಾಡಿದೆ. ಆಗಾಗಿ ನರ್ಸಿಂಗ್ ಮಾಡಿದವರಿಗೆ ಒಳ್ಳೆಯ ಭವಿಷ್ಯವಿದೆ. ತಾವೂ ಒಳ್ಳೆಯ ವೃತ್ತಿ ಆಯ್ಕೆ ಮಾಡಿಕೊಂಡಿದ್ದೀರಿ. ನಿಮ್ಮ ಪೋಷಕರು ಮಕ್ಕಳನ್ನು ಜಾಬ್‌ಗೆ ಸೇರಿಸಿದ್ದಾರೆ ಎಂದು ತಿಳಿದುಕೊಳ್ಳಿ ಎಂದರು.

ಪ್ರತಿಷ್ಠಿತ ಕಾಲೇಜು ಆದ ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದೀರಿ ಕಾಲೇಜಿನಲ್ಲಿ ಉತ್ತಮ ಬೋಧನೆ ಸಿಗುತ್ತಿದೆ. ವಿದ್ಯಾರ್ಥಿಗಳು ಇಂತಹ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಿಮ್ ಭೋಧನಾ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಚೆನ್ನಭೋವಿ, ಅಧ್ಯಕ್ಷತೆ ವಹಿಸಿದ್ದ ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಸಿಮ್ಸ್ ಬೋಧನಾ ಆಸ್ಪತ್ರೆಯ ಪ್ರಭಾರ ಶುಶೂಷಕ ಅಧೀಕ್ಷಕಿ ಚಂದ್ರಕಲಾ ವಿ.ಶೇಷಾದ್ರಿ ಮಾತನಾಡಿದರು. ಕಾಲೇಜು ಪ್ರಾಂಶುಪಾಲ ವಿನಯ್ ಕುಮಾರ್ ಪ್ರತಿಜ್ಞಾವಿಧಿ ಬೋಧಿಸಿದರು. ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಜೆಎಸ್‌ಎಸ್ ಮಹಾವಿದ್ಯಾಪೀಠ ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್ ಮತ್ತು ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಮುಚ್ಚಯ ವತಿಯಿಂದ ಆಯೋಜಿಸಿದ್ದ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ.

ಸಿಹಿ–ಕಹಿ ಎರಡೂ ಇದ್ದರೆ ಜೀವನ ಸುಂದರ

ಯುಗಾದಿ ಸಂಭ್ರಮ ಕಾರ್ಯಕ್ರಮದಲ್ಲಿ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್ ಅಭಿಮತ



ಮೈಸೂರಿನ ವಿಜಯವಿಠಲ ಪಿಯು ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿದ್ದ ಯುಗಾದಿ ಸಂಭ್ರಮ ಕಾರ್ಯಕ್ರಮದಲ್ಲಿ ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರು,ಮಾ.29(ಪಿಎಂ)– ಬದುಕಿನಲ್ಲಿ ಕೇವಲ ಸಿಹಿಯೇ ಇರಲಿ ಎಂದು ಅಪೇಕ್ಷಿಸುವುದು ಸರಿಯಲ್ಲ. ಸಿಹಿ–ಕಹಿ ಮಿಶ್ರಣ ಇದ್ದರೆ ಮಾತ್ರವೇ ಜೀವನ ಸುಂದರ ಎಂದು ಸಂಸ್ಕೃತ ವಿದ್ವಾಂಸ ಡಾ. ಹೆಚ್.ವಿ.ನಾಗರಾಜರಾವ್ ಹೇಳಿದರು.

ಮೈಸೂರಿನ ಸರಸ್ವತಿಪುರಂನ ವಿಜಯ ವಿಠಲ ಪಿಯು ಕಾಲೇಜು ಆವರಣದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ (ಅಭಾಸಾಪ) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಯುಗಾದಿ ಸಂಭ್ರಮ 2026 ಕಾರ್ಯಕ್ರಮ ಉದ್ಘಾಟಿಸಿ, 'ಸಂಸ್ಕೃತದಲ್ಲಿ ಮುಕ್ತಕಗಳು ಮತ್ತು ಯುಗಾದಿ' ವಿಷಯ ಕುರಿತು ಅವರು ಮಾತನಾಡಿದರು.

ನಮ್ಮ ಜೀವನದಲ್ಲಿ ಕೇವಲ ಸಿಹಿಯೇ ಇರಬೇಕೆಂದು ಅಪೇಕ್ಷಿಸುವುದು ಸರಿಯಲ್ಲ. ಯುಗಾದಿ ಸಂದರ್ಭದಲ್ಲಿ ಪ್ರತಿಯೊಬ್ಬರು ಈ ಸಂಗತಿ ಅರ್ಥ ಮಾಡಿಕೊಳ್ಳಬೇಕು. ಕನ್ನಡದಲ್ಲಿ ಉಗಾದಿ ಎಂದು ಕರೆದರೆ, ಸಂಸ್ಕೃತದಲ್ಲಿ ಯುಗಾದಿ ಎಂದು ಕರೆಯುತ್ತೇವೆ. ಯುಗಾದಿ ಎಂದರೆ ಯುಗದ ಪ್ರಾರಂಭ ಎಂಬುದಾಗಿದೆ. ಯುಗ ಯಾವಾಗ ಪ್ರಾರಂಭಗೊಂಡಿತು ಎಂಬುದಕ್ಕೆ ನಾನಾ ರೀತಿಯಲ್ಲಿ ವ್ಯಾಖ್ಯಾನಗಳಿವೆ ಎಂದರು.

ಮೂರು ಪುಸ್ತಕಗಳು ಇಂದು ಬಿಡುಗಡೆಗೊಂಡಿದ್ದು, ಈ ಪೈಕಿ 'ನಂಜನಗೂಡು ತಿರುಮಲಾಂಬ' ಪುಸ್ತಕ ಬಿಡುಗಡೆ ಮಾಡಿರುವುದು ಸಂತಸ ಉಂಟು ಮಾಡಿದೆ. ಏಕೆಂದರೆ ನಂಜನಗೂಡು ತಿರುಮಲಾಂಬ ಅವರು 19ನೇ ಶತಮಾನದವರು. 16ನೇ ಶತಮಾನದಲ್ಲಿ ಸಂಸ್ಕೃತ ಸಾಹಿತ್ಯದಲ್ಲಿ ತಿರುಮಲಾಂಬ ಎಂಬ ದೊಡ್ಡ ಕವಯತ್ರಿ ಅತ್ಯಂತ ಶ್ರೇಷ್ಠ ಸಂಸ್ಕೃತದಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ. ಈ ಪುಸ್ತಕ ಬಿಡುಗಡೆ ಮಾಡುವಾಗ 16ನೇ ಶತಮಾನದ ಆ ಕವಯತ್ರಿಯ ನೆನಪಾಯಿತು. ಅಂತೆಯೇ ಕನ್ನಡ ಸಾಹಿತ್ಯ ಕೃಷಿಯಲ್ಲಿ ನಂಜನಗೂಡು ತಿರುಮಲಾಂಬ ತಮ್ಮ ಸಾಧನೆ ಮೆರೆದಿದ್ದಾರೆ ಎಂದು ಸ್ಮರಿಸಿದರು.

ಇದಕ್ಕೂ ಮುನ್ನ ನಂಜನಗೂಡು ಸತ್ಯನಾರಾಯಣ (ಅಭಾಸಾಪ ನಂಜನಗೂಡು ತಾಲೂಕು ಸಮಿತಿ ಅಧ್ಯಕ್ಷರು) ಅವರು ರಚಿಸಿರುವ 'ನಂಜನಗೂಡು ತಿರುಮಲಾಂಬ', 'ಪ್ರಾಚೀನ ವಿಜ್ಞಾನಿಗಳು' ಹಾಗೂ 'ವೇದಗಳಲ್ಲಿ ವಿಜ್ಞಾನ' ಎಂಬ ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಅಭಾಸಾಪ (ಕರ್ನಾಟಕ) ಸಂಪರ್ಕ ಪ್ರಮುಖ ಡಾ.ವಿ.ರಂಗನಾಥ್, ಪ್ರಾಂತ ಕಾರ್ಯಕ್ರಮ ಪ್ರಮುಖ ರಘುಶೆಟ್ಟಿ, ಮೈಸೂರು ಜಿಲ್ಲಾ ಸಮಿತಿ ಅಧ್ಯಕ್ಷ ಎಸ್.ಸುಬ್ರಹ್ಮಣ್ಯ, ಕಾರ್ಯದರ್ಶಿ ಸುಬ್ರಹ್ಮಣ್ಯ ಮತ್ತಿತರರು ಹಾಜರಿದ್ದರು.

ಸಂಕಷ್ಟದಲ್ಲಿ ತೈಲ ಪೂರೈಸಿದ ಭಾರತಕ್ಕೆ ಶ್ರೀಲಂಕಾ ಧನ್ಯವಾದ

ಕೊಲಂಬೋ: ಸಂಕಷ್ಟದ ಸಮಯದಲ್ಲಿ ಭಾರತ ಇಂಧನ ಪೂರೈಕೆ ಮಾಡಿದ್ದಕ್ಕೆ ಶ್ರೀಲಂಕಾ ಅಧ್ಯಕ್ಷ ದಿಸಾನಾಯಕೆ ಧನ್ಯವಾದ ಸಲ್ಲಿಸಿದ್ದಾರೆ.

'ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಶ್ರೀಲಂಕಾ ಎದುರಿಸುತ್ತಿರುವ ಇಂಧನ ಪೂರೈಕೆಯಲ್ಲಿನ ಅಡಚಣೆಗಳ ಕುರಿತು ಕೆಲವು ದಿನಗಳ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಮಾತನಾಡಿದ್ದೆ. ಭಾರತ ಕೂಡಲೇ ಸ್ಪಂದಿಸಿ ಸಹಕಾರ ನೀಡಿದ್ದಕ್ಕೆ ಕೃತಜ್ಞತೆಗಳು. ನಿನ್ನೆ ಕೊಲಂಬೊಗೆ 38,000 ಮೆಟ್ರಿಕ್ ಟನ್ ಇಂಧನ ಬಂದಿದೆ. ಸಹಕಾರ ನೀಡಿದ ವಿದೇಶಾಂಗ ಸಚಿವ ಜೈಶಂಕರ್ ಅವರಿಗೂ ಧನ್ಯವಾದಗಳು ಎಂದು ತಿಳಿಸಿದ್ದಾರೆ.

ಶ್ರೀಲಂಕಾ ಪಶ್ಚಿಮ ಏಷ್ಯಾ ಮತ್ತು ಸಿಂಗಾಪುರದಿಂದ ಇಂಧನವನ್ನು ಆಮದು ಮಾಡಿಕೊಳ್ಳುತ್ತಿತ್ತು. ಹಾರ್ಮುಜ್ ಜಲಸಂಧಿಯನ್ನು ಇರಾನ್ ಬಂದ್ ಮಾಡಿದ್ದು ವಿಶ್ವಾದ್ಯಂತ ತೈಲ ಬಿಕ್ಕಟ್ಟು ಎದುರಾಗಿದೆ. ಭಾರತ ತನ್ನ ಸ್ನೇಹಿತ ರಾಷ್ಟ್ರ ಎಂದು ಪರಿಗಣಿಸಿದ ಇರಾನ್ ಈಗ ಭಾರತದ ಹಡಗುಗಳ ಸಂಚಾರಕ್ಕೆ ಅನುಮತಿ ನೀಡಿದೆ.

ಶ್ರೀಲಂಕಾದಲ್ಲಿ ಭಾರತದ ಇಂಡಿಯನ್ ಆಯಿಲ್ ಕಂಪನಿಯ ಅಂಗಸಂಸ್ಥೆ ಲಂಕಾ ಐಒಸಿ ಪಿಎಲ್‌ಸಿ ಕಾರ್ಯ ನಿರ್ವಹಿಸುತ್ತಿದೆ. ಶ್ರೀಲಂಕಾ ಐಒಸಿ ಜೊತೆ ಒಪ್ಪಂದ ಮಾಡಿಕೊಂಡಿದ್ದ ಪೂರೈಕೆದಾರರಿಗೆ ತೈಲ ಪೂರೈಸಲು ಸಾಧ್ಯವಾಗದ ಕಾರಣ ಲಂಕಾದಲ್ಲಿ ತೈಲ ಬಿಕ್ಕಟ್ಟು ತೀವ್ರಗೊಂಡಿದ್ದು, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯೂ ಭಾರೀ ಏರಿಕೆಯಾಗಿದೆ.

ಬಸವ ಜಯಂತಿ ಕಾರ್ಯಕ್ರಮಕ್ಕೆ ಗಣ್ಯರಿಗೆ ಆಹ್ವಾನ

ಮೈಸೂರು, ಮಾ.29– ಬಸವ ಜಯಂತಿ 2026ರ ಅಂಗವಾಗಿ, ಬಸವ ತತ್ವಗಳ ಪ್ರಚಾರ ಮತ್ತು ಸಮಾಜದಲ್ಲಿ ಐಕ್ಯತೆಯ ಬಲವರ್ಧನೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಬಸವ ಜಯಂತಿ ತಂಡವು ಗಣ್ಯರನ್ನು ಭೇಟಿ ಮಾಡಿ ಆಹ್ವಾನ ನೀಡಿತು.

ಈ ಸಂದರ್ಭದಲ್ಲಿ ತಂಡವು ಅಶ್ವಿನಿ ಪುನಿತ್ ಪುನೀತ್ ರಾಜಕುಮಾರ್ ಅವರನ್ನು ಭೇಟಿಯಾಗಿ, ಬಸವ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಆತ್ಮೀಯವಾಗಿ ಆಹ್ವಾನಿಸಿತು. ಇದೇ ವೇಳೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನೂ ಆಹ್ವಾನಿಸಲಾಯಿತು. ಬಸವ ಜಯಂತಿ ಅಧ್ಯಕ್ಷ ಎಂ. ಚಂದ್ರಶೇಖರ್ ಅವರ ನೇತೃತ್ವದಲ್ಲಿ ಈ ಭೇಟಿ ನಡೆಯಿತು. ಈ ಸಂದರ್ಭದಲ್ಲಿ ಮೆರವಣಿಗೆ ಸಮಿತಿ ಅಧ್ಯಕ್ಷ ಕೆ.ವಿ. ಮಲ್ಲೇಶ್, ಪುಟ್ಟರಾಜಪ್ಪ ಹಾಗೂ ಎ.ಪಿ. ವಿರೂಪಾಕ್ಷ, ಒಕ್ಕೂಟದ ಮಾಜಿ ಅಧ್ಯಕ್ಷ ಎಂ.ಪ್ರದೀಪ್ ಕುಮಾರ್, ಶ್ರೀನಾಥ್ ಬಾಬು ಉಪಸ್ಥಿತರಿದ್ದರು.

ಪಿಯಾನೋ ನುಡಿಸಿದ ಪೊಲೀಸ್ ಮಹಾನಿರ್ದೇಶಕರು...



ಮೈಸೂರಿನ ಲಲಿತ ಮಹಲ್ ರಸ್ತೆಯಲ್ಲಿರುವ ಕೆಎಆರ್‌ಪಿ ಅಶ್ವಾರೋಹಿ ದಳದ ಕಚೇರಿಗೆ ಶನಿವಾರ ಭೇಟಿ ನೀಡಿದ್ದ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಅವರು, ಇಲ್ಲಿರುವ ಸಂಗೀತ ವಾದ್ಯಗಳ ವಸ್ತುಸಂಗ್ರಹಾಲಯದಲ್ಲಿ ಪಿಯಾನೋ ನುಡಿಸಿದರು. ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಸೇರಿದಂತೆ ಇನ್ನಿತರ ಪೊಲೀಸ್ ಅಧಿಕಾರಿಗಳು ಈ ವೇಳೆ ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹಿನಕಲ್‌ನಲ್ಲಿರುವ ಟೈರ್ ಅಂಗಡಿಗೆ ಹುಡುಗರು ಬೇಕಾಗಿದ್ದಾರೆ. ಸಂಬಳ: ರೂ. 17,000.
Mob: 94483 72715

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

SITE FOR SALE
KBL SILICON CITY
Behind Infosys
30x50 E/F
1st Phase.
Well Developed Area.
Premium Plot | Owner's plot
Call : 88672 68919
Brokers Excuse

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಶ್ರೀ ಗೌರೀಶಂಕರ ಟ್ರಾವೆಲ್ಸ್
30–4–2026 (6 ದಿನ): ಅಂಯೋಧ್ಯೆ, ದೆಹಲಿ, ಆಗ್ರಾ, ಮಥುರಾ, ಪ್ರಯಾಗ್‌ರಾಜ್, ಕಾಶಿ.
15–5–2026 (4 ದಿನ): ಉಜ್ಜಯಿನಿ, ಓಂಕಾರೇಶ್ವರ, ಇಂದೋರ್
29–5–2026 (12 ದಿನ): ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಹರಿದ್ವಾರ್, ಮಸೂರಿ.
(ವಿಮಾನ, ಬಸ್, ಊಟ, ರೂಂ)
Mob: 9620002114

MYSURU RETINA CARE
STAFF REQUIRED
[FRESHER OR EXPERIENCE]
1. OPTOMETRIST,
2. RECEPTIONIST,
3. OT STAFF,
CONTACT NUMBER
7338369364/ 0821-2543244
#22A, SRI GURU KRUPAM, 1ST FLOOR, NIVEDITHA NAGAR, MYSORE-570022

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಟರ್ಜಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್ ಬಾದ್, ಮೈಸೂರು–10

COMMERCIAL SPACE FOR RENT
Commercial Space Attached to Ring Road opposite to APMC For Rent, Mysore. Contact
7975437956
9886386698

CHANGE OF NAME
I, Sunil Kumar R (New name) S/o Raju S, residing at # 17, 21st Cross, SBI Colony, Akshay Nagar, T.C. Palya Main Road, K R Puram, Bangalore-560036, do here by state on oath that Ihave changed my name from Suunil Kumar R (former name) to Sunil Kumar R (new name) vide affidavit sworn in before Notary C. Sasikala, Bangalore dated 23-3-2026. In future all my records & dealings I will be identifed as Sunil Kumar R.
Sd/- Sunil Kumar R

HOME LOANS
CORPORATION, MUDA, KHB
GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact: 9108416410



SUNZONE SOLAR SYSTEM
VM Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

SITE FOR SALE
30x40, East-facing, Bhima Ashvini Layout, near Srinagar. Clear title. Brokers excuse. Contact:
Mob: 9481849749

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 9964733988

ಗ್ರೇಟರ್ ಮೈಸೂರಿನ ಬೆಲೆ ಏರಿಕೆ ಮುನ್ನ ಸೈಟನ್ನು ನಿಮ್ಮದಾಗಿಸಿಕೊಳ್ಳಿ
ಸಂಜಯ್ ನಗರ ಲೇಔಟ್, ನಂಜನಗೂಡು
30X40 ಸೈಟುಗಳು
ರೂ. 14 ಲಕ್ಷ
ಸಂಪರ್ಕಿಸಿ: NH-150A ಪಕ್ಕದಲ್ಲಿ
8792306996

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಕೆಲಸ ಡೇಟಾ ಎಂಟ್ರಿ, ಪ್ಯಾಕಿಂಗ್ ಕೆಲಸಗಳಿಗೆ ನೇರ ಆಯ್ಕೆ. 20,000 ದಿಂದ ಕೊರಿಯರ್ ಲಭ್ಯವಿದೆ.
9964322833, 7996021216

WANTED
Male Receptionist below 50 years for a reputed Hotel Rooms property at Mysuru.
Call: 96116 22009

WANTED
LADY CASHIER
6.30 am - 3 pm
3 pm - 10 pm
HOTEL NEW MYSORE REFRESHMENTS,
Opp. Mysore Zoo, Mysuru.
Mob: 94812 18064

MUSIC TEACHER
PIONO, KEYBOARD, GUITOR(8TH GRADE LONDON) TRINITY EXAM, ONLINE, OFFLINE, HOME TUITION ALSO AVAILABLE. SCHOOLS ALSO CAN APPROCH (PART TIME ONLY)
MOB : 9008247050

ಮನೆ ಭೋಗ್ಯಕ್ಕೆ ಇದೆ
E.W.S 118 15x30 ಪೂರ್ವ ದಿಕ್ಕಿನ ಬಾಗಿಲು, ಇಂಡಿಪೆಂಡೆಂಟ್ ಸಿಂಗಲ್ ಬೆಡ್‌ರೂಂ ಮನೆ 11ನೇ ಮೇನ್, ಹೆಚ್. ಬ್ಲಾಕ್, ರಾಮಕೃಷ್ಣನಗರ, ಮೈಸೂರು
9480939152

ಡ್ರೈವರ್ ಬೇಕಾಗಿದ್ದಾರೆ
ಗೂಡ್ಸ್ ವಾಹನಕ್ಕೆ ಡ್ರೈವರ್‌ಗಳು ತಕ್ಷಣ ಬೇಕಾಗಿದ್ದಾರೆ. ಸಂಬಳ : ರೂ. 15000/– ರಿಂದ 20,000/– ವಸತಿ ಉಚಿತ. ಸಂಪರ್ಕಿಸಿ :
8884179981

MUDA/KHB/SITE/SALE
1) 60X40, VIJAYA NAGAR, IV STG II PHS. ₹ 8000/ SQFT. N/FACE
2) 25X80, KHB, CORNER KUVEMPUNAGAR, ₹ 8000/SQFT
BANK LOAN AVAILABLE
9480213689
BROKERS EXCUSE

SALOON FOR RENT
WELL FURNISHED SALOON WITH ALL EQUIPMENTS AVAILABLE IN KUVEMPUNAGAR ON PACHAMANTRA ROAD
CONTACT:
9448011547
9986974249

SITE FOR SALE
30'X50' (9MX15M) South Facing Site @ Amritha Nagar for sale near udbur gate (beside vishnuvardhana smaraka), Mysore. H.D.Kote Main Road, Rs. 4500 per Sq ft.(slightly Neg..)
9964482234

WANTED
Tempo Drivers with 3 years + experience. Good Salary offered,
9148991267

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್, ಸಂಬಳ : 13000/– ರಿಂದ 14000/– ವಯಸ್ಸು : 25 ರಿಂದ 60 ರವರಿಗೂ ಸ್ಥಳ : ನಜರ್‌ಬಾದ್, ಮಣಿಪಾಲ್ ಆಸ್ಪತ್ರೆ ಹತ್ತಿರ(ರಿಂಗ್ ರೋಡ್)
7483638113
9741513227

ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್(ರಿ)
ಜಯನಗರ, ಮೈಸೂರು–14
ತಕ್ಷಣ ಬೇಕಾಗಿದ್ದಾರೆ
ಕಂಪ್ಯೂಟರ್ ಆಪರೇಟರ್ ಕಮ್ ಕ್ಲರ್ಕ್ ಹುದ್ದೆ – 2, ವಿದ್ಯಾರ್ಹತೆ – ಪದವಿ, ಕನ್ನಡ ಇಂಗ್ಲೀಷ್ ಟೈಪಿಂಗ್, ವಿವರಗಳಿಗೆ :
9483453005
9900629393

ಬೇಕಾಗಿದ್ದಾರೆ
ಲಾರಿ ಡ್ರೈವರ್ ಬೇಕಾಗಿದ್ದಾರೆ. ಕ್ಯಾಂಟೀನ್, PF ಮತ್ತು ESI ಸೌಲಭ್ಯವಿದೆ. ಸಂಪರ್ಕಿಸಿ
9341623350

ಸೈಟ್ ಮಾರಾಟಕ್ಕಿದೆ
ಕೆಬಿಎಲ್ ಸಿಲಿಕಾನ್ ಸಿಟಿ ಇನ್ಫೋಸಿಸ್ ಹಿಂಭಾಗ
30x50 E/F
1ನೇ ಫೇಸ್.
ಉತ್ತಮವಾಗಿ ಅಭಿವೃದ್ಧಿ ಹೊಂದಿದ ಪ್ರದೇಶ.
ಪ್ರೀಮಿಯಂ ಪ್ಲಾಟ್ | ಮಾಲೀಕರ ಪ್ಲಾಟ್
Call: 88672 68919
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು ಸಂಬಳ : 21,000/- ವಿದ್ಯಾರ್ಹತೆ : 50 ವರ್ಷದೊಳಗೆ ESI & PF ಊಟ ತಿಂಡಿ ಸೌಲಭ್ಯವಿರುತ್ತದೆ.
9620777819
9880727819

ವೀಕೆಂಡ್ ಪ್ರವಾಸ 03 ದಿನಗಳು
ನಿರ್ವಾಣ ಬೀಚ್ ಪ್ಯಾರಡೈಸ್ ಬೀಚ್ ಟ್ರೆಕ್ಕಿಂಗ್, ನೇತ್ರಾವತಿ ಬ್ಯಾಕ್ ವಾಟರ್ ಬೋಟಿಂಗ್, ನೀಲಗೋಡು ಚೌಡೇಶ್ವರಿ ದೇವಸ್ಥಾನ, ಮುರುಡೇಶ್ವರ, ಯಾಣ ಗುಹೆಗಳು, ಇಕೋ ಬೀಚ್ ವಿರ್ಜಿನ್ ಪೋರ್ಟ್ ಇತ್ಯಾದಿ ಊಟ, ತಿಂಡಿ ವಸತಿ ಸೇರಿ ಒಬ್ಬರಿಗೆ ಆರು ಸಾವಿರ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 70222 71023

Looking for experienced
* Receptionist * House Men / Women * Stewards for a Star Hotel in Mysore Vijayanagar. Timings: 8 am to 7 pm & 7 pm - 8 am. Interested candidates please contact:
Mob: 91482 24300

ಬೇಕಾಗಿದ್ದಾರೆ
ಫರ್ನಿಷಿಂಗ್ ಅಂಗಡಿಯಲ್ಲಿ ಸೇಲ್ಸ್ ಬಾಯ್ ಮತ್ತು ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಬಳ – ಸೇಲ್ಸ್ ಬಾಯ್‌ಗೆ 18 ರಿಂದ 20 ಸಾವಿರ. ಹುಡುಗರಿಗೆ: 12 ರಿಂದ 15 ಸಾವಿರ. ಇರ್ವಿನ್ ರಸ್ತೆ, ಮೈಸೂರು
Mob: 8050744784

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಹೆಂಗಸರು – ಗಂಡಸರು ಕಟ್ಟಿಂಗ್ / ಗ್ರೈಂಡಿಂಗ್ ದೋಸೆ ಭಟ್ಟರು, ಗಂಡಸರು ವಾಷಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ (ನೈಟ್)
8970893632, 9606238790

WANTED
REQUIRED CNC & VMC OPERATORS
Experience: 01/02 years.
Attractive salary offered.
Mob: 9880104160, 7411877995, 8073153820

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

FOR SALE
30X40 SITE @PRAKRUTHI ENCLAVE, 20X40, 30X50 GURUKULA LYT JP NAGAR
20x30 Site @ VRL Layout, HD Kote Road
30X45 CORNER SITE NEAR DATTAGALLI 80FT ROAD
20x30 Site & Duplex House @ Vijaya Nagar
Commercial Properties Available
PRAKRUTHI PROPERTIES
95386 90359, 90359 90359

FOR SALE
2 & 3 BHK New Apartments @ Ramakrishna Nagar.
20x30, 30x40 2,3 & 4 BHK New Construction as Per Your Plan Near Rainbow School, Bogadi
30x50 Sites Near RT Nagar Brahmins Lyt, 50ft & 60ft Road
PRAKRUTHI PROPERTIES
95386 90359, 90359 90359

ಕಮರ್ಷಿಯಲ್ ಸೈಟು ಮಾರಾಟಕ್ಕಿದೆ
30x40.. ಪಶ್ಚಿಮ ದಿಕ್ಕು ರಾಮಕೃಷ್ಣನಗರ. ಪೊಲೀಸ್ ಸ್ಟೇಷನ್ ರೋಡ್.. ಸಂಪರ್ಕಿಸಿ.
8050216683

ಜಮೀನು ಮಾರಾಟಕ್ಕಿದೆ
ನಂಜನಗೂಡು ಕಸಬಾ ಹರತಲೆ ದೇವೀರಮ್ಮನ ಹುಂಡಿ ಮಧ್ಯ ಕೋಳಿಫಾರಂ ಓಂಶಕ್ತಿ ದೇವಸ್ಥಾನ ಎದುರುಗಡೆ ಹೊಸ ಲೇಔಟ್ ಪಕ್ಕ 50 ಗುಂಟೆ ಜಮೀನು ಮಾರಾಟಕ್ಕೆ ಇದೆ. ಸಂಪರ್ಕಿಸಿ :
9742630970

ಮಾರಾಟಕ್ಕಿವೆ
20x30, 30x40 ಸೈಟು
20x30 ಡ್ಯುಪ್ಲೆಕ್ಸ್ ಮನೆ
ಟಿ.ನರಸೀಪುರ ರಸ್ತೆ,
9187593627

ಉದ್ಯೋಗವಕಾಶ
ಮೈಸೂರಿನಲ್ಲಿರುವ A.W. Group of ಕಂಪನಿಯೊಂದಕ್ಕೆ Freshe's + Experience ಆದ 197 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC, PUC, ITI, Dip any degree, ತಿಂಗಳಿಗೆ : 21,000 – 26,000 (ಉಚಿತ ಊಟ + ವಸತಿ + Promotion) ಕೂಡಲೇ ಕರೆ ಮಾಡಿ,
ಸ್ವಾತಿಗೌಡ :
9886479489
7349699460

ಅನುಬಂಧ ಮ್ಯಾರೇಜಸ್
ಎಲ್ಲಾ ಜಾತಿಯ ಸುಂದರ ಶ್ರೀಮಂತ ವಿದ್ಯಾವಂತ ವಧುವರರು ವಿಧುರರು, ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ,
6361740552
9449408551

ಸೈಟು ಮಾರಾಟಕ್ಕಿದೆ
30x40 E/F 38 ಲಕ್ಷ ಸುವರ್ಣನಗರ, ಬೋಗಾದಿ
20x42 East North Corner,. 55 ಲಕ್ಷ ವಿಜಯನಗರ 4ನೇ ಹಂತ ಪಕ್ಕ, ಮೈಸೂರು
9845765573
9986856999

ಜಮೀನು ಮಾರಾಟಕ್ಕಿದೆ
3/4 ಮುಕ್ಕಾಲು ಎಕರೆ ಜಮೀನು ಮಾರಾಟಕ್ಕೆ ಇದೆ ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಶ್ರೀರಂಗಪಟ್ಟಣ ಟೋಲ್ ಬಳಿ
ಸಂಪರ್ಕಿಸಿ
7899871415
(ಮಾಲೀಕರು)

ಕೆಲಸಕ್ಕೆ ಬೇಕಾಗಿದ್ದಾರೆ
ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಮನೆಯಿಂದಲೇ ಪ್ಯಾಕಿಂಗ್ ಕೆಲಸ ಮತ್ತು ಬರವಣಿಗೆ, ಹಾಗೂ ಟೈಪಿಂಗ್ ಕೆಲಸಗಳನ್ನು ಮಾಡಿ ಗಳಿಸಿ ತಿಂಗಳಿಗೆ– 25000/– ದಿಂದ 30,000/– ವರೆಗೆ.
9380675221

ಬೇಕಾಗಿದ್ದಾರೆ
ಕಂಪ್ಯೂಟರ್ ಆಪರೇಟರ್ (ಆಸ್ತಿಪತ್ರ ಬರಹಗಾರರ ಆಫೀಸ್‌ನಲ್ಲಿ ಕೆಲಸ ಮಾಡಿ ಅನುಭವವುಳ್ಳವರು)ಮೈಸೂರು
9686071750
8971936090

ಟೈಲರಿಂಗ್ ತರಬೇತಿ
ಎಲ್ಲಾ ತರದ ಬ್ಲೌಸ್ & ಚೂಡಿದಾರ್ ಹೇಳಿಕೊಡುತ್ತೇವೆ. ವಿಜಯನಗರ 2ನೇ ಹಂತ, 20 ಡಿ ನೇ ಮೇನ್ ಮನೆ ನಂ. 3435, ಮೈಸೂರು.
7019491983
9008096025

ತೇಜಸ್ವಿನಿ ಟೂರಿಸ್ಟ್
12–4–2026 ಕೇರಳ ಪ್ರವಾಸ 6 ದಿನ ಊಟ, ತಿಂಡಿ, ರೂಂ ಸೇರಿದೆ 13 ಸ್ಥಳಗಳು,
20–4–2026 ಆಂಧ್ರ ಪ್ರವಾಸ 7 ದಿನ, ಮಂತ್ರಾಲಯ, ಆಹೋಬಲ, ಮಹಾನಂದಿ ಒಟ್ಟು 14 ಸ್ಥಳಗಳು
10–5–2026 ಆಗ್ರದೆಹಲಿ, ಆದ್ಯ, ಕಾಶಿ, ಅಯೋಧ್ಯ, ಪ್ರಯಾಗರಾಜ್ 14 ದಿನ
24–5–2026 ಚಾರ್‌ಧಾಮ ಯಾತ್ರೆ 18 ದಿನ ರೈಲು 14 ದಿನ ವಿಮಾನ
26–5–2026, ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನ ಒಟ್ಟು 18 ಸ್ಥಳಗಳು, ರೈಲಿನಲ್ಲಿ 18 ದಿನ ವಿಮಾನ 14 ದಿನಗಳು
9379792644 ಮೈಸೂರು

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್, ಹೂಟಗಳ್ಳಿ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು ಸಂಬಳ : 20,000/-W/o ಊಟ ತಿಂಡಿ ಸೌಲಭ್ಯವಿರುತ್ತದೆ.
9880727819
9620667819

WANTED
1. Office Accountant with tally skills 2. Store Managers, 3. ITI graduates, Mechatronics, turners, fitters and millers. 4. Diploma Electrical(panel wiring and PLC programming), 5. Diploma ECE, Mechanical (work on Autocad, solidwork)
Telephone: 0821-2582668
Mob: 7204445679
Address: - Mystech Machines #Q113, 4th Cross, 8th Main, Hebbal Industrial Estate, Mysore - 570016
Email: - mystechmachines@gmail.com

ತಕ್ಷಣ ಬೇಕಾಗಿದ್ದಾರೆ
SRS ಸೆಕ್ಯೂರಿಟಿ ಸರ್ವಿಸಸ್
ಅನುಭವವುಳ್ಳ ಸೆಕ್ಯೂರಿಟಿಗಾರ್ಡ್, ಸೂಪರ್‌ವೈಸರ್ ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC, PUC, BA, Any Degree, ವೇತನ : S/G 20,000, S/Sup 25000. Valet Driver 22000 ಸಂಬಳ ಇರುತ್ತದೆ. ಕೆಲಸದ ಸಮಯ 8 ಗಂಟೆಗಳು ಹಾಗೂ OT ಸೌಲಭ್ಯವಿರುತ್ತದೆ. ವಯೋಮಿತಿ 19 ರಿಂದ 45 ಒಳಗಿರುವವರು ESI, PF & W/o GH ಹಾಗೂ ಊಟ, ತಿಂಡಿ ಸೌಲಭ್ಯವಿರುತ್ತದೆ. ಸ್ಥಳ : Radisson Hotel, Nexus mall,
Dinesh Y S
7760097320, 9606832471

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು ಸಂಬಳ : 18,000/-(8 hours, 26 ದಿನಗಳು) ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9880727819

ಸೈಟು ಮಾರಾಟಕ್ಕಿದೆ
40/60 ಪೂರ್ವ ದಿಕ್ಕು ದಟ್ಟಗಳ್ಳಿ ಜೋಡಿ ಬೇವಿನ ಮರದ ಹತ್ತಿರ. 40/60.. ದಕ್ಷಿಣ ದಿಕ್ಕು. ವಾಸು ಲೇಔಟ್. ಕಿಂಗ್ಸ್ ಕಾಫಿ ಹೋಟೆಲ್ ಎದುರುಗಡೆ ರಸ್ತೆ.. ದಟ್ಟಗಳ್ಳಿ.. 50/80.. ಪಶ್ಚಿಮ ದಿಕ್ಕು. ದಟ್ಟಗಳ್ಳಿ..
ಸಂಪರ್ಕಿಸಿ
8050216683

ಈಗ New look ಮತ್ತು Grand ಇಂಟೀರಿಯರ್‌ಗೆ Change ಆಗಿರುವ
ದಿವ್ಯರೂಪ ಕಲ್ಯಾಣ ಭವನ
ವಿಜಯನಗರ 2ನೇ ಹಂತ – ಮೈಸೂರು
ನಮ್ಮಲ್ಲಿ 2026 –May 5-6 ಹಾಗೂ August 18-19 ಮತ್ತು ಇತರೆ ದಿನಗಳಲ್ಲಿ ಛತ್ರ ಖಾಲಿ ಇದೆ. ವಿಚಾರಿಸಿ
9448051099 - 9880253653

ದಾಖಲಾತಿ ಕಳೆದಿದೆ
ಹುಣಸೂರು ಟೌನ್ ಶಬ್ಬೀರ್ ನಗರದಲ್ಲಿ ವಾಸವಾಗಿರುವ ಲೇಟ್ ಸರ್ದಾರ್.ಎಂ ರವರ ಮಗ ಎಂ.ಎಸ್.ಆಸಿಫ್ ಖಾನ್ ಆದ ನಾನು ದಿನಾಂಕ 05–05–2010ರಂದು ಹುಣಸೂರು ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಶುದ್ಧ ಕ್ರಯದ ಮೂಲಕ ಪಡೆದ (1ನೇ ಪುಸ್ತಕದ ಹೆಚ್.ಯು.ಎನ್–1–00866–2010–11) ಸ್ವತ್ತಿನ ಶುದ್ಧ ಕ್ರಯ ಪತ್ರ ದಿ.24–03–2026ರ ಮಂಗಳವಾರ ಮನೆ ಖಾಲಿ ಮಾಡುವ ಸಂದರ್ಭದಲ್ಲಿ ಕಳೆದು ಹೋಗಿದೆ ಸಿಕ್ಕಿದವರು ದಯಮಾಡಿ ನನಗಾಗಲಿ ಅಥವಾ ನಗರ ಪೊಲೀಸ್ ಠಾಣೆಗಾಗಲಿ ತಲುಪಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಮೊ.9686056287
ನಗರ ಪೊಲೀಸ್ ಠಾಣೆ ಫೋನ್ ನಂ.08222 263133

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಗ್ಯಾರಂಟಿ ಯೋಜನೆ ಅನುಷ್ಠಾನದಲ್ಲಿ

ಅರ್ಹರಿಗೆ ತೊಂದರೆಯಾಗದಂತೆ ಎಚ್ಚರ ವಹಿಸಿ

ತಾಲೂಕು ಅಧ್ಯಕ್ಷ ವೀರೇಂದ್ರ ನವೀನ ಅಧಿಕಾರಿಗಳಿಗೆ ಸೂಚನೆ



ಸಭೆಯಲ್ಲಿ ವೀರೇಂದ್ರ(ನವೀನ) ಮಾತನಾಡಿದರು.

ತಿ.ನರಸೀಪುರ, ಮಾ.29– ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಅರ್ಹರಿಗೆ ತೊಂದರೆಯಾಗದಂತೆ ಎಚ್ಚರ ವಹಿಸಬೇಕು. ತಾಂತ್ರಿಕ ಸಮಸ್ಯೆ ಪರಿಹರಿಸಿ ಯೋಜನೆಗಳ ಲಾಭ ದೊರೆಯುವಂತೆ ಮಾಡಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ವೀರೇಂದ್ರ ನವೀನ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ತಿ.ನರಸೀಪುರ ಹಾಗೂ ವರುಣ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಬಡವರು ಹಾಗೂ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ರಾಜ್ಯ ಸರ್ಕಾರ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದು, ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕಾಗಿರುವುದು ತಾಲೂಕು ಮಟ್ಟದ ಅಧಿಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿ ಎಂದರು.

ರಾಜ್ಯ ಸರ್ಕಾರ ಹಿಂದುಳಿದ ವರ್ಗದ ಜನರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು, ಅವರ ಜೀವನ ಮಟ್ಟ ಸುಧಾರಿಸಲು ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸುತ್ತಿದೆ. ಈ ಕಾರ್ಯಕ್ಕೆ ಬೆಂಬಲವಾಗಿ ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಹಾಗೂ ಶಕ್ತಿ ಯೋಜನೆಗಳು ಸಹಕಾರಿಯಾಗಿವೆ ಎಂದರು.

ಗೃಹಲಕ್ಷ್ಮಿ ಯೋಜನೆಗೆ 432 ಕೋಟಿ ರೂ., ಯುವನಿಧಿಗೆ 3.4 ಕೋಟಿ ರೂ., ಅನ್ನಭಾಗ್ಯ ಯೋಜನೆಗೆ 72.41 ಕೋಟಿ ರೂ., ಶಕ್ತಿ ಯೋಜನೆಗೆ 127.82 ಕೋಟಿ ರೂ., ಗೃಹಜ್ಯೋತಿಗೆ 84.84 ಕೋಟಿ ರೂ. ಸೇರಿದಂತೆ ಒಟ್ಟು 720.14 ಕೋಟಿ ರೂ.ಗಳ ಅನುದಾನ ನೀಡಲಾಗಿದೆ ಎಂದರು.

ಆಹಾರ ನಿರೀಕ್ಷಕ ಸದಾನಂದ ಮಾತನಾಡಿ, ತಾಲೂಕು ವ್ಯಾಪ್ತಿಯಲ್ಲಿ 5 ಎಲ್‌ಪಿಜಿ ವಿತರಕರಿದ್ದು, ಈವರೆಗೆ ಗ್ಯಾಸ್ ವಿತರಣೆಯಲ್ಲಿ ಯಾವುದೇ ಸಮಸ್ಯೆ ಎದುರಾಗಿಲ್ಲ ಎಂದು ಸಭೆಗೆ ಮಾಹಿತಿ ನೀಡಿದರು.

ಶಕ್ತಿ ಯೋಜನೆಯಡಿ ಮಹಿಳೆಯರ ಉಚಿತ ಪ್ರಯಾಣಕ್ಕೆ 2023ರ ಜೂನ್‌ನಿಂದ ಚಾಲನೆ ನೀಡಲಾಗಿದ್ದು, 2026 ಜನವರಿ ಅಂತ್ಯಕ್ಕೆ ನಂಜನಗೂಡು ಘಟಕದಲ್ಲಿ 482.22 ಫಲಾನುಭವಿಗಳು ಪ್ರಯಾಣಿಸಿದ್ದು, 127.82 ಕೋಟಿ ರೂ. ಆದಾಯ ಗಳಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ವಿಭಾಗದ ವ್ಯವಸ್ಥಾಪಕ ಎಸ್.ವಿ.ನಾರಾಯಣ ಸಭೆಗೆ ತಿಳಿಸಿದರು. ತಾಲೂಕಿನ ಯುವ ನಿಧಿ ಯೋಜನೆಯಡಿ ಡಿಪ್ಲೊಮಾ ವಿದ್ಯಾರ್ಥಿಗಳಿಗೆ 1 ಲಕ್ಷ 17 ಸಾವಿರ ರೂ. ಹಾಗೂ ಪದವೀಧರ ಯುವಕರಿಗೆ 3 ಕೋಟಿ 6 ಲಕ್ಷದ 72 ಸಾವಿರ ರೂ. ಸೇರಿದಂತೆ ಒಟ್ಟು 3 ಕೋಟಿ 7 ಲಕ್ಷದ 89 ಸಾವಿರ ರೂ.ಗಳನ್ನು ಸರ್ಕಾರ ಯುವಕರ ಖಾತೆಗೆ ಜಮೆ ಮಾಡಿದೆ ಎಂದು ಯುವನಿಧಿ ಯೋಜನೆ ಅಧಿಕಾರಿ ರಾಹುಲ್ ತಿಳಿಸಿದರು.

ಸಿಡಿಪಿಓ ಗೋವಿಂದರಾಜು ಮಾತನಾಡಿ, ಗೃಹಲಕ್ಷ್ಮಿ ಯೋಜನೆಯಡಿ ತಾಲೂಕಿನಲ್ಲಿ 432 ಕೋಟಿ ರೂ.ಗಳನ್ನು ಮಹಿಳೆಯರ ಖಾತೆಗೆ ಪಾವತಿಸಲಾಗಿದೆ ಎಂದು ಸಭೆಗೆ ವಿವರಿಸಿದರು.

ಸಭೆಯಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಚಂದ್ರಧರ, ಸದಸ್ಯರಾದ ಮಲ್ಲಾಜಮ್ಮ, ಕುಪ್ಯ ಗವಿ, ತಾಪಂ ಪ್ರಭಾರ ಇಓ ರಂಗಸ್ವಾಮಿ, ಸೆಸ್ಕ್ ಎಇಇ ಕೆ.ವಿ.ವೀರೇಶ್, ಇತರರಿದ್ದರು.

ಹೈನುಗಾರಿಕೆ ಉತ್ತೇಜಿಸಲು ಹಾಲು ಕರೆಯುವ ಸ್ಪರ್ಧೆ

ಶಾಸಕ ದರ್ಶನ್ ಧ್ರುವನಾರಾಯಣ್



ನಂಜನಗೂಡಿನಲ್ಲಿ ಹಾಲು ಕರೆಯುವ ಸ್ಪರ್ಧೆ ನಡೆಯಿತು.

ನಂಜನಗೂಡು, ಮಾ.29– ಗ್ರಾಮೀಣ ಭಾಗದಲ್ಲಿ ಹೈನುಗಾರಿಕೆ ಉತ್ತೇಜಿಸಿ ಪ್ರೋತ್ಸಾಹಿಸುವ ಸಲುವಾಗಿ ಹಾಲು ಕರೆಯುವ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಜಾನುವಾರು ಮಾರುಕಟ್ಟೆ ಆವರಣದಲ್ಲಿ ಗರಳಪುರಿ ಉತ್ಸವದ ಅಂಗವಾಗಿ ಏರ್ಪಡಿಸಿದ್ದ ಹಾಲು ಕರೆಯುವ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಕೃಷಿ ಜೊತೆಗೆ ಹೈನುಗಾರಿಕೆ ಅಳವಡಿಸಿಕೊಂಡಲ್ಲಿ ಆರ್ಥಿಕವಾಗಿ ಸದೃಢರಾಗಬಹುದು. ಈ ನಿಟ್ಟಿನಲ್ಲಿ ರೈತರು ಪಶುಗಳ ಆರೋಗ್ಯದ ಮೇಲೆ ಕಾಳಜಿ ವಹಿಸಬೇಕು. ಆ ಮೂಲಕ ಗುಣಮಟ್ಟದ ಹಾಲು ಉತ್ಪಾದನೆಗೆ ಆದ್ಯತೆ ನೀಡಬೇಕು ಎಂದ ಅವರು ಕೃಷಿ ಮತ್ತು ಪಶು ಸಂಗೋಪನೆ ಉತ್ತೇಜಿಸುವ ಸಲುವಾಗಿ ಗರಳಪುರಿ ಉತ್ಸವದಲ್ಲಿ ಹಾಲು ಕರೆಯುವ ಸ್ಪರ್ಧೆ ಆಯೋಜಿಸಲಾಗಿದೆ ಎಂದರು.

ಸ್ಪರ್ಧೆಯಲ್ಲಿ ಸುಮಾರು 60 ರೈತರು ತಮ್ಮ ಪಶುಗಳ ಜೊತೆ ಆಗಮಿಸಿ ಹಾಲು ಕರೆಯುವ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಮತ್ತು ಪ್ರಮಾಣ ಪತ್ರವನ್ನು ಪಡೆದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವ ಮೂರ್ತಿ, ಮೈಮುಲ್ ಅಧ್ಯಕ್ಷ ಈರೇಗೌಡ, ನಿರ್ದೇಶಕರಾದ ಸದಾನಂದ, ನೀಲಾಂಬಿಕೆ ಮಹೇಶ್, ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಕೆ.ಜಿ.ಮಹೇಶ್, ಸಿ.ಎಂ. ಶಂಕರ್, ಮುಖಂಡರಾದ ಶ್ರೀನಿವಾಸ ಮೂರ್ತಿ, ವಿಜಯ್ ಕುಮಾರ್, ಕೆ.ಎಂ.ಬಸವರಾಜು, ಎನ್.ಎಂ. ಮಂಜುನಾಥ್, ಆಯೋಜಕರಾದ ಜಯಮಾಲ ಬೀರೇಗೌಡ ಸೇರಿದಂತೆ ಇತರರಿದ್ದರು.

ಆರೋಗ್ಯಕರ ಜೀವನ ಶೈಲಿ ಅಳವಡಿಸಿಕೊಳ್ಳಿ

ಯುವಕರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಸಲಹೆ



ನಂಜನಗೂಡಿನಲ್ಲಿ ವಾಕಥಾನ್ ನಡಿಗೆ ಕಾರ್ಯಕ್ರಮ ನಡೆಯಿತು.

ನಂಜನಗೂಡು, ಮಾ.29– ಇಂದಿನ ಯುವ ಪೀಳಿಗೆ ಮೊಬೈಲ್, ಟಿವಿ, ಕಂಪ್ಯೂಟರ್‌ಗಳನ್ನು ಅತಿಯಾಗಿ ಬಳಸುವ ವ್ಯಸನಕ್ಕೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಯುವಕರು ದೈಹಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳುವ ಮೂಲಕ ಆರೋಗ್ಯಕರ ಜೀವನ ಶೈಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಸಲಹೆ ನೀಡಿದರು.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಗರಳಪುರಿ ಉತ್ಸವದ ಅಂಗವಾಗಿ ಏರ್ಪಡಿಸಿದ್ದ ಆರೋಗ್ಯಕರ ಜೀವನಕ್ಕಾಗಿ ವಾಕಥಾನ್ ನಡಿಗೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮೊಬೈಲ್, ಟಿವಿ ವೀಕ್ಷಿಸುವುದರಿಂದ ವ್ಯಕ್ತಿಯ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಜೀವನದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಜೊತೆಗೆ ನಿದ್ರಾಹೀನತೆ, ಆತಂಕ ಮತ್ತು ಕಣ್ಣಿನ ಆಯಾಸದಂತಹ ಸಮಸ್ಯೆಗಳು ಉಂಟಾಗುತ್ತದೆ. ಅಲ್ಲದೇ ಇಂದಿನ ಯುವ ಪೀಳಿಗೆಯ ಕಣ್ಣು ಮತ್ತು ಕೈಗಳ ನಡುವೆ ಸಮನ್ವಯತೆ ಇಲ್ಲದಂತಾಗಿ ಒಂದು ಬಾಲ್ ಕೂಡ ಕ್ಯಾಚ್ ಹಿಡಿಯಲು ಸಾಧ್ಯವಾಗುತ್ತಿಲ್ಲ. ಮುಖ್ಯವಾಗಿ ಮಾನಸಿಕ ಖಿನ್ನತೆಯಿಂದ ಬಳಲುವಂತಾಗಿದೆ. ಆರೋಗ್ಯಕರ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕಾಗಿ ಎಲ್ಲರೂ ದೈಹಿಕ ಕಸರತ್ತಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಆರೋಗ್ಯಕರ ಜೀವನ ಶೈಲಿ ಅಳವಡಿಸಿಕೊಳ್ಳುವ ಪ್ರತಿಜ್ಞೆ ಮಾಡಬೇಕು ಎಂದರು.

ಇದೇ ವೇಳೆ 800ಕ್ಕೂ ಹೆಚ್ಚು ಮಂದಿ ಶಾಸಕರ ಜೊತೆಗೆ ವಾಕಥಾನ್‌ನಲ್ಲಿ ಭಾಗವಹಿಸಿ ಗಮನ ಸೆಳೆದರು. ವಾಕಥಾನ್ ಜೂನಿಯರ್ ಕಾಲೇಜು ಮೈದಾನದಿಂದ ಆರಂಭವಾಗಿ ಆರ್.ಪಿ.ರಸ್ತೆ, ಬ್ರಾಡ್ ವೇ ರಸ್ತೆ ಮೂಲಕ ಎಂಜಿಎಸ್ ರಸ್ತೆಯಲ್ಲಿ ಸುಮಾರು 3 ಕಿ.ಮೀ ಸಾಗಿ ಮತ್ತೆ ಜೂನಿಯರ್ ಕಾಲೇಜು ಮೈದಾನದಲ್ಲಿ ಅಂತ್ಯವಾಯಿತು.

ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ.ಜಿ.ಮಹೇಶ್, ಸಿ.ಎಂ.ಶಂಕರ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ನಾಗೇಶ್ ರಾಜ್, ಸೋಮೇಶ್, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಮುಖಂಡರಾದ ಶಶಿರೇಖಾ, ಎನ್.ಎಂ.ಮಂಜುನಾಥ್, ರಾಜೇಶ್, ಶಿವಣ್ಣ, ಶ್ರೀನಿವಾಸ ಮೂರ್ತಿ, ವಿಜಯ್ ಕುಮಾರ್, ಕೆ.ಎಂ.ಬಸವರಾಜು, ಜಯಮಾಲಾ, ಡಿವೈಎಸ್ಪಿ ರಘು, ಇನ್ಸ್‌ಪೆಕ್ಟರ್‌ಗಳಾದ ಆನಂದ್, ರವೀಂದ್ರ ಇದ್ದರು.

ಕನ್ನಡ ನಾಡಿಗೆ ನಟ ಪುನೀತ್ ಕೊಡುಗೆ ಅಪಾರ



ಮಲ್ಕುಂಡಿಯಲ್ಲಿ ನಟ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಆಚರಿಸಲಾಯಿತು.

ಮಲ್ಕುಂಡಿ, ಮಾ.29– ನಟ ಪುನೀತ್ ರಾಜಕುಮಾರ್ ಅವರು ಭೌತಿಕವಾಗಿ ಮರೆಯಾಗಿದ್ದರೂ, ಅವರ ಸಮಾಜ ಮುಖಿ ಸೇವಾ ಕಾರ್ಯಗಳು ಹಾಗೂ ತಮ್ಮ ಸರಳ ವ್ಯಕ್ತಿತ್ವದಿಂದಾಗಿ ಜನರ ಮನಸ್ಸಿನಲ್ಲಿ ಉಳಿದಿದ್ದಾರೆ ಎಂದು ಮೈಸೂರು ಜಿಲ್ಲಾ ಆರ್ಯ ಈಡಿಗರ ಸಂಘದ ಉಪಾಧ್ಯಕ್ಷ ಮಾಂಬಳ್ಳಿ ಕೆ.ರಾಜಶೇಖರ್ ತಿಳಿಸಿದರು.

ನಂಜನಗೂಡು ತಾಲೂಕಿನ ಮಲ್ಕುಂಡಿ ಗ್ರಾಮದಲ್ಲಿ ಪುನೀತ್ ರಾಜಕುಮಾರ್ ಅಭಿಮಾನಿಗಳು ಆಯೋಜಿಸಿದ್ದ ಪುನೀತ್ ರಾಜಕುಮಾರ್ ಅವರ 51ನೇ ಹುಟ್ಟುಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ರತ್ನ ಪ್ರಶಸ್ತಿಗೆ ಭಾಜನರಾಗಿರುವ ವರನಟ ಡಾ.ರಾಜ್ ಕುಮಾರ್ ಹಾಗೂ ಪುನೀತ್ ರಾಜಕುಮಾರ್ ಕನ್ನಡ ನಾಡಿಗೆ ಸಲ್ಲಿಸಿರುವ ಸೇವೆಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಯುವಜನರು ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಉತ್ತಮ ಶಿಕ್ಷಣ ಪಡೆದು ಒಳ್ಳೆಯ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು.

ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ಟಿ.ಗಿರೀಶ್ ಮಾತನಾಡಿ, ನಟ ಪುನೀತ್ ರಾಜಕುಮಾರ್ ಹುಟ್ಟುಹಬ್ಬವನ್ನು ರಾಜ್ಯಾದ್ಯಂತ ಅಭಿಮಾನಿಗಳು ವಿವಿಧ ಸಾಮಾಜಿಕ ಸೇವಾ ಕಾರ್ಯದ ಮೂಲಕ ಮಾರ್ಚ್ ತಿಂಗಳಿನಲ್ಲಿ ಹಬ್ಬದಂತೆ ಆಚರಿಸುತ್ತಿದ್ದಾರೆ. ಪುನೀತ್ ಸಾಧನೆಗಳು ಯುವಕರಿಗೆ ಸ್ಫೂರ್ತಿಯಾಗಲಿ ಎಂದರು.

ಇದೇ ವೇಳೆ ಗ್ರಾಮದ ಶ್ರೀರಾಮ ಮಂದಿರದ ಆವರಣದಲ್ಲಿ ಮಜ್ಜಿಗೆ, ಪಾನಕ ಹಾಗೂ ಪ್ರಸಾದ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮೈಸೂರಿನ ಕದಂಬ ಕಲಾ ಪೀಠದ ಅಧ್ಯಕ್ಷ ಬಿ.ವಿದ್ಯಾಸಾಗರ ಕದಂಬ, ಮೈಸೂರು ಜಿಲ್ಲಾ ಈಡಿಗರ ಸಂಘದ ಸಂಘಟನಾ ಕಾರ್ಯದರ್ಶಿ ಶ್ರೀನಿವಾಸ್, ಸಿದ್ದಪ್ಪ, ಡಾ.ರಾಜು, ನಾರಾಯಣ್, ಆನಂದ್ ಕುಮಾರ್, ನಂಜನಗೂಡು ತಾಲೂಕು ಪುನೀತ್ ರಾಜಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ನಾರಾಯಣ್, ಎಂ.ಆನಂದ್ ಕುಮಾರ್, ಸೋಮು ಸೇರಿದಂತೆ ಪುನೀತ್ ಅಭಿಮಾನಿಗಳು ಭಾಗವಹಿಸಿದ್ದರು.


ನೇಮಕ



ತಿ.ನರಸೀಪುರ: ಬಾಗಲಕೋಟೆ ವಿಧಾನಸಭಾ ಕ್ಷೇತ್ರ ಉಪ ಚುನಾವಣೆ ಅಂಗವಾಗಿ ಕೆಪಿಸಿಸಿ ಪ.ಜಾತಿ ವಿಭಾಗದ ರಾಜ್ಯ ಸಂಚಾಲಕ ತಿ.ನರಸೀಪುರ ತಾಲೂಕಿನ ವ್ಯಾಸರಾಜಪುರ ಗ್ರಾಮದ ವಕೀಲ ಬಿ.ಎಸ್.ರಂಗನಾಥ ಪ್ರಸಾದ್ ಅವರನ್ನು ಚುನಾವಣಾ ಪ್ರಚಾರ ಉಸ್ತುವಾರಿಯಾಗಿ ನೇಮಕ ಮಾಡಲಾಗಿದೆ.

ಹೆಚ್.ವೈ.ಮೇಟಿ ಅವರ ನಿಧನದಿಂದ ತೆರವಾದ ಶಾಸಕ ಸ್ಥಾನಕ್ಕೆ ನಡೆಯುತ್ತಿರುವ ಉಪ ಚುನಾವಣೆಯಲ್ಲಿ ಅವರ ಪುತ್ರ ಉಮೇಶ್ ಮೇಟಿ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ಉಮೇಶ್ ಮೇಟಿ ಅವರ ಗೆಲುವಿಗಾಗಿ ಶ್ರಮಿಸುವಂತೆ ಸೂಚಿಸಿ ಎಸ್‌ಸಿ ಘಟಕದ ರಾಜ್ಯಾಧ್ಯಕ್ಷ ಆರ್.ಧರ್ಮಸೇನಾ ಅವರ ಆದೇಶದ ಮೇರೆಗೆ ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿಗಳು ತಂದೆ–ತಾಯಿ ಆಸೆ ಈಡೇರಿಸಿ



ಸಾಲಿಗ್ರಾಮ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಭೆ ನಡೆಯಿತು.

ಸಾಲಿಗ್ರಾಮ, ಮಾ.29– ವಿದ್ಯಾಭ್ಯಾಸ ಮಾಡುವ ವೇಳೆ ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗದೆ ಗುರು ಹಿರಿಯರ ಮಾರ್ಗದರ್ಶನದಲ್ಲಿ ನಡೆದು ಕಾಲೇಜಿಗೆ ಉತ್ತಮ ಹೆಸರು ತರಬೇಕು ಎಂದು ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕಿಶೋರ್ ತಿಳಿಸಿದರು.

ಸಾಲಿಗ್ರಾಮ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಭೆಯಲ್ಲಿ ಮಾತನಾಡಿದ ಅವರು, ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಿ ಒಳ್ಳೆಯ ಉದ್ಯೋಗ ಪಡೆಯುವಂತೆ ಆಗಲಿ ಎಂದು ಆಶಿಸುತ್ತಾರೆ. ಅವರ ಆಸೆಗಳನ್ನು ಈಡೇರಿಸುವ ಜವಾಬ್ದಾರಿ ಪ್ರತಿಯೊಬ್ಬ ವಿದ್ಯಾರ್ಥಿಗಳ ಮೇಲಿದೆ ಎಂದರು.

ಡಾ.ಜಿ.ಟಿ.ಮಹೇಶ್ ಮಾತನಾಡಿ, ಹಿರಿಯ ವಿದ್ಯಾರ್ಥಿಗಳು ಕಾಲೇಜಿನ ಆಸ್ತಿ. ಆದ್ದರಿಂದ ಕಾಲೇಜಿನ ಕೀರ್ತಿ ಮತ್ತು ಯಶಸ್ಸು ಹಿರಿಯ ವಿದ್ಯಾರ್ಥಿಗಳಿಗೆ ಸಲ್ಲಬೇಕಾಗಿದೆ ಕಾಲೇಜಿನ ಅಭಿವೃದ್ಧಿ ಹಾಗೂ ಹಿರಿಯ ವಿದ್ಯಾರ್ಥಿಗಳ ನಡುವಿನ ಬಾಂಧವ್ಯ ವೃದ್ಧಿಸುವ ಉದ್ದೇಶದಿಂದ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘದ ಸಭೆ ಆಯೋಜಿಸಲಾಗಿದೆ ಎಂದರು.

ಪ್ರಾಂಶುಪಾಲ ಡಾ.ಕೆ.ಇ.ಗೋವಿಂದೇಗೌಡ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಾಧ್ಯಾಪಕ ಡಾ.ರಾಜೇಶ್, ಹಿರಿಯ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳಾದ ರಾಜೇಶ್, ಸಚಿನ್, ದೊಡ್ಡಸ್ವಾಮಿ, ಪ್ರದೀಪ್, ಸ್ವಾಮಿ, ಸಾನಿಯಾ, ಮೆಹಕ್, ಉದಯ್, ಶಿವು, ಮನು, ರಕ್ಷಿತಾ, ಪ್ರಮೋದಿನಿ ಮತ್ತು ಭಾಸ್ಕರ್ ಸೇರಿದಂತೆ ಹಲವು ನಿಕಟಪೂರ್ವ ವಿದ್ಯಾರ್ಥಿಗಳು ಕಾಲೇಜಿನ ಅಭಿವೃದ್ಧಿಗೆ ಪೂರಕವಾದ ಸಲಹೆಗಳನ್ನು ನೀಡಿದರು.

ವರುಣದಲ್ಲಿ ಸುಸಜ್ಜಿತ ಬಸ್ ನಿಲ್ದಾಣವಿಲ್ಲದೆ ಪರದಾಟ

ಬೇಡಿಕೆಗೆ ಸ್ಪಂದಿಸದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ



ತಿ.ನರಸೀಪುರ, ಮಾ.29– ಸಿಎಂ ಸಿದ್ದರಾಮಯ್ಯನವರ ವರುಣ ಕ್ಷೇತ್ರ ವ್ಯಾಪ್ತಿಯಲ್ಲಿ ಸುಸಜ್ಜಿತ ಬಸ್ ನಿಲ್ದಾಣವಿಲ್ಲದೆ ಜನತೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಮುಖ್ಯಮಂತ್ರಿಗಳು ನಮ್ಮ ಈ ಬೇಡಿಕೆಗೆ ಸ್ಪಂದಿಸದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ವರುಣ ಬಿಜೆಪಿ ಅಧ್ಯಕ್ಷ ಮಂಜು ಎಚ್ಚರಿಕೆ ನೀಡಿದ್ದಾರೆ.

ವರುಣ ಕ್ಷೇತ್ರದ ಜನರು ತಿ.ನರಸೀಪುರ, ಚಾಮರಾಜನಗರ, ಕೊಳ್ಳೇಗಾಲ, ತಮಿಳುನಾಡು ಹಾಗೂ ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳಲು ಸಮೀಪದ ನಾಡನಹಳ್ಳಿ ಬಸ್ ನಿಲ್ದಾಣದಿಂದ ಬಸ್ ಹತ್ತಿ ಪ್ರಯಾಣಿಸಬೇಕಾದ ಪರಿಸ್ಥಿತಿ ಇದೆ. ಜೊತೆಗೆ ನಾಡನಹಳ್ಳಿ ಬಸ್ ನಿಲ್ದಾಣದಲ್ಲಿ ಇಳಿದು ತಮ್ಮ ಊರುಗಳಿಗೆ ತೆರಳಬೇಕಾಗಿದೆ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವರುಣ ಕ್ಷೇತ್ರಕ್ಕೆ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸುವುದರ ಜೊತೆಗೆ ರಾಜ್ಯ, ಅಂತರ ರಾಜ್ಯ ಮತ್ತು ಅಂತರ ಜಿಲ್ಲಾ ಬಸ್ಸುಗಳನ್ನು ನಿಲುಗಡೆ ಮಾಡುವ ಮೂಲಕ ಕ್ಷೇತ್ರದ ಜನರಿಗೆ ಅನುಕೂಲ ಕಲ್ಪಿಸಿಕೊಡಬೇಕಿದೆ ಎಂದು ಆಗ್ರಹಿಸಿದ್ದಾರೆ.

ವರುಣ ವಿಧಾನಸಭಾ ಕ್ಷೇತ್ರದ ಸುತ್ತಮುತ್ತ ಅನೇಕ ಬಡಾವಣೆಗಳು ತಲೆ ಎತ್ತಿದ್ದು, ಈ ಭಾಗದಲ್ಲಿ ಕೊಳ್ಳೇಗಾಲ, ಚಾಮರಾಜನಗರ, ನರಸೀಪುರ, ಯಳಂದೂರು ಸೇರಿದಂತೆ ಸುತ್ತಮುತ್ತಲ ಜನರು ವಾಸವಾಗಿದ್ದು, ತಮ್ಮ ಊರುಗಳಿಗೆ ಹೋಗಿ ಬರಲು ಸಾಧ್ಯವಾಗದೆ ಪರಿತಪಿಸುವಂತಾಗಿದೆ. ಇದನ್ನು ಮನಗಂಡು ಬಸ್ ನಿಲ್ದಾಣ ನಿರ್ಮಿಸಿ, ಬಸ್ಸುಗಳ ನಿಲುಗಡೆಗೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿದ್ದಾರೆ.

1983ರಿಂದ ಸಿಎಂ ಸಿದ್ದರಾಮಯ್ಯ ವರುಣ ಕ್ಷೇತ್ರ ಪ್ರತಿನಿಧಿಸುತ್ತಾ ಬಂದಿದ್ದು, ಶಾಸಕರು, ಮುಖ್ಯಮಂತ್ರಿಗಳು, ವಿಪಕ್ಷ ನಾಯಕರು ಸೇರಿದಂತೆ ಉನ್ನತ ಹುದ್ದೆ ಅಲಂಕರಿಸಿದ್ದರೂ ಕ್ಷೇತ್ರಕ್ಕೆ ಬೇಕಾದ ಬಸ್ ನಿಲ್ದಾಣದ ಬಗ್ಗೆ ತಾತ್ಸಾರ ತೋರಿರುವುದು ಸರಿಯಲ್ಲ. ವರುಣ ವ್ಯಾಪ್ತಿಯಲ್ಲಿ ಸಾಕಷ್ಟು ಸರ್ಕಾರಿ ಜಾಗವಿದ್ದು, ಈ ಭಾಗದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಅನುಕೂಲಕರವಾಗಿದೆ ಎಂದರು.

ಕ್ಷೇತ್ರದ ಜನರ ಈ ಬೇಡಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಈಡೇರಿಸದಿದ್ದರೆ ಕ್ಷೇತ್ರದ ಜನರು ಮತ್ತು ಬಿಜೆಪಿ ಪಕ್ಷದಿಂದ ಪ್ರತಿಭಟನೆ ನಡೆಸುವುದಾಗಿ ಮಂಜು ಎಚ್ಚರಿಕೆ ನೀಡಿದ್ದಾರೆ.

ಕಳೆನಾಶಕ ಸಿಂಪಡಣೆ ವೇಳೆ ರೈತ ಸಾವು



ಹೆಚ್.ಡಿ.ಕೋಟೆ: ಕಳೆನಾಶಕ ಸಿಂಪಡಿಸುವ ವೇಳೆ ರೈತರೊಬ್ಬರು ಸಾವನ್ನಪ್ಪಿರುವ ಘಟನೆ ತಾಲೂಕಿನ ಜಿ.ಬಿ.ಸರಗೂರು ಗ್ರಾಮದಲ್ಲಿ ನಡೆದಿದೆ. ತಾಲೂಕಿನ ಜಿ.ಬಿ.ಸರಗೂರು ಗ್ರಾಮದ ರೈತ ನಾಗೇಶ್ (42) ಸಾವನ್ನಪ್ಪಿದವರು. ಈತ ಶನಿವಾರ ಬೆಳಗ್ಗೆ ತಮ್ಮ ಜಮೀನಿನಲ್ಲಿ ಬೆಳೆದಿದ್ದ ಶುಂಠಿಗೆ ಕಳೆನಾಶಕ ಸಿಂಪಡಿಸಲು ಹೋಗಿದ್ದರು. ಮಧ್ಯಾಹ್ನವಾದರೂ ಮನೆಗೆ ಬಾರದ ಹಿನ್ನಲೆಯಲ್ಲಿ ನಾಗೇಶ್ ಅವರಿಗೆ ಕರೆ ಮಾಡಿದರೂ ಸ್ವೀಕರಿಸುತ್ತಿರಲಿಲ್ಲ. ಇದರಿಂದ ಗಾಬರಿಗೊಂಡ ಮನೆಯವರು ಜಮೀನಿಗೆ ಹೋಗಿ ನೋಡಿದಾಗ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ಔಷಧ ಸಿಂಪಡಣೆ ವೇಳೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಅನುಸರಿಸದಿರುವುದು ಸಾವಿಗೆ ಕಾರಣ ಎಂದು ತಿಳಿದು ಬಂದಿದೆ.

ಇತ್ತೀಚೆಗೆ ರೈತರು ಹೆಚ್ಚಾಗಿ ಕಳೆನಾಶಕವನ್ನು ಬಳಸುತ್ತಿದ್ದು, ಇದರಿಂದ ಭೂಮಿ ಫಲವತ್ತತೆ ಜೊತೆಗೆ ಮನುಷ್ಯರ ಆರೋಗ್ಯದ ಮೇಲೂ ಕೆಟ್ಟ ಪರಿಣಾಮ ಬೀರುತ್ತಿದೆ. ಸರ್ಕಾರ ಈ ಸಂಬಂಧ ಸೂಕ್ತ ಮಾರ್ಗಸೂಚಿ ಪ್ರಕಟಿಸಬೇಕು. ರೈತರ ಜೀವ ಮತ್ತು ಜೀವನಕ್ಕೆ ಮಾರಕವಾಗಿರುವ ಔಷಧಗಳನ್ನು ನಿಷೇಧಿಸಬೇಕು. ಜೊತೆಗೆ ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಗಾಂಜಾ ಸೇವಿಸುತ್ತಿದ್ದ ಇಬ್ಬರ ಬಂಧನ



ಯುವಕರೊಂದಿಗೆ ಪೊಲೀಸರನ್ನು ಕಾಣಬಹುದು.

ಹುಣಸೂರು, ಮಾ.29– ಪ್ರತ್ಯೇಕ ಪ್ರಕರಣಗಳಲ್ಲಿ ಗಾಂಜಾ ಸೇವಿಸುತ್ತಿದ್ದ ಇಬ್ಬರು ಯುವಕರನ್ನು ಹುಣಸೂರು ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹುಣಸೂರು ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಸಲೀಂ ಪ್ಯಾಲೇಸ್ ಎದುರಿನ ಟೀ ಅಂಗಡಿ ಹಾಗೂ ರಜಾಕ್ ಮೊಹಲ್ಲಾ ಶಾದಿ ಮಹಲ್ ಹಿಂಭಾಗ ಯುವಕರು ಗಾಂಜಾ ಸೇವಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಡಿವೈಎಸ್ಪಿ ರವಿ, ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಮಾರ್ಗದರ್ಶನದಲ್ಲಿ ಎಸ್‌ಐ ಟಿ.ಎಂ.ತಾಜುದ್ದೀನ್ ನೇತೃತ್ವದ ಸಿಬ್ಬಂದಿಗಳ ತಂಡ ಕಾರ್ಯಾಚರಣೆ ನಡೆಸಿ ಯುವಕರನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಮುಖ್ಯ ಪೇದೆಗಳಾದ ಅರುಣ್, ಮಂಜುನಾಥ್, ಇರ್ಫಾನ್ ಇತರರಿದ್ದರು.

ಹೆಚ್.ಡಿ.ಕೋಟೆ: ಕನ್ನಡದಲ್ಲಿ ನಾಮಫಲಕ ಅಳವಡಿಸುವಂತೆ ಪ್ರತಿಭಟನೆ

ಹೆಚ್.ಡಿ.ಕೋಟೆ, ಮಾ.29– ಪಟ್ಟಣ ಹಾಗೂ ಹ್ಯಾಂಡ್‌ಪೋಸ್ಟ್‌ಗಳಲ್ಲಿರುವ ಹೋಟೆಲ್‌ನವರು ಸರ್ಕಾರದ ನಿಯಮದಂತೆ ಕನ್ನಡದಲ್ಲೇ ನಾಮಫಲಕ ಅಳವಡಿಸಬೇಕು ಎಂದು ಒತ್ತಾಯಿಸಿ ಪಟ್ಟಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಕುಮಾರ್ ಶೆಟ್ಟಿ ಬಣ)ಯಿಂದ ಪ್ರತಿಭಟನೆ ನಡೆಸಲಾಯಿತು.

ಕೋಟೆ ಹಾಗೂ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಇಂಡಿಯನ್ ಹೋಟೆಲ್ ಮತ್ತು ಕೂಲ್ ಲ್ಯಾಂಡ್ ಹೋಟೆಲ್‌ಗಳಿಗೆ ಭೇಟಿ ನೀಡಿದ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷ ಕ್ರಾಂತಿ ಕುಮಾರ್, ಶೇ.60 ಕನ್ನಡದಲ್ಲಿ ಇರುವಂತೆ ನಾಮಫಲಕ ಅಳವಡಿಸಬೇಕೆಂಬ ಎಚ್ಚರಿಕೆ ನೀಡಿದರು. ಮುಂಬರುವ 15 ದಿನದೊಳಗೆ ನಾಮಫಲಕ ಬದಲಾಯಿಸಬೇಕು ಎಂದು ಎಚ್ಚರಿಸಿದರು.

ಈ ವೇಳೆ ವೇದಿಕೆ ಟೌನ್ ಅಧ್ಯಕ್ಷ ಮಹೇಶ್, ಉಪಾಧ್ಯಕ್ಷ ಚೆನ್ನಸೋಮಣ್ಣ, ಚೆಲುವರಾಜು, ಸೋಮಣ್ಣ, ಕುಮಾರ್, ಶಿವು, ಕೃಷ್ಣ, ರಘು, ಮೂರ್ತಿ, ರವಿ, ಪ್ರಜ್ವಲ್, ರುದ್ರ ಕುಮಾರ್, ಮಂಜು, ಶಬೀರ್, ಜಗ, ವೆಂಕಟೇಶ್, ಮೂರ್ತಿ, ಪ್ರಸನ್ನ, ಪ್ರಸಾದ್, ಗೋಪಾಲ್, ಶಿವು, ಟೈಲರ್ ನಾಗರಾಜು, ನಟ ಆಟೋ ರಮೇಶ್ ಇನ್ನಿತರರಿದ್ದರು.



ಹೆಚ್.ಡಿ.ಕೋಟೆ ಕರವೇ ತಾಲೂಕು ಅಧ್ಯಕ್ಷ ಕ್ರಾಂತಿ ಕುಮಾರ್ ಹೋಟೆಲ್ ಮಾಲೀಕರನ್ನು ತರಾಟೆ ತೆಗೆದುಕೊಂಡರು.

ಪ್ರತಿಯೊಬ್ಬರೂ ಪರಿಸರದ ಉಳಿವಿಗೆ ಮುಂದಾಗಬೇಕಿದೆ

ಹುಣಸೂರು ಪ್ರಾದೇಶಿಕ ವಿಭಾಗದ ಡಿಸಿಎಫ್ ಕಿರುಭನಾಥನ್



ವಾಲಿಬಾಲ್ ಪಂದ್ಯಾವಳಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಹುಣಸೂರು, ಮಾ.29– ಪರಿಸರದ ಉಳಿವು ನಿಮ್ಮಿಂದಲೇ ಆಗಬೇಕು. ಪರಿಸರದೊಂದಿಗೆ ನಾವು–ನೀವು ಹೊಂದಾಣಿಕೆಯಿಂದ ಜೀವಿಸಿದಲ್ಲಿ ನಮ್ಮ ಸುತ್ತಮುತ್ತಲಿನ ಪ್ರಕೃತಿಯೊಂದಿಗೆ, ಕಾಡು ಪ್ರಾಣಿ, ಪಕ್ಷಿ ಸಂಕುಲ ಉಳಿಯುತ್ತದೆ. ಆದ್ದರಿಂದ ಎಲ್ಲರೂ ಪರಿಸರದ ಉಳಿವಿಗೆ ಮುಂದಾಗಬೇಕಿದೆ ಎಂದು ಹುಣಸೂರು ಪ್ರಾದೇಶಿಕ ವಿಭಾಗದ ಡಿಸಿಎಫ್ ಕಿರುಭನಾಥನ್ ತಿಳಿಸಿದರು.

ತಾಲೂಕಿನ ರತ್ನಪುರಿ ಗ್ರಾಮದಲ್ಲಿ ಬಿಳಿಕೆರೆ ಪ್ರಾದೇಶಿಕ ಅರಣ್ಯ ವಿಭಾಗದ ವತಿಯಿಂದ ಮಾನವ ಮತ್ತು ವನ್ಯಜೀವಿ ಸಂಘರ್ಷ ಕುರಿತು ಜಾಗೃತಿ ಮೂಡಿಸುವ ಅಂಗವಾಗಿ ಕಾಡಂಚಿನ ಗ್ರಾಮಸ್ಥರು ಹಾಗೂ ಯುವಕರಿಗೆ ವಿಎಸ್‌ಎಸ್ ಸಂಸ್ಥೆ ಆವರಣದಲ್ಲಿ ಹಮ್ಮಿಕೊಂಡಿದ್ದ ಅರಣ್ಯ ಉಳಿವು ಜಾಗೃತಿ ವಾಲಿಬಾಲ್ ಪಂದ್ಯಾವಳಿ ಹಾಗೂ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ವನ್ಯಜೀವಿಗಳ ಸಂರಕ್ಷಣೆಗೆ ಪೂರಕ ವಾತಾವರಣವನ್ನು ನಾವು ನೀವೆಲ್ಲಾ ಸೇರಿ ನಿರ್ಮಿಸಬೇಕಾದ ಅಗತ್ಯವಾಗಿದೆ ಎಂದರು.

ಜಿಪಂ ಮಾಜಿ ಸದಸ್ಯ ಡಿ.ಕೆ.ಕುನ್ನೇಗೌಡ ಮಾತನಾಡಿ, ನಮ್ಮ ಧರ್ಮಾಪುರ ಅರಣ್ಯ ಸುತ್ತಮುತ್ತ ವ್ಯವಸಾಯ ಮಾಡುವುದು ತುಂಬಾ ಕಷ್ಟಕರವಾಗಿದೆ. ಈ ಭಾಗದಲ್ಲಿ ಹುಲಿ, ಚಿರತೆ, ಕಾಡು ಹಂದಿ, ನವಿಲು ಸೇರಿದಂತೆ ಇನ್ನಿತರ ಕಾಡು ಪ್ರಾಣಿಗಳ ನಡುವೆ ನಾವು ಬೆಳೆದ ಬೆಳೆಗಳು ಹಾಗೂ ಸಾಕು ಪ್ರಾಣಿಗಳಿಗೆ ರಕ್ಷಣೆ ಇಲ್ಲದಂತಾಗಿದೆ. ಹೀಗಾಗಿ ವನ್ಯಜೀವಿಗಳಿಂದ ತೊಂದರೆಯಾಗದಂತೆ ನಮ್ಮ ರೈತರಿಗೆ ಸೂಕ್ತ ರಕ್ಷಣೆ ನೀಡಿ ಎಂದರು.

ಅಂಬೇಡ್ಕರ್ ಪ್ರಶಸ್ತಿ ವಿಜೇತ ಹರಿಹರನಂದ ಸ್ವಾಮಿ ಮಾತನಾಡಿ, ವನ್ಯಜೀವಿಗಳು ಹಾಗೂ ಪರಿಸರ ಜಾಗೃತಿಗಾಗಿ ಅರಣ್ಯ ಇಲಾಖೆ ಆಯೋಜಿಸಿರುವ ಕಾರ್ಯಕ್ರಮ ಅರ್ಥಪೂರ್ಣವಾಗಿದೆ. ಇಲಾಖೆ ರೈತರಿಗೆ ವನ್ಯಜೀವಿಗಳಿಂದ ತೊಂದರೆಯಾಗದಂತೆ ಇನ್ನು ಹೆಚ್ಚಿನ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕಾಗಿದೆ ಎಂದರು. ಹುಣಸೂರು ವಲಯ ಅರಣ್ಯಾಧಿಕಾರಿ ಪದ್ಮಶ್ರೀ ಮಾತನಾಡಿ, ಪ್ರಸ್ತುತ ಮಾನವ ಹಾಗೂ ವನ್ಯಜೀವಿ ಸಂಘರ್ಷ ಹೆಚ್ಚಾಗಿದ್ದು, ಇಲಾಖೆ ಹಾಗೂ ರೈತರ ಬಾಂಧವ್ಯ ಕಡಿಮೆಯಾಗಿದೆ. ಆದರೆ ರೈತರು ಹಾಗೂ ಕಾಡಂಚಿನ ನಾಗರಿಕರ ಸಹಾಯವಿಲ್ಲದೇ ನಾವು ಏನೂ ಮಾಡಲು ಸಾಧ್ಯವಿಲ್ಲ. ಕಳೆದ 2 ವರ್ಷಗಳಿಂದ ಸಾಕು ಪ್ರಾಣಿಗಳ ಮೇಲೆ ಕಾಡು ಪ್ರಾಣಿಗಳು ಸಾಕಷ್ಟು ದಾಳಿ ನಡೆಸಿವೆ. ಮುಂದಿನ ದಿನಗಳಲ್ಲಿ ಇದನ್ನು ತಡೆಗಟ್ಟಲು ಕ್ರಮ ಕೈಗೊಳ್ಳುತ್ತೇವೆ ಎಂದರು.

ಬಿಳಿಕೆರೆ ವಲಯ ಅರಣ್ಯಾಧಿಕಾರಿ ರಾಮನಗೌಡ ಸೊರಟೂರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಡಂಚಿನ ತಮ್ಮ ಸಮಸ್ಯೆಗಳ ಬಗ್ಗೆ ಹಾಗೂ ವನ್ಯಜೀವಿ ಸಂಘರ್ಷದ ಕುರಿತು ಗ್ರಾಮಸ್ಥರು ತಿಳಿಸಿ ಸೂಕ್ತ ರಕ್ಷಣೆ ನೀಡುವಂತೆ ಮನವಿ ಮಾಡಿದರು. ವಾಲಿಬಾಲ್ ಪಂದ್ಯಾವಳಿಯಲ್ಲಿ ಗೌರಿಪುರ ಗ್ರಾಮ ಪ್ರಥಮ, ಧರ್ಮಾಪುರ ಗ್ರಾಮದ ಯುವಕರು ದ್ವಿತೀಯ ಸ್ಥಾನ ಪಡೆದರು. ಹುಣಸೂರು ಅಪೋಲೋ ಆಸ್ಪತ್ರೆ ವತಿಯಿಂದ ನಡೆದ ಉಚಿತ ವೈದ್ಯಕೀಯ ಶಿಬಿರವನ್ನು ನೂರಾರು ಸಾರ್ವಜನಿಕರು ಸದುಪಯೋಗಪಡಿಸಿಕೊಂಡರು.

ಕಾರ್ಯಕ್ರಮದಲ್ಲಿ ತಾಪಂ ಮಾಜಿ ಸದಸ್ಯ ಅಜ್ಗರ್ ಪಾಷ, ಗ್ರಾಪಂ ಅಧ್ಯಕ್ಷ ನಾಗೇಶರಾವ್ ಮೇಗಾಣಿ, ಸದಸ್ಯ ಮನುಕುಮಾರ್, ಪಿಡಿಓ ಶ್ರೀಧರ್, ಲಯನ್ಸ್ ಟ್ರಸ್ಟಿನ ಸ್ನೇಕ್ ಅವಿನಾಶ್, ತೀರ್ಪುಗಾರರಾದ ದೇವು, ಪ್ರಮೋದ್ ಭಾಗವಹಿಸಿದ್ದರು.

ಸಿದ್ದಶೆಟ್ಟಿ ನಿಧನ



ಹುಣಸೂರು ಮಾ.29– ತಾಲೂಕಿನ ನಂಜಾಪುರದ ಚಿಕ್ಕ ಯಜಮಾನ ಸಿದ್ದಶೆಟ್ಟಿ(74) ಭಾನುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚನ್ನಮ್ಮ



ಹೆಚ್.ಡಿ.ಕೋಟೆ, ಮಾ.29– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ದಿ.ಹನುಮಯ್ಯ ಅವರ ಪತ್ನಿ ಚನ್ನಮ್ಮ(75) ಭಾನುವಾರ ನಿಧನರಾದರು.

ಮೃತರು ಇಬ್ಬರು ಪುತ್ರರು, ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಸಾರ್ವಜನಿಕ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಮಾಜ ಕಟ್ಟುವ ಕಾಯಕದಲ್ಲಿ ಸುತ್ತೂರು ಮಠಕ್ಕೆ ಅಗ್ರಸ್ಥಾನ

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿವಿಧ ವೈದ್ಯಕೀಯ ಸೇವೆಗಳಿಗೆ ಚಾಲನೆ

ಮೈಸೂರು, ಮಾ.29(ವಿವಿಹೆಚ್)– ನಮ್ಮ ನಾಡಿಗೆ ಮಠ–ಮಾನ್ಯಗಳ ಕೊಡುಗೆ ಅಪಾರ. ಸಾವಿರಾರು ವರ್ಷಗಳಿಂದ ಆಧ್ಯಾತ್ಮದ ತಳಹದಿಯ ಮೇಲೆ ಸಮಾಜ ಕಟ್ಟುವ ಕೆಲಸವನ್ನು ಮಠ ಮಾನ್ಯಗಳು ಮಾಡುತ್ತಿದ್ದು, ಸುತ್ತೂರು ಮಠ ಅಗ್ರಮಾನ್ಯ ಸ್ಥಾನವನ್ನು ಹೊಂದಿದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವ ಡಾ.ಶರಣಪ್ರಕಾಶ ಆರ್.ಪಾಟೀಲ್ ತಿಳಿಸಿದರು.

ಮೈಸೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಭಾನುವಾರ ಆಯೋಜಿಸಿದ್ದ ಕ್ಯಾತ್ ಲ್ಯಾಬ್, ಅತ್ಯಾಧುನಿಕ ಎಐ ಆಧಾರಿತ ಸಿಟಿ ಸ್ಕ್ಯಾನರ್, ಉನ್ನತೀಕರಿಸಿದ ಎಂಆರ್‌ಐ, ನರಶಸ್ತ್ರ ಚಿಕಿತ್ಸಾ ಸೂಕ್ಷ್ಮದರ್ಶಕ ಯಂತ್ರ ಹಾಗೂ ತಾಯಿ ಎದೆ ಹಾಲಿನ ಬ್ಯಾಂಕ್ ಘಟಕ ಉದ್ಘಾಟನೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

12ನೇ ಶತಮಾನದ ಕಾಯಕ ದಾಸೋಹ ಪರಿಕಲ್ಪನೆಯನ್ನು ಸುತ್ತೂರು ಮಠ ಒಳಗೊಂಡಿದ್ದು, ಆಧ್ಯಾತ್ಮಿಕತೆ ಜೊತೆಗೆ ಶಿಕ್ಷಣ, ಆರೋಗ್ಯ ದಾಸೋಹ ನಡೆಸಿಕೊಂಡು ಬರುವ ಮೂಲಕ ಸುತ್ತೂರು ಮಠದ ದೂರ ದೃಷ್ಟಿ ಮತ್ತು ಸೇವಾ ಮನೋಭಾವದಿಂದ ನಿಸ್ವಾರ್ಥ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

60ರ ದಶಕದಲ್ಲಿ ವೈದ್ಯಕೀಯ ಸೇವೆಗೆ ಖಾಸಗಿ ಸಂಸ್ಥೆಗಳಿಗೂ ಅನುಮತಿ ನೀಡಿದ ದೂರದೃಷ್ಟಿತ್ವ ಫಲವಾಗಿ ಇಂದು ರಾಜ್ಯದಲ್ಲಿ ವೈದ್ಯಕೀಯ ಕ್ಷೇತ್ರ ಗಣನೀಯ ಬೆಳವಣಿಗೆ ಕಂಡಿದೆ. ಎರಡನೇ ಹಂತ ಹಾಗೂ ಮೂರನೇ ಹಂತದ ಸೇವೆಗಳೂ ಕೂಡಾ ಗ್ರಾಮೀಣ ಭಾಗದ ಜನರಿಗೂ ತಲುಪುವಂತೆ ಆಗಿದೆ ಎಂದರು.



ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ತಾಯಿ ಎದೆ ಹಾಲಿನ ಬ್ಯಾಂಕ್ ಉದ್ಘಾಟನೆ ಮಾಡಿದರು. ಈ ವೇಳೆ ಸುತ್ತೂರು ಶ್ರೀಗಳು, ಸಚಿವ ಡಾ.ಶರಣಪ್ರಕಾಶ ಆರ್.ಪಾಟೀಲ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಪಿ.ಎಂ.ನರೇಂದ್ರಸ್ವಾಮಿ ಜೊತೆಯಲ್ಲಿದ್ದರು.

ವೈದಕೀಯ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ಗುಣಮಟ್ಟದ ಸೇವೆಯನ್ನು ನೀಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯವು ವೈದ್ಯಕೀಯ ಹಬ್ ಆಗಿದ್ದೂ, ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ ಸರ್ಕಾರಿ ಸೇವೆಯೂ ತಲುಪದ ಜಾಗಗಳಲ್ಲಿ ಖಾಸಗಿ ಸಂಸ್ಥೆಯವರು ವೈದ್ಯಕೀಯ ಕಾಲೇಜು, ಆಸ್ಪತ್ರೆಗಳನ್ನು ತೆರೆದು ಗುಣಮಟ್ಟದ ವೈದ್ಯಕೀಯ ಸೇವೆಯನ್ನು ನೀಡುತ್ತಾ ಬಂದಿದ್ದಾರೆ. ಉತ್ತರ ಕರ್ನಾಟಕ, ಕರಾವಳಿ, ದಕ್ಷಿಣ ಭಾಗದಲ್ಲಿ ಹತ್ತು–ಹಲವು ಸಂಸ್ಥೆಗಳು ಮುಂಚೂಣಿಯಲ್ಲಿ ಇವೆ. ಈ ಸಂಸ್ಥೆಗಳು ಸಾಮಾನ್ಯ ಜನರಿಗೂ ಕೈಗೆಟಕುವ ದರದಲ್ಲಿ ಉತ್ತಮ ರೀತಿಯ ಸೇವೆಯನ್ನು ನೀಡುತ್ತಿವೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಜಿಲ್ಲೆಗೊಂದು ಮೆಡಿಕಲ್ ಕಾಲೇಜು: ಜಿಲ್ಲೆಗೊಂದು ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡುವ ಉದ್ದೇಶ ನಮ್ಮ ಸರ್ಕಾರ ಹೊಂದಿದೆ. ಬಡವರೂ ಸೇರಿದಂತೆ ಮೆರಿಟ್ ಇರುವ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವ ಉದ್ದೇಶ ಇದಾಗಿದೆ. ಈಗಾಗಲೇ ರಾಜ್ಯಾದ್ಯಂತ ಸುಮಾರು 22 ಕಾಲೇಜು ಸ್ಥಾಪನೆ ಮಾಡಿದ್ದೇವೆ. ಇದರಿಂದಾಗಿ ಬಡ–ಮಧ್ಯಮ ವರ್ಗದ ಜನರಿಗೆ ಉತ್ತಮ ವೈದ್ಯಕೀಯ ಸೇವೆ–ಚಿಕಿತ್ಸೆ ದೊರೆಯುವಂತೆ ಮಾಡಲಾಗಿದೆ ಎಂದು ವಿವರಿಸಿದರು.

ತಾಯಿ ಎದೆ ಹಾಲಿನ ಬ್ಯಾಂಕ್ ಉದ್ಘಾಟನೆ ಮಾಡಿ ಬಳಿಕ ಮಾತನಾಡಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ, ಮಕ್ಕಳಿಗೆ ಮೊದಲ ಜೀವ ಲಸಿಕೆಯೇ ತಾಯಿಯ ಎದೆಹಾಲು. ಅದಕ್ಕಾಗಿಯೇ ಅದನ್ನು ಅಮೃತಕ್ಕೆ ಸಮ ಎನ್ನುತ್ತಾರೆ. ಮಕ್ಕಳಿಗೆ ಅಗತ್ಯ ಪೋಷಕಾಂಶಗಳ ಉಣಬಡಿಸಲು ಮೈಸೂರು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ತಾಯಿ ಎದೆಹಾಲು ಬ್ಯಾಂಕ್ ತೆರೆದಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ತಾಯಿಯ ಎದೆ ಹಾಲು ಸಮರ್ಪಕವಾಗಿ ದೊರಕದೆ, ಶೇ.8ರಷ್ಟು ಮಕ್ಕಳು ಪೌಡರ್ ಹಾಲಿನಿಂದ ಸಾಯುತ್ತಿದ್ದಾರೆ. ಆದ್ದರಿಂದ ತಾಯಂದರಿಗೆ ಎದೆಹಾಲಿನ ಮಹತ್ವದ ಬಗ್ಗೆ ಅರಿವು ಮೂಡಿಸಿ, ಅಗತ್ಯ ಮಕ್ಕಳಿಗೆ ಉಪಯೋಗವಾಗುವಂತೆ ಮಾಡಬೇಕು ಎಂದು ತಿಳಿಸಿದರು.

ಸುತ್ತೂರು ಶಿವಾರಾತ್ರಿ ದೇಶಿಕೇಂದ್ರ ಸ್ವಾಮಿಜಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ಮಾಲೀನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ, ಶಾಸಕ ಪಿ.ಎಂ.ನರೇಂದ್ರ ಸ್ವಾಮಿ, ಶಾಸಕ ಟಿ.ಎಸ್.ಶ್ರೀವತ್ಸ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಉಪ ಕುಲಪತಿ ಡಾ.ಎಚ್.ಬಸವನಗೌಡಪ್ಪ ಕಾರ್ಯದರ್ಶಿ ಪ್ರೊಎಸ್.ಪಿ. ಮಂಜುನಾಥ್, ತಾಂತ್ರಿಕ ವಿಭಾಗದ ನಿರ್ದೇಶಕ ಡಾ.ಎನ್. ಸುರೇಶ್, ಸಿ.ಪಿ.ಮಧು ಉಪಸ್ಥಿತರಿದ್ದರು.

> ಮೈಸೂರಲ್ಲಿ ಸಾಕು ಪ್ರಾಣಿಗಳು, ಕುದುರೆ ಸೇರಿದಂತೆ ಅಪಘಾತದಲ್ಲಿ ಮೃತವಾದ ಪ್ರಾಣಿಗಳ ಅಂತ್ಯ ಸಂಸ್ಕಾರ ಮಾಡಲು ಯಾವುದೇ ವ್ಯವಸ್ಥೆ ಇಲ್ಲ. ಮೈಸೂರು ನಗರದ ಹರಿಶ್ಚಂದ್ರ ಘಾಟ್‌ನಲ್ಲಿ ಪ್ರಾಣಿಗಳಿಗಾಗಿಯೇ ಪ್ರತ್ಯೇಕ ಚಿತಾಗಾರ ವ್ಯವಸ್ಥೆ ಮಾಡಲು ಮನವಿ ಮಾಡಿದ್ದೆ. ಅದಕ್ಕೆ ಸರ್ಕಾರವೂ ಸಕಾರಾತ್ಮಕವಾಗಿ ಸ್ಪಂದಿಸಿದೆ. ಆದರೆ ಅಲ್ಲಿ ಕೇಳುವ ಬದಲು ಸುತ್ತೂರು ಶ್ರೀಗಳ ಬಳಿ ಕೇಳಿದ್ದರೆ ಕೆಲಸ ಬೇಗ ಆಗುತ್ತಿತ್ತೇನೋ
> ಈ ಬಗ್ಗೆ ಶ್ರೀಗಳ ಬಳಿಯೂ ಮನವಿ ಮಾಡಿದ್ದೇನೆ. ತ್ವರಿತಗತಿಯಲ್ಲಿ ಇದಕ್ಕೆ ಸೂಕ್ತ ಪರಿಹಾರ ಸಿಗಲಿದೆ. ಪರಿಸರ ಮಾಲಿನ್ಯ ಹಾಳಾಗುವುದನ್ನು ತಡೆಯಲು ಹಾಗೂ ಪ್ರಾಣಿಗಳ ಅಂತ್ಯಸಂಸ್ಕಾರ ಮೌಲ್ಯವಾಗಿ ಮಾಡಬಹುದು.
> -ಟಿ.ಎಸ್.ಶ್ರೀವತ್ಸ, ಶಾಸಕ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	3 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಯೂತ್ (ತ) + ಉಸ್ತಾದ್ ಭಗತ್ ಸಿಂಗ್ (ತೆ)	2+2 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಆಯುಧ (ಕ)	4 ಪ್ರದರ್ಶನಗಳು

ಅಣುಕು ನ್ಯಾಯಾಲಯ ನ್ಯಾಯವಾದಿ ರೂಪಿಸುವ ಮೊದಲ ಹೆಜ್ಜೆ



ಅಣುಕು ನ್ಯಾಯಾಲಯ ಸ್ಪರ್ಧೆ–2026

ಮೈಸೂರು, ಮಾ.29(ವಿವಿಹೆಚ್)– ಅಣುಕು ನ್ಯಾಯಾಲಯ ಎಂಬುದು ಕೇವಲ ಒಂದು ಸ್ಪರ್ಧೆಯಲ್ಲ, ಒಬ್ಬ ನ್ಯಾಯಾವಾದಿಯನ್ನು ರೂಪಿಸುವ ಮೊದಲ ಹೆಜ್ಜೆ ಎಂದು ಕರ್ನಾಟಕ ಉಚ್ಚನ್ಯಾಯಲಯದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ತಿಳಿಸಿದರು.

ನಗರದ ಪಿ.ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಭಾನುವಾರ ಆಯೋಜಿಸಿದ್ದ ಪ್ರಥಮ ರಾಷ್ಟ್ರೀಯ ಅಣುಕು ನ್ಯಾಯಾಲಯ ಸ್ಪರ್ಧೆ–2026ರ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಾದ ಮಂಡನೆ ಕೇವಲ ಪ್ರಕರಣಗಳ ಸಂಗತಿಯನ್ನು, ಕಾನೂನನ್ನು ನಯವಾಗಿ ಮತ್ತು ತಾರ್ಕಿಕವಾಗಿ ನ್ಯಾಯಾಧೀಶರಿಗೆ ಮನವರಿಕೆ ಮಾಡಿಸುವ ಒಂದು ವಿಶಿಷ್ಟ ಕಲೆ. ಹಾಗಾಗಿ ಇಂತಹ ಕೌಶಲ್ಯಗಳ ಬಗ್ಗೆ ವಿದ್ಯಾರ್ಥಿಗಳು ಗಮನ ಹರಿಸಬೇಕು. ಅಣುಕು ನ್ಯಾಯಾಲಯದ ಕುರಿತಾಗಿ ವಿದ್ಯಾರ್ಥಿಗಳು ಸಮರ್ಥ ಸಂಶೋಧನೆ ಮತ್ತು ಸತತ ಅಭ್ಯಾಸ ನಡೆಸಿದರೆ, ಅಂಜಿಕೆಯಿಲ್ಲದೇ ನ್ಯಾಯದೀಶರ ಮುಂದೆ ದೃಢವಾಗಿ ವಾದಿಸಬಹುದು ಎಂದು ಸಲಹೆ ನೀಡಿದರು.

ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಪ್ರಾಧ್ಯಾಪಕ ಡಾ.ಎನ್. ಸತೀಶ್ ಗೌಡ ಮಾತನಾಡಿ, ಸ್ಪರ್ಧೆಗಳಲ್ಲಿ ಸೋಲು, ಗೆಲುವು ಸಾಮಾನ್ಯ, ಆದರೆ ಇವೆರಡೂ ಭವಿಷ್ಯಕ್ಕೆ ಉಪಯುಕ್ತ ವಾಗಬೇಕು. ಅಣುಕು ನ್ಯಾಯಾಲಯದ ಸ್ಪರ್ಧೆಯಲ್ಲಿ ಮಂಡಿಸುವ ಕಲೆ ಮತ್ತು ಸಂಶೋಧನೆಯ ಸಾಮಾರ್ಥ್ಯವನ್ನು ಉತ್ತಮವಾಗಿ ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ವಿವಿಧೆಡೆಗಳಿಂದ 35ಕ್ಕೂ ಹೆಚ್ಚಿನ ಕಾನೂನು ಕಾಲೇಜು ವಿದ್ಯಾರ್ಥಿಗಳು ಅಣುಕು ನ್ಯಾಯಾಲಯ ಸ್ಪರ್ಧೆಯಲ್ಲಿ ಭಾಗವಹಿಸಿದ್ದು, ಬೆಂಗಳೂರು ಪಿ.ಇ.ಎಸ್ ವಿಶ್ವವಿದ್ಯಾನಿಲಯಯ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿದರು. ವಿ.ವಿ.ಪುರಂ ಕಾನೂನು ಕಾಲೇಜು ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆದುಕೊಂಡರು.

ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಸೈಲ್ ರಮಣ್ಣವರ್, ಸಿ.ಎಂ.ಸಿ ಅಧ್ಯಕ್ಷ ಎಸ್.ಶಿವಲಿಂಗಯ್ಯ, ಕಾಲೇಜು ಪ್ರಾಂಶುಪಾಲೆ ಡಾ.ಪಿ.ದೀಪು ಉಪಸ್ಥಿತರಿದ್ದರು.

ಕಲ್ಲಿನಿಂದ ಜಜ್ಜಿ 4 ವರ್ಷದ ಬಾಲಕಿ ಬರ್ಬರ ಹತ್ಯೆ: ಅತ್ಯಾಚಾರ ಶಂಕೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯಲ್ಲಿ ನಾಪತ್ತೆಯಾಗಿದ್ದ ನಾಲ್ಕೂವರೆ ವರ್ಷದ ಬಾಲಕಿ ಶವವಾಗಿ ಪತ್ತೆಯಾಗಿದ್ದು, ಈ ಪುಟ್ಟ ಮಗುವಿನ ಮೇಲೆ ಅತ್ಯಾಚಾರ ವೆಸಗಿ ಹತ್ಯೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ಬಾಲಕಿಯ ಶವ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯ ಬೋಳುಗುಟ್ಟದ ನಿರ್ಜನ ಪ್ರದೇಶದ ನೀಲಗಿರಿ ತೋಪಿನಲ್ಲಿ ಪತ್ತೆಯಾಗಿದ್ದು, ಈ ಘಟನೆ ಇಡೀ ನಗರವನ್ನೇ ಬೆಚ್ಚಿಬೀಳಿಸಿದೆ.

ಬಾಲಕಿ ಗುರುವಾರ ಸಂಜೆ ಆಟವಾಡುತ್ತಿದ್ದಾಗ ನಾಪತ್ತೆಯಾಗಿದ್ದಳು. ಪೋಷಕರು ಹುಡುಕಾಟ ನಡೆಸಿದರೂ ಪತ್ತೆಯಾಗದ ಹಿನ್ನೆಲೆಯಲ್ಲಿ ಶುಕ್ರವಾರ ಮಧ್ಯಾಹ್ನ ಪೊಲೀಸರಿಗೆ ದೂರು ನೀಡಿದ್ದರು. ಬಳಿಕ ಪೊಲೀಸರು ಶೋಧ ಕಾರ್ಯಾಚರಣೆ ನಡೆಸಿ, ರಾತ್ರಿ ವೇಳೆಗೆ ಬೋಳುಗುಟ್ಟದ ನಿರ್ಜನ ಪ್ರದೇಶದ ನೀಲಗಿರಿ ತೋಪಿನಲ್ಲಿ ಶವ ಪತ್ತೆ ಮಾಡಿದ್ದರು. ಬಾಲಕಿಯನ್ನು ಅಪಹರಿಸಿದ ದುರುಳರು ಗುರುತು ಮರೆಮಾಚಲು ಬಾಲಕಿ ಮುಖವನ್ನು ಕಲ್ಲಿನಿಂದ ಜಜ್ಜಿ ವಿಕೃತವಾಗಿ ಕೊಲೆ ಮಾಡಿದ್ದಾರೆ. ದೇಹದ ಸ್ಥಿತಿಯನ್ನು ಗಮನಿಸಿದರೆ ಲೈಂಗಿಕ ದೌರ್ಜನ್ಯವೂ ನಡೆದಿರಬಹುದೆಂಬ ಅನುಮಾನವಿದೆ. ಈ ಬಗ್ಗೆ ಮರಣೋತ್ತರ ಪರೀಕ್ಷಾ ವರದಿಯಿಂದ ಸ್ಪಷ್ಟ ಮಾಹಿತಿಗಳು ಸಿಗಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿಯ ಕುಟುಂಬ ಮೂಲತಃ ಅಸ್ಸಾಂ ಮೂಲದವರಾಗಿದ್ದು, ತಂದೆ ಅಪಾರ್ಟ್‌ಮೆಂಟ್‌ನಲ್ಲಿ ಹೌಸ್‌ಕೀಪಿಂಗ್ ಜೊತೆಗೆ ಕಸ ಸಂಗ್ರಹ ಕೆಲಸವನ್ನೂ ಮಾಡುತ್ತಿದ್ದರು. ಕುಟುಂಬ ತಾತ್ಕಾಲಿಕ ಶೆಡ್‌ನಲ್ಲಿ ವಾಸಿಸುತ್ತಿತ್ತು ಎಂದು ತಿಳಿದುಬಂದಿದೆ. ಆರೋಪಿಗಳು ಬಾಲಕಿಗೆ ಪರಿಚಿತರಾಗಿರುವ ಸಾಧ್ಯತೆ ಇದೆ. ಆಮಿಷ ನೀಡಿ ಆಕೆಯನ್ನು ಕರೆದೊಯ್ದಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಸೇವಾ ಕಾರ್ಯಗಳ ಮೂಲಕ ಸುಮಯಾ ಪ್ರಾಪರ್ಟೀಸ್ ಎಂಡಿ ಹುಟ್ಟು ಹಬ್ಬ ಆಚರಣೆ



ಸುಮಯಾ ಪ್ರಾಪರ್ಟೀಸ್ ಪ್ರೈಲಿ. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸುಧಿ ಎಸ್.ಶೆಟ್ಟಿ ಅವರ ಹುಟ್ಟುಹಬ್ಬವನ್ನು ವಿವಿಧ ಸೇವಾ ಕಾರ್ಯಕ್ರಮಗಳ ಮೂಲಕ ಆಚರಿಸಲಾಯಿತು.

ಮೈಸೂರು, ಮಾ.29–ಸಮಾಜಮುಖಿ ಕಾರ್ಯಗಳ ಮೂಲಕ ಸುಮಯಾ ಪ್ರಾಪರ್ಟೀಸ್ ಪ್ರೈಲಿ. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಸುಧಿ ಎಸ್.ಶೆಟ್ಟಿ ಅವರ ಹುಟ್ಟುಹಬ್ಬವನ್ನು ಮೈಸೂರಿನಲ್ಲಿ ವಿವಿಧಸೇವಾ ಕಾರ್ಯಕ್ರಮಗಳ ಮೂಲಕ ಆಚರಿಸಲಾಯಿತು.

ಬೆಟ್ಟದ ಪಾದದಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಮೈಸೂರಿನ ತಿಲಕ್ ನಗರದಲ್ಲಿರುವ ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನಗಳಲ್ಲಿ ಭಕ್ತರಿಗೆ ಅನ್ನದಾನ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಅನೇಕ ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು.

ಪ್ರಾಣಿ ಸೇವೆಯಲ್ಲಿಯೂ ಸಂಸ್ಥೆ ತನ್ನ ಕಾಳಜಿಯನ್ನು ತೋರಿದ್ದು, ಪಿಂಜಾರ ಪೋಲ್ ಗೋಶಾಲೆಯಲ್ಲಿ ನೂರಾರು ಹಸುಗಳಿಗೆ ಅಹಾರ ಹಾಗೂ ಸಿಹಿ ಬೆಲ್ಲ ನೀಡಲಾಯಿತು. ಇದಲ್ಲದೆ ನಗರದೆಲ್ಲೆಡೆ ಹಸುಗಳು ಹಾಗೂ ಬೀದಿ ನಾಯಿಗಳಿಗೆ ಆಹಾರ ವಿತರಣೆ ಮಾಡುವ ಮೂಲಕ ಪ್ರಾಣಿಗಳ ಮೇಲಿನ ಪ್ರೀತಿ ವ್ಯಕ್ತಪಡಿಸಲಾಯಿತು.

ಇದೇ ಸಂದರ್ಭದಲ್ಲಿ ಎಟಿಎಂಇ ಎಂಜಿನಿಯರಿಂಗ್ ಕಾಲೇಜು ವತಿಯಿಂದ ಆಯೋಜಿಸಲಾಗಿದ್ದ 5 ಕಿ.ಮೀ. ಮ್ಯಾರಥಾನ್ ಕಾರ್ಯಕ್ರಮಕ್ಕೆ ಸುಮಯಾ ಪ್ರಾಪರ್ಟೀಸ್ ಪ್ರಾಯೋಜಕತ್ವ ನೀಡಿತು. ಈ ಕಾರ್ಯಕ್ರಮದಲ್ಲಿ ಎಲ್.ಅರುಣ್ ಕುಮಾರ್ ಹಾಗೂ ಕೆ.ಶಿವಶಂಕರ್ ಉಪಸ್ಥಿತರಿದ್ದರು.

ವ್ಯವಸ್ಥಾಪಕ ನಿರ್ದೇಶಕರಾದ ಸುಧಿ ಎಸ್.ಶೆಟ್ಟಿ ಅವರ ಸಮಾಜಮುಖಿ ಚಿಂತನೆ ಮತ್ತು ಸೇವಾ ಮನೋಭಾವವನ್ನು ಈ ಕಾರ್ಯಗಳು ಪ್ರತಿಬಿಂಬಿಸಿದವು.

ಕೆ.ಆರ್.ಕ್ಷೇತ್ರದಲ್ಲಿ ಬಿಎಲ್‌ಎ ಕಾರ್ಯಾಗಾರ

ಮೈಸೂರು, ಮಾ.29(ವಿವಿಹೆಚ್)– ಕೃಷ್ಣರಾಜ ಮಂಡಲದಲ್ಲಿ ಈವರೆಗೆ 260ಕ್ಕೂ ಹೆಚ್ಚು ಬಿಎಲ್‌ಎ– ಗಳನ್ನು ಮಾಡಲಾಗಿದ್ದು, ಕ್ಷೇತ್ರದಲ್ಲಿನ ಕೆಲಸಗಳನ್ನು, ತಮ್ಮ ಜವಾಬ್ದಾರಿಯನ್ನು ಕಾರ್ಯಕರ್ತರೂ ಪದಾಧಿಕಾರಿಗಳ ಜೊತೆಗೂಡಿ ಯಶಸ್ವಿಯಾಗಿ ಮಾಡಬೇಕು. ಇದಾದಾಗ ಮಾತ್ರ ಮತದಾರರ ಪಟ್ಟಿ ಪರಿಷ್ಕರಣೆ ಮಾಡಲು ಸಹಾಯವಾಗುತ್ತದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.



ಮೈಸೂರು ಕೃಷ್ಣರಾಜ ಮಂಡಲದಲ್ಲಿ ಬಿಎಲ್‌ಎ–2 ಕಾರ್ಯಗಾರವನ್ನು ಶ್ಯಾಮಲಾ ಎಲ್‌ಇಡಿ ಪರದೆಯಲ್ಲಿ ಪಿಪಿಟಿಯ ಮೂಲಕ ಕಾರ್ಯಕರ್ತರಿಗೆ ವಿವರಿಸಿದರು.

ಈ ಸಂಧರ್ಭದಲ್ಲಿ ನಗರ ಅಧ್ಯಕ್ಷ ಎಲ್.ನಾಗೇಂದ್ರ, ಮಂಡಲ ಅಧ್ಯಕ್ಷ ಗೋಪಾಲ್ ರಾಜೇ ಅರಸ್, ರಾಜ್ಯ ಪ್ರಕೋಷ್ಠ ಸಂಚಾಲಕ ಫಣೀಶ್, ವಿಭಾಗ ಪ್ರಭಾರಿ ಸ್ವಾಮಿ ಮರಳಪುರ, ಸಹ ಪ್ರಭಾರಿ ಇ.ಸಿ.ನಿಂಗರಾಜ್ ಗೌಡ, ಮಾಜಿ ಮೇಯರ್ ಶಿವಕುಮಾರ್, ನಗರ ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಬಿ.ಎಲ್.ಎ ಗೋಕುಲ್ ಗೋವರ್ಧನ್, ನಗರ ಉಪಾಧ್ಯಕ್ಷ ರಮೇಶ್, ವಿಶ್ವೇಶ್ವರಯ್ಯ, ಮಂಡಲ ಪ್ರಧಾನ ಕಾರ್ಯದರ್ಶಿ ಜಯರಾಮ್, ಜೈಶಂಕರ್, ನಗರ ಮಾಧ್ಯಮ ಸಹ ಸಂಚಾಲಕ ಸಂತೋಷ್ ಕುಮಾರ್.ಬಿ.ಎಂ., ಪಾಲಿಕೆ ಮಾಜಿ ಸದಸ್ಯರು, ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ಕೆ.ಪರಮೇಶ್‌ರ 'ಅಕ್ಷರ ಜ್ಯೋತಿ', ವಾಣಿ ರಾಘವೇಂದ್ರ ಅವರ 'ಶ್ರೀ ರಾಮಾಯಣ ಚರಿತಾಮೃತ ವಾಣಿ' ಕೃತಿಗಳ ಬಿಡುಗಡೆ

ಜನರ ಮೇಲೆ ಪರಿಣಾಮ ಬೀರುವ ಅಂಕಣಗಳ ರಚನೆಗೆ ಕರೆ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆ.ಪರಮೇಶ್ ಅವರ ಲೇಖನಗಳ ಸಂಗ್ರಹ ಕೃತಿ 'ಅಕ್ಷರ ಜ್ಯೋತಿ' ಹಾಗೂ ಸಿ.ವಾಣಿ ರಾಘವೇಂದ್ರ ಅವರ 'ಶ್ರೀ ರಾಮಾಯಣ ಚರಿತಾಮೃತವಾಣಿ' ಕೃತಿಯನ್ನು ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಬಿಡುಗಡೆ ಮಾಡಿದರು.

ಮೈಸೂರು, ಮಾ.29(ಎಂಟಿವೈ)– ಸತ್ಯಕ್ಕೆ ಮತ್ತು ವಾಸ್ತವತೆಗೆ ಹತ್ತಿರವಾದ ಅಂಕಣಗಳು ಜನರ ಮನದ ಮೇಲೆ ಪರಿಣಾಮ ಬೀರುವುದರಿಂದ ಅಂಕಣಕಾರರು ಉತ್ತಮ ಅಂಕಣ ಬರೆಯಲು ಗಮನಹರಿಸಬೇಕು ಎಂದು ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಆಯೋಜಿಸಿದ್ದ ಕೆ.ಪರಮೇಶ್ ಅವರ ಲೇಖನಗಳ ಸಂಗ್ರಹ ಕೃತಿ 'ಅಕ್ಷರ ಜ್ಯೋತಿ' ಹಾಗೂ ಸಿ.ವಾಣಿ ರಾಘವೇಂದ್ರ ಅವರ 'ಶ್ರೀ ರಾಮಾಯಣ ಚರಿತಾಮೃತವಾಣಿ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನವು ಅನೇಕ ಕಾರ್ಯಕ್ರಮ ಆಯೋಜಿಸಿ ಹಲವು ಪ್ರತಿಭೆಗಳನ್ನು ಗುರುತಿಸಿ, ಅನೇಕ ಕೃತಿಗಳನ್ನು ಬಿಡುಗಡೆ ಮಾಡುವ ಮೂಲಕ ಹೆಗ್ಗುರುತು ನಿರ್ಮಿಸಿದೆ ಎಂದರು.

ಇಂದು ಬಿಡುಗಡೆ ಮಾಡಲಾದ ವಾಣಿ ರಾಘವೇಂದ್ರ ರಚಿಸಿರುವ 'ಶ್ರೀ ರಾಮಾಯಣ ಚರಿತಾಮೃತವಾಣಿ' ಕೃತಿ ಅದಮ್ಯ ಪುರುಷ ಶ್ರೀರಾಮನ ಬಗ್ಗೆ ಅನೇಕ ಮಾಹಿತಿಯನ್ನೊಳಗೊಂಡಿದೆ ಎರಡು ದಿನದ ಹಿಂದಷ್ಟೇ ದೇಶದುದ್ದಗಲಕ್ಕೂ ಶ್ರೀರಾಮ ನವಮಿ ಆಚರಿಸಲಾಗಿದೆ. ರಾಮನಿಗೆ ಇನ್ನಿಲ್ಲದ ಸ್ಥಾನಮಾನ ಕಲ್ಪಿಸಿಕೊಟ್ಟಿದ್ದೇವೆ. ಆ ವ್ಯಕ್ತಿತ್ವವೇ ಅಂತದ್ದು, ಮರ್ಯಾದಾ ಪುರುಷ, ಆದರ್ಶ ಪುರುಷ ಎನ್ನುತ್ತೇವೆ. ವ್ಯಕ್ತಿತ್ವಕ್ಕೆ ಉನ್ನತ ಮಟ್ಟದಲ್ಲಿ ಏನೇನು ಹೇಳಬೇಕೋ ಅದನ್ನೆಲ್ಲವನ್ನು ಶ್ರೀರಾಮನ ವ್ಯಕ್ತಿತ್ವಕ್ಕೆ ಹೇಳಲಾಗಿದೆ. ಶ್ರೀರಾಮ ಎಂಬ ಎರಡು ಅಕ್ಷರವು ಮಾನವೀಯತೆಗೆ ತಳಹದಿ ಹಾಕಿಕೊಟ್ಟಿದೆ. ಈ ಹಿನ್ನೆಲೆ ಯಲ್ಲಿ ಎಲ್ಲ ಕಾಲಕ್ಕೂ ರಾಮಾಯಣ ಕೃತಿ ಸಲ್ಲುತ್ತದೆ. ಕೃತಿಯಲ್ಲಿ ಶ್ರೀರಾಮನ ಕುರಿತು ಅಂದಿನಿಂದ ಇಂದಿನವರೆಗೆ ಬಂದಿರುವ ಚರಿತ್ರೆ ನೆನಪಿಸುತ್ತದೆ ಎಂದು ವಿವರಿಸಿದರು.

ವಿವಿಧ ಪತ್ರಿಕೆಗಳಿಗೆ ಕೆ.ಪರಮೇಶ್ ಅವರು ಬರೆದ ಲೇಖನಗಳನ್ನು ಸಂಗ್ರಹಿಸಿ 'ಅಕ್ಷರ ಜ್ಯೋತಿ' ಪುಸ್ತಕ ಹೊರ ತಂದಿದ್ದಾರೆ. ಪತ್ರಿಕೆಗಳಲ್ಲಿ ಪ್ರಕಟವಾಗುವ ಅಂಕಣಗಳು ಮಹತ್ವದ ಪಾತ್ರ ವಹಿಸಲಿದ್ದು, ಅವು ಜನರ ಮೇಲೆ ಪ್ರಭಾವ ಬೀರುತ್ತವೆ. ಅಂಕಣಕ್ಕೆ ದೊಡ್ಡ ಇತಿಹಾಸವೆ ಇದೆ. ಹಮಾ ನಾಯಕ್, ಹೆಚ್‌ಎಸ್ಕೆ ಅವರು ಬರೆಯುತ್ತಿದ್ದ ಅಂಕಣ ಉತ್ತಮವಾಗಿತ್ತು. ಸೀಮಿತವಾದ ಪದಗಳಲ್ಲಿ ದೇಶ, ವ್ಯಕ್ತಿಚಿತ್ರ, ಸಂಸ್ಥೆ ಬಗ್ಗೆಯೂ ಅತ್ಯುತ್ತಮ ಚಿತ್ರಣವನ್ನು ಕೆಲವೇ ಪದಗಳಲ್ಲಿ ಕಟ್ಟಿಕೊಡುವ ಪರಂಪರೆ ಹೊಂದಿದ್ದರು. ಇದರಿಂದ ಅಂಕಣಕಾರರಿಗೆ ಕೇಂದ್ರ ಸಾಹಿತ್ಯ ಪ್ರಶಸ್ತಿ ಲಭಿಸಿರುವುದನ್ನು ಗಮನಿಸಿದರೆ, ಅಂಕಣದ ವಿಸ್ತಾರ, ಮಹತ್ವ ಎಷ್ಟಿದೆ ಎಂದು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಹೊಸ ಅಂಕಣಕಾರರು ಕೆಲವೇ ಪದಗಳಲ್ಲಿ ಅಂಕಣವನ್ನು ಕಟ್ಟಿಕೊಡಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಲೇಖಕರು, ಅಂಕಣಕಾರರು ಹಮ್ಮಿ ಬಿಮ್ಮು ಇಲ್ಲದಂತೆ ವರ್ತಿಬೇಕು. ಇತ್ತೀಚಿನ ದಿನಗಳಲ್ಲಿ ಒಂದೆರಡು ಕವನ ಬರೆದವರು ಮಹಾಕವಿಗಳಾದಂತೆ ವರ್ತಿಸುತ್ತಾರೆ. ಆದರೆ ಅಕ್ಷರ ಕೃಷಿಯಲ್ಲಿ ತೊಡಗಿಸಿಕೊಂಡವರು ದೊಡ್ಡಸ್ತಿಕೆ ತೋರಬಾರದು ಎಂದರು.

ಕಾರ್ಯಕ್ರಮದಲ್ಲಿ ಡಾ. ಸಹನಾ ಭಟ್ ಅವರಿಗೆ 'ನಾಟ್ಯ ಚೂಡಾಮಣಿ ಪ್ರಶಸ್ತಿ', ಗ್ರೀಷ್ಮ ತಟ್ಟೆ ಅವರಿಗೆ 'ಯುವಶ್ರೀ ಪ್ರಶಸ್ತಿ' ಹಾಗೂ ಎಂ.ಎಸ್.ನಿಶಾಂತ್ ಅವರಿಗೆ 'ಬಾಲಶ್ರೀ ಪ್ರಶಸ್ತಿ' ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಎಂ.ಬಿ.ಸಂತೋಷ್ ವಹಿಸಿದ್ದರು.

ಈ ಸಂದರ್ಭದಲ್ಲಿ ನಿವೃತ್ತ ತಹಶೀಲ್ದಾರ್ ಡಾ.ವಿ.ರಂಗನಾಥ್, ರಾಮಕೃಷ್ಣ ವಿದ್ಯಾಶಾಲಾ ಅಧ್ಯಾಪಕ ಸಗೂರು ರಮೇಶ್, ಸಹಾಯಕ ಪ್ರಾಧ್ಯಾಪಕ ಕೆ.ಪರಮೇಶ್, ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಡಾ.ಸಿ.ವಾಣಿ ರಾಘವೇಂದ್ರ, ಪ್ರಧಾನ ಕಾರ್ಯದರ್ಶಿ ಬಿ.ಶೋಭಾ, ಎನ್.ಆರ್. ರೂಪಶ್ರೀ, ಸೌಗಂಧಿಕಾ, ಮಮತಾ, ಪನ್ನಗ ಎಸ್.ವಿ ಹಾಗೂ ಇನ್ನಿತರು ಉಪಸ್ಥಿತರಿದ್ದರು.

ಆನ್‌ಲೈನ್ ಮೂಲಕ ಹೋಟೆಲ್ ರೂಂ ಕಾಯ್ದಿರಿಸುವ ಮುನ್ನ ಎಚ್ಚರ!

ಖಚಿತಪಡಿಸಿಕೊಂಡ ನಂತರವೇ ಹಣ ಪಾವತಿಸಿ; ವಂಚನೆಯಿಂದ ಪಾರಾಗಿ

ಮೈಸೂರು, ಮಾ.29– ವೆಬ್‌ಸೈಟ್ ಮೂಲಕ ಹೋಟೆಲ್ ರೂಂ ಕಾಯ್ದಿರಿಸಿ, ಮುಂಗಡ ಹಣ ಪಾವತಿಸುವ ಮುನ್ನ ಎಚ್ಚರವಿರಲಿ. ನಿಮಗೆ ಗೊತ್ತೇ ಆಗದಂತೆ ನಯವಾಗಿ ಯಾಮಾರಿಸುವ ಖದೀಮರು ಕಾದಿರುತ್ತಾರೆ.

ವರ್ಷವಿಡೀ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ನಿಗಾ ವಹಿಸಿರುತ್ತಾರೆ. ಪರೀಕ್ಷೆ ಮುಗಿದ ನಂತರ ಕೆಲ ದಿನಗಳ ಕಾಲ ಮಕ್ಕಳೊಂದಿಗೆ ಪ್ರವಾಸ ಹೋಗುವುದು ಸಾಮಾನ್ಯ. ಈ ವೇಳೆ ತಾವು ಪ್ರವಾಸಕ್ಕೆ ತೆರಳುವ ಸ್ಥಳಗಳಲ್ಲಿ ಉಳಿದುಕೊಳ್ಳಲು ಹೋಟೆಲ್ ರೂಂ ಕಾಯ್ದಿರಿಸಿಕೊಳ್ಳುತ್ತಾರೆ. ಗೂಗಲ್ ಮೂಲಕ ಹುಡುಕಾಟ ನಡೆಸಿ, ತಮಗೆ ಸರಿ ಹೊಂದುವ ಹೋಟೆಲ್‌ನಲ್ಲಿ ಕೊಠಡಿ ಬುಕ್ ಮಾಡಿ, ಆನ್‌ಲೈನ್ ಮೂಲಕವೇ ಮುಂಗಡ ಹಣ ವರ್ಗಾಯಿಸುತ್ತಾರೆ. ಬೇಸಿಗೆ ರಜೆ ವೇಳೆ ಹೋಟೆಲ್‌ಗಳು ಬಹುತೇಕ ಭರ್ತಿಯಾಗುವುದರಿಂದ ತರಾತುರಿಯಲ್ಲಿ ಏನನ್ನೂ ಪರಿಶೀಲಿಸುವುದಿಲ್ಲ. ಹೀಗೆ ಗೂಗಲ್‌ನಲ್ಲೇ ಹೋಟೆಲ್‌ಗಳನ್ನು ಹುಡುಕಿ, ಕೊಠಡಿ ಕಾಯ್ದಿರಿಸುವವರನ್ನೇ ಗುರಿಯಾಗಿಸಿಕೊಂಡು, ಆನ್‌ಲೈನ್ ಖದೀಮರು ಹಣ ದೋಚುತ್ತಿದ್ದಾರೆ.

ಹೇಗೆ ವಂಚಿಸುತ್ತಾರೆ?: ಅಸಲಿ ಹೋಟೆಲ್‌ಗಳಂತೆಯೇ ಕಾಣುವ ನಕಲಿ ಸೈಟ್‌ಗಳನ್ನು ಸೃಷ್ಟಿಸಿ, ಆನ್‌ಲೈನ್‌ನಲ್ಲಿ ಹರಿಬಿಡುತ್ತಾರೆ. ಆನ್‌ಲೈನ್ ಹೋಟೆಲ್ ಬುಕ್ಕಿಂಗ್‌ಗೆ ಮುಂದಾಗುವ ಗ್ರಾಹಕರು ಅಪ್ಪಿತಪ್ಪಿ ಈ ನಕಲಿ ಸೈಟ್‌ಗಳನ್ನು ಸಂಪರ್ಕಿಸಿದರೆ ಸಾಕು ಹೇಗಾದರೂ ಮಾಡಿ ವಂಚಿಸುತ್ತಾರೆ. ಅಗ್ಗದ ಬೆಲೆ ಆಮಿಷವೊಡ್ಡಿ ಹೋಟೆಲ್ ಕೊಠಡಿ ಬುಕ್ ಮಾಡುವಂತೆ ನೋಡಿಕೊಳ್ಳುತ್ತಾರೆ. ಬುಕ್ಕಿಂಗ್ ಮಾಡಿದ ಕೂಡಲೇ ಕ್ಯೂಆರ್ ಕೋಡ್ ಅಥವಾ ಯುಪಿಐ ಮೂಲಕ ಮುಂಗಡ ಹಣ ಕಳುಹಿಸಲು ತಿಳಿಸುತ್ತಾರೆ. ಸದ್ಯ ಯಾವುದಾದರೂ ಹೋಟೆಲ್‌ನಲ್ಲಿ ರೂಂ ಸಿಕ್ಕಿದರೆ ಸಾಕು




ಎನ್ನುವವರು ಏನನ್ನೂ ಯೋಚಿಸದೆ ಥಟ್ಟನೆ ಆನ್‌ಲೈನ್ ಪೇಮೆಂಟ್ ಮೂಲಕ ಮುಂಗಡ ಹಣ ಪಾವತಿಸುತ್ತಾರೆ. ತಾವು ಬುಕ್ ಮಾಡಿದ್ದ ಹೋಟೆಲ್‌ಗೆ ತೆರಳಿ ವಿಚಾರಿಸಿದಾಗ ತಾವು ಮೋಸ ಹೋಗಿರುವುದು ಗೊತ್ತಾಗಿ ಕಂಗಾಲಾಗುತ್ತಾರೆ. ಇಲ್ಲವೇ ತಾವು ಬುಕ್ ಮಾಡಿದ್ದ ಹೆಸರಿನ ಯಾವುದೇ ಹೋಟೆಲ್ ಇಲ್ಲದಿರುವುದನ್ನು ತಿಳಿದು ಪೆಚ್ಚಾಗುತ್ತಾರೆ. ಇಂತಹ ಘಟನೆಗಳು ದೇಶದ ವಿವಿಧೆಡೆ ವರದಿಯಾಗುತ್ತಿವೆ.


ಖಚಿತಪಡಿಸಿಕೊಂಡು ಹಣ ಕಳುಹಿಸಿ: ಹೋಟೆಲ್‌ನಲ್ಲಿ ವಸತಿ ನೀಡುವ ನೆಪದಲ್ಲಿ ನಕಲಿ ವೆಬ್‌ಸೈಟ್ ಸೃಷ್ಟಿಸಿ, ಅದರಲ್ಲಿ ಮೊಬೈಲ್ ನಂಬರ್ ನೀಡುವ ಮೂಲಕ ವಂಚಿಸುವ ಜಾಲದ ಬಗ್ಗೆ ಎಚ್ಚರವಿರಲಿ. ವೆಬ್‌ಸೈಟ್‌ನಲ್ಲಿರುವ ನಂಬರ್‌ಗೆ ಕರೆ ಮಾಡುವ ಮುನ್ನ ಪರಿಶೀಲಿಸಿಕೊಳ್ಳಿ. ಅತಿಯಾದ ರಿಯಾಯಿತಿ, ಅನುಮಾನಾಸ್ಪದ ಮಾತುಗಳು, ತಕ್ಷಣ ಹಣ ಪಾವತಿಸಲು ಒತ್ತಡ ಹೇರುತ್ತಿದ್ದರೆ ಸ್ವಲ್ಪ ಯೋಚಿಸಿ. ಹೋಟೆಲ್‌ಗಳು ಸಾಮಾನ್ಯವಾಗಿ ನೇರ ಬ್ಯಾಂಕ್ ವರ್ಗಾವಣೆ ಅಥವಾ ಅಧಿಕೃತ ಪಾವತಿ ಗೇಟ್‌ವೇ ವಿಧಾನ ಬಳಸುತ್ತವೆಯೇ ಹೊರತು ವಾಟ್ಸಾಪ್ ಮೂಲಕ ಕ್ಯೂಆರ್ ಕೋಡ್ ಕಳುಹಿಸುವುದಿಲ್ಲ. ಆದ್ದರಿಂದ ಹೋಟೆಲ್ ಆನ್‌ಲೈನ್ ಬುಕ್ಕಿಂಗ್ ವೇಳೆ ಯಾರಾದರೂ ವೈಯಕ್ತಿಕ ಯುಪಿಐ ಅಥವಾ ಕ್ಯೂಆರ್ ಕೋಡ್ ಕಳುಹಿಸಿದರೆ ಒಮ್ಮೆ ಪರೀಕ್ಷಿಸಿ. ಏಕಾಏಕಿ ಹಣ ವರ್ಗಾಯಿಸದೆ ಗೂಗಲ್ ಮ್ಯಾಪ್ಸ್ ಮೂಲಕ ಹೋಟೆಲ್‌ನ ಅಧಿಕೃತ ನಂಬರ್ ಹುಡುಕಿ, ತಮ್ಮ ಬುಕ್ಕಿಂಗ್ ದೃಢೀಕರಿಸಿಕೊಂಡು ಮುಂದುವರೆಯಿರಿ. ಏನಾದರೂ ವಂಚನೆಗೆ ಒಳಗಾದರೆ ತಕ್ಷಣವೇ 1930ಗೆ ಕರೆ ಮಾಡಿ ದೂರು ನೀಡಿ.

> ಆನ್‌ಲೈನ್ ಮೂಲಕ ಹೋಟೆಲ್ ಕೊಠಡಿ ಕಾಯ್ದಿರಿಸುವ ವೇಳೆ ಖಚಿತಪಡಿಸಿಕೊಳ್ಳಬೇಕು. ಅಧಿಕೃತ ವೆಬ್ ಸೈಟ್‌ನಲ್ಲಿರುವ ಲ್ಯಾಂಡ್ ಲೈನ್ ದೂರವಾಣಿ ಸಂಖ್ಯೆಗೆ ಕರೆ ಮಾಡಿ, ಸ್ಪಷ್ಟಪಡಿಸಿಕೊಳ್ಳಬೇಕು. ಒಂದು ವೇಳೆ ಹೋಟೆಲ್ ವೆಬ್‌ಸೈಟ್ ಹ್ಯಾಕ್ ಆಗಿದ್ದರೆ ಆ ಬಗ್ಗೆ ಸಂಬಂಧಪಟ್ಟ ಹೋಟೆಲ್‌ನವರು ಮಾಹಿತಿ ಪ್ರಕಟಿಸಿ, ಪೊಲೀಸರಿಗೆ ದೂರು ನೀಡಬೇಕು.
> 
> - ಸೀಮಾ ಲಾಟ್ಕರ್, ಪೊಲೀಸ್ ಆಯುಕ್ತೆ ಮೈಸೂರು ನಗರ.


ಮೈಸೂರಲ್ಲಿ ಪ್ರಕರಣ ದಾಖಲು

ಮೈಸೂರು,ಮಾ.29(ಪಿಎಂ)– ನಗರದ ರೆಸಾರ್ಟ್‌ವೊಂದರ ಹೆಸರಿನಲ್ಲಿ ನಕಲಿ ವೆಬ್‌ಸೈಟ್ ಮತ್ತು ನಕಲಿ ಇ ಮೇಲ್ ಐಡಿ ಕ್ರಿಯೇಟ್ ಮಾಡಿ ಹಲವು ಗ್ರಾಹಕರಿಂದ 6 ಲಕ್ಷ ರೂ. ಪಾವತಿಸಿಕೊಂಡು ವಂಚಿಸಿರುವ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸದರಿ ರೆಸಾರ್ಟ್ ಉದ್ಯೋಗಿ ನೀಡಿದ ದೂರಿನನ್ವಯ ಮಾ.27ರಂದು ಎಫ್‌ಐಆರ್ ದಾಖಲಾಗಿದೆ. ನಮ್ಮ ರೆಸಾರ್ಟ್‌ನ ಅಧಿಕೃತ ವೆಬ್‌ಸೈಟ್ ಬದಲಿಗೆ ನಕಲಿ ವೆಬ್‌ಸೈಟ್, ಇ–ಮೇಲ್ ಐಡಿ ಕ್ರಿಯೇಟ್ ಮಾಡಿಕೊಂಡು ಹಲವು ಮೊಬೈಲ್ ನಂಬರ್‌ಗಳನ್ನು ಬಳಸಿಕೊಂಡು ಹಲವು ಗ್ರಾಹಕರನ್ನು ವಂಚಿಸಿದ್ದಾರೆ. ಗ್ರಾಹಕರಿಂದ ಬುಕ್ಕಿಂಗ್ ಮಾಡಿಸಿಕೊಂಡು ಅಂದಾಜು 6 ಲಕ್ಷ ರೂ. ಪಾವತಿಸಿಕೊಂಡು ವಂಚಿಸಿದ್ದಾರೆ ಎಂದು ರೆಸಾರ್ಟ್ ಉದ್ಯೋಗಿ ದೂರಿನಲ್ಲಿ ಆರೋಪಿಸಿದ್ದಾರೆ.





Actual EMI: ₹80,000/month
ಕೇವಲ ರೂ. 41000/–
ಪ್ರತಿ ತಿಂಗಳಿಗೆ ಪಾವತಿಸಿ
After Rental Income + Tax Benefits
ಸೂಚನೆ! ಇಂದೇ ಬುಕ್ ಮಾಡಿ ಹಾಗೂ ಏಪ್ರಿಲ್ 1ರ ಮೊದಲು ₹5–10 ಲಕ್ಷದವರೆಗೆ ಉಳಿತಾಯ ಮಾಡಿ
RERA REGISTERED
MUDA APPROVED





Infrared Cooktop
Induction Cooktop
Prestige



ARIHANTH ELECTRICALS